a) Questions

b) Legislative Business-Consideration and passing of Karnataka Co-operative Societies (Amendment Bill, 1984.

c) General Discussion on Budget (to conclude)

Afternoon Sitting: from 2 p m to 6 p m Reply to General Discussion on Budget.

From 27 th February, 1984 onwards the House will meet from 11.00 a.m to 6.00 p.m and take up the Demands for Grants for the year 1984 85. A detailed programme of Demands for Grants relating to various Departments will be separately circulated to the Members.

Now the House stands adjourned to meet at 2.15 p.m.

(The House adjourned at Five minutes past one of the Clock to meet again at 2.15 P.m.)

(The House re-assembled at 2:30 p.m.)

(MR. DEPUTY SPEAKER-IN THE CHAIR)

## General Discussion on The Budget-1984-85

ಉಪಾಧ್ಯಕ್ಷರು.--ಶ್ರೀಮಾನ್ ಬಂಗಾರಪ್ಪನವರೇ ತುವು ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ --ಸ್ವಾಮಿ, ಶ್ರೀಮಾನ್ ಧನಂಜಯ ಕುಮಾರ್‌ರವರು 3 ಗಂಟೆಗೆ ಅರ್ಜೆಂಟಾಗಿ ಹೋಗಬೇಕೆಂದು ನನ್ನನ್ನು ಕೇಳಿಕೊಂಡರು. ಆದುದರಿಂದ ಅವರು ಮೊದಲು ಮಾತನಾಡಲು ನಾನು ಒಪ್ಪಿಗೆ ಕೊಟ್ಟಿದ್ದೇನೆ

† ಶ್ರೀ ಎಂ. ಎಸ್ ಕೃಷ್ಣನ್ --ಹಾಗೆಯೇ ಶ್ರೀಮಾನ್ ಭೀಮಣ್ಣ ಖಂಡ್ರೆಯವರು ನಾನು ಮಾತನಾಡಬೇಕೆಂದು ನನ್ನನ್ನು ಕೇಳಿಕೊಂಡರು, ಆದುದರಿಂದ ನನ್ನ ಪರವಾಗಿ ಅವರು ಮಾತನಾಡಲು ನಾನು ಒಪ್ಪಿಗೆ ಕೊಟ್ಟಿದ್ದೇನೆ

ಉಪಾಧ್ಯಕ್ಷರು.--ನೀವು ಕೊಟ್ಟಿದ್ದರೆ ಸರಿ. ಈಗ ಮಾನ್ಯ ಧನಂಜಯ ಕುಮಾರ್‌ರವರು ಮಾತನಾಡಲಿ.

ಶ್ರೀ ವಿ. ಧನಂಜಯಕುಮಾರ್ (ಮಂಗಳೂರು) --ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇದು ಜನತೆಯ ಸರ್ಕಾರ ಹಾಗೂ ಇದು ಜನತಾ ಸರ್ಕಾರದ ಪ್ರಥಮ ಬಜೆಟ್ ಎಂದು ಕಳೆದ ಸಾರಿ ಹೇಳಿದರು. ಸರ್ಕಾರ ಈ ಬಗ್ಗೆ ಏನು ಚಿಂತನೆ ಮಾಡುತ್ತದೆ ಅದು ಮುಂದಿನ ಸಾರಿ ಪ್ರತಿಬಿಂಬಿಸುತ್ತದೆ ಎಂದು ಸಹ ಹೇಳಿದ್ದಾರೆ. ಕಳೆದ ವರ್ಷ ಏನು ಕೆಲಸ ಮಾಡುವುದಕ್ಕೆ ಸಾಧ್ಯವಾಗಲಿಲ್ಲ, ಅದನ್ನು ಈ ವರ್ಷದ ಬಜೆಟ್‌ನಲ್ಲಿ ಸೇರಿಸಿದ್ದಾರೋ ಇಲ್ಲವೋ ಎಂಬುದನ್ನು ತಿಳಿಸಿ ನೋಡಲಾಗಿದೆ. ಈ ಸರ್ಕಾರ ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದರಲ್ಲಿ ಸ್ವಲ್ಪಮಟ್ಟಿಗೆ ಸಫಲವಾಗಿದೆ ಅನ್ನುವ ಮಾತನ್ನು ನಮ್ಮ ನಾಯಕರು ಹೇಳಿದ್ದಾರೆ ಅದೇ ರೀತಿಯಲ್ಲಿ ಹಿಂದಿನ ಸರ್ಕಾರ ಅಧಿಕಾರ ಬಿಟ್ಟು ಹೋಗುವ ಸಂದರ್ಭದಲ್ಲಿ ಸುಮಾರು 43 ಕೋಟಿ ರೂಪಾಯಿ ಕೊರತೆಯನ್ನು ತೋರಿಸಿದ್ದಾರೆ, ಅದರಿಂದಾಗಿ ಇದರ ಬಗ್ಗೆ ಏನು ಒಂದು ನಿರೀಕ್ಷಣೆಯನ್ನು ಮುಟ್ಟಬೇಕಾಗಿತ್ತೋ ಅದು ಮುಟ್ಟಲಿಕ್ಕೆ ಆಗಲಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ ಆದರೂ ಕೂಡ ಈಪ್ರೋತ್ತಿನ ಹಣಕಾಸಿನ ಪರಿಸ್ಥಿಯಲ್ಲಿ ಸರ್ವೇಸಾಮಾನ್ಯವಾಗಿ ನೋಡಿದರೆ ಇದು ಒಂದು ಉತ್ತಮವಾದ ಬಜೆಟ್ ಎಂದು ಹೇಳಲೇ ಬೇಕಾಗುತ್ತದೆ. ಆದರೆ ಕೆಲವು ವಿಚಾರಗಳಲ್ಲಿ ಸರ್ಕಾರ ಏನು ಮಾಡಿ ತೋರಿಸಿದೆ ಅಥವಾ ಸರ್ಕಾರ ಏನು ಹೇಳಿಕೊಂಡು ಬಂದಿದೆ ಅದರ ಬಗ್ಗೆ ಒಂದು ಸ್ಪಷ್ಟವಾದ ನಿಲವು ಈ ಬಜೆಟಿನಲ್ಲಿ ಮುಡಿಸಲಿಕ್ಕೆ ಇನ್ನೂ ಸಾಧ್ಯವಾಗಲಿಲ್ಲ ಎನ್ನತಕ್ಕಂಥಾ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾತ್ತದೆ. ಈವೊತ್ತು ರೈತರ ವಿಚಾರದಲ್ಲಿ ಹೇಳಬೇಕಾದರೆ ಅವರಿಗೆ ಸಾಕಷ್ಟು ಪರಿಹಾರಗಳನ್ನು ನೀವು ಕೊಟ್ಟಿದ್ದೀರಿ ಅವರು ಈಗ ಕೊಡತಕ್ಕಂಥಾ ಸಾಲವನ್ನು ಮುಂದಿನ ಮಾರ್ಚ್ 31 ರೊಳಗೆ ಮರುಪಾವತಿ ಮಾಡುವಂತೆ ಅದನ್ನು ವಿಸ್ತರಣೆ ಮಾಡಿದ್ದೀರಿ.

ಇಷ್ಟೇ ಅಲ್ಲದೆ ಅವರಿಗೆ ಬಡ್ಡಿ, ಸುಸ್ತಿ ಬಡ್ಡಿ ಇವೆಲ್ಲಾ ಮನ್ನಾ ಮಾಡಿದ್ದೇವೆ ಎಂದು ಹೇಳಿದ್ದಿರಿ. ಇವೆಲ್ಲಾ ಸ್ವಾಗತಾರ್ಹವಾದುದೇ. ಈವೊತ್ತಿನ ದಿವಸ ಸಂಕಷ್ಟದಲ್ಲಿರುವ ರೈತರು ಋಣಮುಕ್ತರಾಗಬೇಕಾಗಿದ್ದರೆ, ಅವರು ಮುಂದಿನ ದಿವಸವಲ್ಲಾದರೂ ಕೂಡ ಸಂತೋಷದಾಯಕವಾಗಬೇಕಾಗಿದ್ದರೆ ಈವಾಗ ತಾವು ಅವರು ಕೊಡಬೇಕಾಗಿರುವ ಸಾಲವನ್ನು ಮಾರ್ಚ್ 31ರ ತನಕ ಏನು ವಿಸ್ತರಣೆ ಮಾಡಿದ್ದೀರೋ ಅದನ್ನು ಜೂನ್ 30ಗಳ ಅಖೈರನವರೆಗಾದರೂ ಕೂಡ ಮುಂದುವರೆಸಿದರೆ ಮಾತ್ರ ಸಾಧ್ಯವಾಗುತ್ತದೆ. ಆರೀತಿ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಇನ್ನು ನೀರಾವರಿ ಯೋಜನೆಗಳ ಬಗ್ಗೆ ಮಾತನಾಡಬೇಕಾದರೆ ಈ ಬೃಹತ್ ನೀರಾವರಿ ಯೋಜನೆಗಳಿಗೆ ಹೆಚ್ಚು ಹಣವನ್ನು ಒದಗಿಸಲಾಗಿದೆ ಎಂದು ಹೇಳಿದ್ದೀರಿ. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಬಗ್ಗೆ ಹೇಳುವುದಾದರೆ ಈ ಬೃಹತ್ ನೀರಾವರಿ ಯೋಜನೆಗಳನ್ನು ನಮ್ಮ ಜಿಲ್ಲೆಯಲ್ಲಿ ಕೈಗೊಳ್ಳುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಇದರ ಬಗ್ಗೆ ಸರ್ಕಾರವನ್ನು ನಾವು ಹಲವಾರು ಭಾರಿ ಕೇಳಿಕೊಂಡಿದ್ದೇವೆ. ನಮ್ಮ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡು ವಿಶೇಷವಾಗಿ ವೆಂಟೆಡ್ ಡ್ಯಾಮ್ಸ್ ಅನ್ನು ಹೆಚ್ಚು ಕಟ್ಟಿಕೊಡಬೇಕೆಂದು ಹೇಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರದ ಕೊರತೆ ಇದೆ. ನಮ್ಮ ಜಿಲ್ಲೆಯಲ್ಲಿ ನೀರಾವರಿ ಸೌಕರ್ಯ ಇಲ್ಲದೆ ಆಹಾರಧಾನ್ಯ ಬೆಳೆಯುವುದಕ್ಕೆ ಅವಕಾಶ ಇಲ್ಲ. ಆದುದರಿಂದ ನಾನು ಮೊದಲೇ ಹೇಳಿದ ಹಾಗೆ ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ ಬೃಹತ್ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಅವಕಾಶ ಇಲ್ಲವಾದ್ದರಿಂದ ಹೆಚ್ಚು ಹೆಚ್ಚು ವೆಂಟೆಡ್ ಡ್ಯಾಮ್ಸ್‌ಗಳನ್ನು ಕಟ್ಟಬೇಕೆಂದು ಹೇಳುತ್ತೇನೆ.

ಡಾ ವಿ ಎಸ್. ಆಚಾರ್ಯ.—ಅಗ್ರಿಕಲ್ಚರ್ ಮತ್ತು ಸಿರಿಕಲ್ಚರ್ ಬಗ್ಗೆ ನಾವು ಕೇಳುತ್ತಾ ಇಲ್ಲ. ನಮ್ಮ ಕಡೆ ಮೈನರ್ ಇರಿಗೇಷನ್ ಒಂದು ಬಿಟ್ಟರೆ ಬೇರೆ ಯಾವುದೂ ಸಹ ಹೆಚ್ಚು ಪ್ರಯೋಜನವಾಗುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ನೀವು ಅಗ್ರಿಕಲ್ಚರ್ ಮತ್ತು ಸಿರಿಕಲ್ಚರ್ ಬಗ್ಗೆ ಹೇಳಬೇಕಾದರೆ ಇಲ್ಲಿ ಅದರ ಕಡೆ ಗಮನ ಹರಿಸಲು ಸಂಬಂಧಪಟ್ಟ ಮಂತ್ರಿಗಳು ಯಾರೂ ಇಲ್ಲವಲ್ಲಾ.

ಶ್ರೀ ವಿ. ಧನಂಜಯಕುಮಾರ್.—ಅದಕ್ಕೆ ಸಂಬಂಧಪಟ್ಟವರು ಯಾರು ಇಲ್ಲದಿದ್ದರೂ ಕೂಡ ಸಂಕಷ್ಟ ಪರಿಹಾರ ಮಂತ್ರಿಗಳು ಇದ್ದಾರಲ್ಲಾ. ಅವರೇ ಸರ್ವಜ್ಞ ಮಂತ್ರಿಗಳು ಎಂದು ನಾವು ತಿಳಿದುಕೊಂಡು ಹೇಳುತ್ತೇನೆ. ಅವರು ನಾವು ಹೇಳಿದ್ದೆಲ್ಲಾ ಬರೆದುಕೊಂಡು ನಮ್ಮ ಸಂಕಷ್ಟವನ್ನು ಪರಿಹಾರ ಮಾಡಿಕೊಡುತ್ತಾರೆಂದು ತಿಳಿದು ಕೊಂಡಿದ್ದೇನೆ.

ನಾನು ಮತ್ತೆ ಮೈನರ್ ಇರ್ರಿಗೇಷನ್ ಮೇಲೆ ಮಾತನಾಡುತ್ತೇನೆ. ನಮ್ಮಲ್ಲಿರುವಂಥಾ ಕೆರೆಗಳು ಏನು ಇವೆ ಅದರಲ್ಲಿ ಹೂಳು ಎತ್ತುವುದರ ಮೂಲಕ ಹೆಚ್ಚು ವೆಚ್ಚ ಇಲ್ಲದೆ ನೀರಾವರಿ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಅದನ್ನು ತಾವು ಕೈಗೆತ್ತಿಕೊಂಡು ಆ ಕೆಲಸ ಮಾಡಿಕೊಡಬೇಕೆಂದು ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ ಮಹದೇವ್.—ಸ್ವಾಮಿ ಈಗ ಇಲ್ಲಿ ಇಬ್ಬರೇ ಇಬ್ಬರು ಮಂತ್ರಿಗಳು ಹಾಜರಾಗಿದ್ದಾರೆ. ಬೇರೆಯವರು ಹಾಜರಾಗಬಾರದೇ ? ನಿನ್ನೆಯೂ ಹಾಗೆ ಆಯಿತು.

ಶ್ರೀ ವಿ ಧನಂಜಯಕುಮಾರ್.—ಒಬ್ಬರೇ ಇದ್ದರೂ ಸಾಕು. ಅವರು ನೋಟ್ ಮಾಡಿಕೊಳ್ಳುತ್ತಾರೆ. ಸಮಾಧಾನವಾದ ಉತ್ತರ ಕೊಡುತ್ತಾರೆ ಅನ್ನುವ ನಂಬಿಕೆ ನನಗೆ ಇದೆ. ಈ ಸಂದರ್ಭದಲ್ಲಿ ನಾನು ಸರ್ಕಾರದ ಗಮನಕ್ಕೆ ತರಬೇಕಾದರೆ ಇದುವರೆಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರ ಹೋರಾಟ ಪ್ರಾರಂಭ ಇನ್ನೂ ಆಗಿಲ್ಲ. ಅವರು ಅನಿಶ್ಚಿತ ಪರಿಸ್ಥಿತಿಯಲ್ಲಿದ್ದಾರೆ. ಅದಕ್ಕೆ ತಾವು ಈಗ ಪರಿಹಾರವನ್ನು ಕಂಡುಹಿಡಿದರೆ ಮುಂದಿನವರ್ಷದಲ್ಲಾದರೂ ಕೂಡ ರೈತರ ಸಮಸ್ಯೆ ಸ್ವಲ್ಪಮಟ್ಟಿಗೆ ಪರಿಹಾರವಾಗಬಹುದು ಅನ್ನುವ ಆಸೆ ಇದೆ. ಸರ್ಕಾರ ಈ ಬಗ್ಗೆ ಶೀಘ್ರ ಕಾರ್ಯಕ್ರಮ ಕೈಗೊಂಡು ಇದನ್ನು ಆದಷ್ಟು ಬೇಗನೆ ನಿವಾರಿಸಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಇನ್ನು ನಮ್ಮ ಜಿಲ್ಲೆಯ ಬ್ರಹ್ಮಾವರದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಒಂದು ಸಕ್ಕರೆ ಕಾರ್ಖಾನೆ ಕಾರ್ಯಾಚರಣೆಗೆ ಬರುವ ಹಂತದಲ್ಲಿದೆ. ಈ ಕೆಲಸವನ್ನು ಜಾಗ್ರತೆ ಮಾಡಿ ಮುಗಿಸಬೇಕೆಂದು ನಾವು ಕೇಳಿದಾಗ ನೀವು ಸಾಕಷ್ಟು ಕಬ್ಬನ್ನೇ ಬೆಳೆಯುತ್ತಿಲ್ಲ ಇನ್ನು ಕಾರ್ಖಾನೆ ಯಾವ ರೀತಿ ಕೆಲಸ ಮಾಡಲು ಸಾಧ್ಯ ಎಂದು ಮಾನ್ಯ ಮಂತ್ರಿಗಳು ನಮ್ಮನ್ನೇ ಕೇಳಿದರು. ಈ ದೃಷ್ಟಿಯಿಂದಲಾದರೂ ಕೂಡ ನಮ್ಮ ಭಾಗದಲ್ಲಿ ನೀರಾವರಿ ಯೋಜನೆಗಳನ್ನು ಕೈಗೊಂಡರೆ ಸಾಕಷ್ಟು ಕಬ್ಬನ್ನು ಬೆಳೆಯಲು ಅವಕಾಶವಾಗುತ್ತದೆ. ಆದ್ದರಿಂದ ಇದರ ಕಡೆಗೆ ಸರ್ಕಾರ ಹೆಚ್ಚು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಮಂತ್ರಿಗಳು ಈಗ ಸಭೆಯಲ್ಲಿ ಇಲ್ಲ. ವಿದ್ಯುತ್ ಅಭಾವದ ಕಾರಣದಿಂದ ಈಗ ಎಲ್ಲ ಕಡೆ ದಿನವಲ್ಲಿ 3 ಗಂಟೆಗಳ ಕಾಲ ಲೋಡ್-ಶೆಡಿಂಗ್ ಮಾಡಲಾಗುತ್ತಿದೆ. ಈ ಬಗ್ಗೆ ಬೆಂಗಳೂರು

ಮಾತ್ರವಲ್ಲ, ರಾಜ್ಯದ ಎಲ್ಲ ಕಡೆಗಳಿಂದ ಜನರಿಂದ ದೂರುಗಳು ಬರುತ್ತಿವೆ. ಈ 5 ಗಂಟೆಗಳ ಜೊತೆಗೆ ಇನ್ನೂ 2-3 ಗಂಟೆಗಳ ಕಾಲ ಆಗಾಗ್ಗೆ ವಿದ್ಯುತ್ ಸರಬರಾಜು ನಿಂತು ಹೋಗುತ್ತದೆ. ಈ ಕಣ್ಣು ಮುಚ್ಚಾಲೆ ಆಟದ ಬಗ್ಗೆ ಸಾಕಷ್ಟು ದೂರುಗಳು ಬರುತ್ತಿದೆ. ಸರ್ಕಾರದವರು ಹೈ-ಟೆನ್ಷನ್ ಇಂಡಸ್ಟ್ರಿಗಳಿಗೆ ಶೇಕಡಾ 75 ರಷ್ಟು ಲೋಡ್-ಶೆಡಿಂಗ್ ಘೋಷಣೆ ಮಾಡಿದ್ದರೂ ಸಹ, ಇಂತಹ ಕೆಲವು ಇಂಡಸ್ಟ್ರಿಗಳಿಗೆ ಕದ್ದು ಕರೆಂಟನ್ನು ಹೆಚ್ಚು ಸಮಯದವರೆಗೆ ಕೊಡುವಂತಹ ವ್ಯವಸ್ಥೆಯಾಗಿದೆ ಮತ್ತು ಇದರಲ್ಲಿ ಒಂದು ರೀತಿಯ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ಆರೋಪವಿದೆ. ಆದ್ದರಿಂದ ಇದೇ ಸಂದರ್ಭವನ್ನು ಉಪಯೋಗ ಮಾಡಿಕೊಂಡು ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಕೇವಲ ಅಧಿಕಾರಿಗಳು ಕೊಡುವಂತಹ ಅಂಕಿ ಅಂಶಗಳ ಆಧಾರದ ಮೇಲೆ ಈ ರೀತಿಯ ಕಾರ್ಯಕ್ರಮವನ್ನು ಕೈಕೊಳ್ಳುವುದಕ್ಕೆ ಬದಲು, ಇದನ್ನೆಲ್ಲಾ ಪರಿಶೀಲಿಸಲು ಈ ಸದನದ ಒಂದು ಸಮಿತಿಯನ್ನು ರಚನೆ ಮಾಡುವುದು ಒಳ್ಳೆಯದು. ಈ ಸಮಿತಿಯಲ್ಲಿ ಎಲ್ಲ ಪಕ್ಷದ ಸದಸ್ಯರುಗಳೂ ಇರಲಿ. ಆಗ ಆ ಸಮಿತಿಯವರು ವಿದ್ಯುತ್ ಉತ್ಪಾದನಾ ಕೇಂದ್ರಗಳಿಗೆಲ್ಲಾ ಹೋಗಿ ಅಲ್ಲಿ ನಡೆಯುವ ಕೆಲಸಕಾರ್ಯಗಳನ್ನು ನೋಡಲಿ. ಯಾವ ರೀತಿ ವಿದ್ಯುತ್ ನಷ್ಟವಾಗುತ್ತಿದೆ, ಟ್ರಾನ್ಸ್‌ಮಿಷನ್ ಲಾಸ್ ಯಾವ ರೀತಿ ಆಗುತ್ತಿದೆ ಎಂಬುದನ್ನು ಸಮಿತಿಯವರು ಕಂಡು ಹಿಡಿಯಲು ಸಾಧ್ಯವಾಗುತ್ತದೆ. ಇದರ ಜೊತೆಗೆ ಹೈ ಟೆನ್ಷನ್ ಇಂಡಸ್ಟ್ರಿಗಳಿಗೆ ಸರ್ಕಾರದ ನೀತಿಗೆ ವಿರುದ್ಧವಾಗಿ ಭ್ರಷ್ಟಾಚಾರದ ಮೂಲಕ ವಿದ್ಯುತ್ ಸರಬರಾಜು ಏನಾದರದು ಆಗುತ್ತಿದ್ದರೆ, ಅದನ್ನು ಸಹ ಕಂಡುಹಿಡಿಯಲು ಸಾಧ್ಯವಾಗುತ್ತದೆ. ಆದ್ದರಿಂದ ಸರ್ಕಾರ ಹಿಂದೆಮುಂದೆ ನೋಡದೆ ಕೂಡಲೇ ಒಂದು ಸಮಿತಿ ನೇಮಕ ಮಾಡಬೇಕು. ಈ ಸಮಿತಿಯವರು ರಾಜ್ಯದ ಎಲ್ಲ ಕಡೆ ಸಂಚಾರ ಮಾಡಿ ಪ್ರತಿಯೊಂದು ಅಂಶವನ್ನೂ ಅಧ್ಯಯನ ಮಾಡುವುದರ ಮೂಲಕ ಒಂದು ವರದಿಯನ್ನು ಈ ಅಧಿವೇಶನ ಮುಗಿಯುವುದರೊಳಗಾಗಿ ಈ ಸಭೆಗೆ ಒಪ್ಪಿಸುವ ಕೆಲಸವಾಗಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

ಇನ್ನು ಈ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಕೆಲವು ಪರಿಹಾರಗಳನ್ನು ಘೋಷಣೆ ಮಾಡಿದ್ದಾರೆ. 2 ಲಕ್ಷ ರೂಪಾಯಿಗಳವರೆಗೆ ವಹಿವಾಟು ನಡೆಸುವಂತಹ ಸಣ್ಣ ಉದ್ದಿಮೆದಾರರ ಮೇಲೆ ಮಾರಾಟ ತೆರಿಗೆ ಇರಬಾರದೆಂಬ ಬೇಡಿಕೆಯನ್ನು ನಾವು ಸರ್ಕಾರದ ಮುಂದೆ ಇಟ್ಟಿದ್ದೆವು. ಈ ಬಗ್ಗೆ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಒಂದು ಲಕ್ಷದವರೆಗೆ ವಿನಾಯಿತಿ ಕೊಟ್ಟಿದ್ದಾರೆ. 40 ಸಾವಿರದಿಂದ ಒಂದು ಲಕ್ಷಕ್ಕೆ ಹೆಚ್ಚು ಮಾಡಿದ್ದಾರೆ. ಆದರೆ ಬೆಲೆ ಏರಿಕೆ ಪರಿಸ್ಥಿತಿಯಿಂದಾಗಿ ಕಳೆದ 40 ಸಾವಿರ ರೂಪಾಯಿಗಳು ಈಗಿನ ಒಂದು ಲಕ್ಷಕ್ಕೆ ಸಮನಾಗುತ್ತದೆ. ಆದ್ದರಿಂದ ಇವರಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿದಂತೆ ಆಗಲಿಲ್ಲ. ಆದ್ದರಿಂದ ಇದನ್ನು ಕನಿಷ್ಠ ಪಕ್ಷ ಎರಡು ಲಕ್ಷಕ್ಕೆ ಹೆಚ್ಚು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ನಮ್ಮ ದಕ್ಷಿಣದ ಯಾವುದೇ ರಾಜ್ಯಗಳಲ್ಲಿ ಈ ರೀತಿ ಮಾರಾಟ ಕರವಿಲ್ಲ. ಆದರೂ ಈ ಹಿಂದಿನ ಸರ್ಕಾರ ಜಾರಿಗೆ ತಂದಿದ್ದನ್ನು ಈಗಿನ ಸರ್ಕಾರ ಮುಂದುವರಿಸಿಕೊಂಡು ಹೋಗುತ್ತಿದೆ. ಹೋಟೆಲ್‌ಗಳ ಮತ್ತು ರೆಸ್ಟೋರೆಂಟ್‌ಗಳ ಸಂಬಂಧದಲ್ಲಿ ಈಗ ಸ್ವಲ್ಪ ಮಟ್ಟಿಗೆ ಪರಿಹಾರ ಕೊಡಲು ಪ್ರಯತ್ನ ಮಾಡಿದ್ದಾರೆ. ಆದರೆ 2 ಲಕ್ಷದಿಂದ ಹತ್ತು ಲಕ್ಷದವರೆಗೆ ವಹಿವಾಟು ಇರುವಂತಹವರ ಮೇಲೆ ಶೇಕಡಾ ಎರಡರಷ್ಟು ಮಾತ್ರ ಮಾರಾಟ ಕರ ವಿಧಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಜನತಾ ಸರ್ಕಾರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ವೃತ್ತಿ ತೆರಿಗೆಯನ್ನು ಮನ್ನಾ ಮಾಡುವುದಾಗಿ ಹೇಳಿತ್ತು. ಕಳೆದವರ್ಷ ನಾವು ಇದನ್ನೇ ಇಲ್ಲಿ ಪ್ರಸ್ತಾಪ ಮಾಡಿದಾಗ, ಪುರಸಭೆಗಳ ಹಾಗೂ ಕಾರ್ಪೊರೇಷನ್‌ಗಳ ಚುನಾವಣೆ ನಡೆಯಲಿ, ಚುನಾವಣೆ ನಡೆದ ತಕ್ಷಣ ಇದನ್ನು ತೆಗೆದುಹಾಕುತ್ತೇವೆ ಮತ್ತು ಇದರ ಬದಲಿಗೆ ಬೇರೆ ರೂಪದಲ್ಲಿ ಸ್ಥಳೀಯ ಸಂಸ್ಥೆಗಳೇ ವಸೂಲಿ ಮಾಡುವಂತಹ ತೆರಿಗೆ ಹಾಕುತ್ತೇವೆಂದು ಹೇಳಿದರು. ಆದರೆ ಈ ಸಲವೂ ಸಹ ಇದನ್ನು ಮನ್ನಾ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡಲಿಲ್ಲ. ಈ ತೆರಿಗೆ ಭಾರ ಒಂದು ಲಕ್ಷ ಜನರ ಮೇಲೆ ಮಾತ್ರ ಬೀಳುತ್ತಿದೆ. ಆದ್ದರಿಂದ ಈ ತೆರಿಗೆಯನ್ನು ಮನ್ನಾ ಮಾಡುವ ಮೂಲಕ ಈ ತೆರಿಗೆ ಭಾರದಿಂದ ಈ ಜನರನ್ನೂ ಸಹ ಮುಕ್ತರನ್ನಾಗಿ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ

ಇನ್ನು ಮತ್ತೊಂದು ಮುಖ್ಯವಾದ ವಿಚಾರವೆಂದರೆ, ಮುದ್ರಣಾಲಯದವರು ತಮಗೆ ಬೇಕಾದ ಕಾಗದವನ್ನು ಖರೀದಿ ಮಾಡುವಾಗ ಮಾರಾಟ ಕರವನ್ನು ಕೊಡುತ್ತಾರೆ. ಅನಂತರ ಆಕಾಗದದಲ್ಲಿ ಆಮಂತ್ರಣ ಪತ್ರಿಕೆ, ಇನ್‌ವಿಟೇಷನ್ ಕಾರ್ಡ್ ಮುಂತಾದವನ್ನು ಪ್ರಿಂಟ್ ಮಾಡಿದ ನಂತರವೂ ತೆರಿಗೆ ವಿಧಿಸುವುದು ಸರಿಯಲ್ಲ. ತಮಿಳುನಾಡು ಹೈಕೋರ್ಟಿನವರು ಮುದ್ರಣ ಮಾಡಿಕೊಡುವುದು ಒಂದು ಸರ್ವಿಸ್ ಹೊರತು, ಅದು ಸೇಲ್ ಆಗುವುದಿಲ್ಲವೆಂದು ಜಜ್‌ಮೆಂಟ್ ಕೊಟ್ಟಿರುವುದರಿಂದ ಅಲ್ಲಿ ಈ ತೆರಿಗೆಯಿಂದ ವಿನಾಯಿತಿ ಕೊಟ್ಟಿದ್ದಾರೆ. ಅದರಂತೆ ನಮ್ಮಲ್ಲಿಯೂ ತೆರಿಗೆ ವಿಧಿಸಬಾರದೆಂದು, ಇದಕ್ಕೆ ವಿನಾಯಿತಿ ಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಈ ಬಜೆಟ್‌ನಲ್ಲಿ «ಓದುವ ಪುಸ್ತಕಗಳ ಹೊರತಾದ ಮುದ್ರಿತ

ಸಾಮುಗ್ರಿಗಳ ಮೇಲಿನ ತೆರಿಗೆಯನ್ನು ಶೇಕಡಾ 6 ಇರುವುದನ್ನು ಬಹುಮುತ ದರದ ಪ್ರಕಾರ ಶೇಕಡಾ 5 ಕ್ಕೆ ಇಳಿಸಿದ್ದಾರೆ. ಈ ಒಂದು ವಿನಾಯಿತಿಯನ್ನು ಓದುವ ಪುಸ್ತಕಗಳ ಜೊತೆಗೆ ಇತರೇ ಮುದ್ರಿತ ಸಾಮುಗ್ರಿಗಳಿಗೂ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ

ಇನ್ನು ಕೊನೆಯದಾಗಿ ಹೇಳಬೇಕೆಂದರೆ, ಮಂತ್ರಿಗಳು ಏನು ಆಜ್ಞೆ ಮಾಡುತ್ತಾರೆ, ಅದನ್ನು ಅಧಿಕಾರಿಗಳು ಸರಿಯಾಗಿ ಜಾರಿ ಮಾಡುತ್ತಿಲ್ಲ, ನಿಧಾನಗತಿಯಲ್ಲಿ ಕೆಲಸ ಮಾಡುತ್ತಿದ್ದಾರೆ, ಇದು ಸರಿಯಲ್ಲಿ ಅವರು ಚುರುಕಿನಿಂದ ಕೆಲಸ ಮಾಡಬೇಕೆಂದು ನಾವು ಹೇಳುತ್ತಲೇ ಇದ್ದೇವೆ. ಅವರಿಗೆ ಚುರುಕುತನ ಹುಟ್ಟಿಸ ರೀತಿಯಲ್ಲಿ ಸರ್ಕಾರ ಏನಾದರು ಪ್ರೋತ್ಸಾಹದಾಯಕ ರಿಯಾಯಿತಿಯನ್ನು ಇದರಲ್ಲಿ ಕಾಣಿಸಬೇಕಾಗಿತ್ತು ಕೇಂದ್ರಸರ್ಕಾರದವರು ಬೆಲೆಗಳ ಏರಿಕೆಗೆ ತಕ್ಕಂತೆ ಡಿ. ಎ. ಮತ್ತು ಇತರೇ ಪರಿಹಾರಗಳನ್ನು ತಮ್ಮ ನೌಕರರಿಗೆ ಏನು ಘೋಷಣೆ ಮಾಡಿದಾರೆ ಅದೇರೀತಿ ಇಲ್ಲಿಯೂ ಘೋಷಣೆ ಮಾಡಬಹುದಾಗಿತ್ತು. ಇವರಿಗೆ ಸಲ್ಲಬೇಕಾದ ಡಿ ಎ ಅಥವಾ ಇನ್ನಿತರ ಪರಿಹಾರವನ್ನು ಸರ್ಕಾರದವರು ಘೋಷಣೆ ಮಾಡುತ್ತಾರೆಂಬ ನಿರೀಕ್ಷೆ ಇತ್ತು. ಆದರೆ ಇದರಲ್ಲಿ ಘೋಷಣೆ ಮಾಡಿಲ್ಲ ಇದರ ಬಗ್ಗೆಯೂ ಸರ್ಕಾರ ಗಮನಹರಿಸಬೇಕೆಂದು ಹೇಳುತ್ತೇನೆ. ಈ ಬಗ್ಗೆ ಲೆಕ್ಕಾಚಾರ ಮಾಡಿ ಮುಗಿಸುವವರೆಗೆ ಕನಿಷ್ಠ ಮಧ್ಯಮಾವಧಿ ಪರಿಹಾರವನ್ನಾದರೂ ಘೋಷಣೆ ಮಾಡುವಂತಹ ಒಂದು ದಿಟ್ಟತನವನ್ನು ಸರ್ಕಾರ ತೋರಿಸಿದ್ದೇ ಆದರೆ ಸರ್ಕಾರದ ಅಧಿಕಾರಿಗಳು ಚುರುಕುತನದಿಂದ ಕೆಲಸ ಮಾಡುತ್ತಾರೆಂದು ನಾವು ನಿರೀಕ್ಷೆ ಮಾಡಬಹುದೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತಿದ್ದೇನೆ.

ಈಗಿರತಕ್ಕ ಭ್ರಷ್ಟಾಚಾರವನ್ನು ಹೋಗಲಾಡಿಸುತ್ತೇನೆ, ಹಾಗೂ ಭ್ರಷ್ಟಾಚಾರವನ್ನು ತಡೆಗಟ್ಟುತ್ತೇವೆಂದು ಹೇಳಿಕೊಂಡಿದಾರೆ. ನಾವು ಕೂಡ ಭಾಷಣ ಮಾಡುವಾಗ ಹೇಳಿದ್ದೇವೆ. ವಿಧಾನಸೌಧದಲ್ಲಿ ಮೂರನೇ ಮಹಡಿಯಲ್ಲಿ ಭ್ರಷ್ಟಾಚಾರ ಸಂಪೂರ್ಣವಾಗಿ ನಿಂತು ಹೋಗಿದೆ. ಕೆಳ ಹಂತದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಹೇಳತಕ್ಕಂತಾದ್ದು ಇದೆ. ಸರ್ಕಾರದವರೇ ನೇಮಕ ಮಾಡಿದಂತಹ ಶಿಕ್ಷಕರ ನೇಮಕಾತಿ ಸಮಿತಿಯಲ್ಲಿ ಈ ರೀತಿಯಾಗಿ ಭ್ರಷ್ಟಾಚಾರ ನಡೆದಿದೆ ಎಂದು ತಿಳಿದುಬಂದುದರಿಂದ ಆ ಆಯ್ಕೆ ಸಮಿತಿಯನ್ನೇ ರದ್ದು ಮಾಡಿದೆ ಎನ್ನತಕ್ಕಂತಹ ಮಾತು ಕೂಡ ಪ್ರಸ್ತಾಪವಾಗಿದೆ. ಈ ರೀತಿಯಲ್ಲಿ ಭ್ರಷ್ಟಾಚಾರವನ್ನು ತಡೆಯುವುದಕ್ಕೆ ಮಾನ್ಯಮಂತ್ರಿಗಳು ಲೋಕಾಯುಕ್ತ ಮಸೂದೆಯನ್ನು ಮಂಡಿಸಿದಾರೆ. ಭ್ರಷ್ಟಾಚಾರದ ವಿಚಾರದಲ್ಲಿ ಯಾವುದೇ ತರಹದ ಅರ್ಜಿಗಳು ಬಂದರೆ ಸಂಬಂಧಪಟ್ಟವರಿಂದ ತನಿಖೆ ಆಗಬೇಕು ಇದು ಆದಾಗ ಮಾತ್ರ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಸ್ವಲ್ಪ ಮಟ್ಟಿನ ರಿಯಾಯಿತಿಗಳನ್ನು ಘೋಷಣೆ ಮಾಡಿ, ಅಧಿಕಾರಿಗಳಿಗೆ ಪ್ರೋತ್ಸಾಹ ಕೊಡತಕ್ಕ ರೀತಿಯಲ್ಲಿ ಯೋಜನೆಗಳನ್ನು ಘೋಷಣೆ ಮಾಡಿದರೆ ಭ್ರಷ್ಟಾಚಾರವನ್ನು ಅದಷ್ಟು ಬೇಗ ತಡೆಗಟ್ಟಲಿಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ಸರ್ಕಾರ ತೀರ್ವವಾದ ಗಮನ ಹರಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತಾ ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂತಹ ಈ ಒಂದು 1984-85ರ ಆಯವ್ಯಯ ಪತ್ರವನ್ನು ನಾನು ವಿರೋಧಿಸಿ ಮಾತನಾಡಲು ನಿಂತಿದ್ದೇನೆ. ಒಂದು ವರ್ಷದ ಅವಧಿಯ ಅಧಿಕಾರ ಈ ಜನತಾ ಸರ್ಕಾರಕ್ಕೆ ದೊರಕಿತು ಈ ಮಾತನ್ನು ಆಯವ್ಯಯ ಪತ್ರದ ಮೂಲ ಪೀಠಿಕೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸುಮಾರಾಗಿ ಕೆಲವು ಪತ್ರಿಕೆಗಳಲ್ಲೂ ಕೂಡ ನಾನು ನೋಡಿದ್ದೇನೆ. ಕರ್ನಾಟಕ ಸರ್ಕಾರ ಅರ್ಥಾತ ಜನತಾ ಪಕ್ಷದ ಸರ್ಕಾರ ಒಂದು ವರ್ಷದ ಅವಧಿಯನ್ನು ಕಳೆದಿದ್ದು ಅಥವಾ ಮುಕ್ತಾಯ ಮಾಡಿದ್ದು ಒಂದು ದೊಡ್ಡ ಸಾಧನೆ ಎನ್ನತಕ್ಕ ಅಭಿಪ್ರಾಯವನ್ನು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾದುದನ್ನು ನಾವು ಕಂಡಿದ್ದೇವೆ ಇದೇ ಅರ್ಥದಲ್ಲಿ ಈ ಮೂಲ ಪೀಠಿಕೆಯೂ ಕೂಡ ಇದೆ. ಅಥವಾ ಇರಬಹುದು. ಪತ್ರಿಕೆಯಲ್ಲಿ ಈ ಮೊದಲು ಬಂದಿರಕ್ಕಂಹತ ಕೆಲವು ಅಭಿಪ್ರಾಯಗಳು ಹಾಗೂ ವಿಚಾರಗಳನ್ನು ಬರೆಯುವುದಕ್ಕೆ ಈ ಮಾತು ಪ್ರಚೋಧನೆ ಕೂಡ ಆಗಿರಬಹುದು ಎಂದು ನನ್ನ ಮನಸ್ಸಿಗೆ ಬಂದಿರತಕ್ಕಂಥ ಅಭಿಪ್ರಾಯ ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಜನತಾ ಸರ್ಕಾರವು ಒಂದು ವರ್ಷದ ಅಧಿಕಾರ ಮುಗಿಸಿರುವುದರಿಂದ ರಾಜ್ಯದ ಜನತೆಗೆ ನಾನು ಆಳವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಪ್ರಜಾಪ್ರಭುತ್ವದಲ್ಲಿ ನಾವು ಎರಡು ರೀತಿಯ ಬೆಂಬಲವನ್ನು ಕಾಣುತ್ತೇವೆ ಈ ಕಾರ್ಯಕ್ಷೇತ್ರದಲ್ಲಿ ನಾನೆಲ್ಲಾ ಕಂಡು ಉಂಡಿರತಕ್ಕ ವಿಚಾರ ಒಂದು ಚುನಾವಣೆ ಬಂದಾಗ ಯಾವ ಪಕ್ಷದ ಸರ್ಕಾರ ರಚನೆಯಾಗಲೀ, ಆ ಪಕ್ಷ ಬಹುಮತವನ್ನು ಪಡೆದಾಗ ಜನರ ಬೆಂಬಲ ನೇರವಾಗಿರುತ್ತದೆ. ಮತಗಳನ್ನು ಚಲಾಯಿಸುವ ಮುಖಾಂತರ ಚುನಾವಣೆಗಳನ್ನು ಮಾಡತಕ್ಕಂಥದ್ದನ್ನು ಒಪ್ಪಿದ್ದೇವೆ. ಚುನಾವಣೆಯಲ್ಲಿ ಮತಗಳ ಚಲಾವಣೆ ಆದಮೇಲೆ ಜನತೆಗೂ ಮತ್ತು

ಸರ್ಕಾರಕ್ಕೂ ಅಧಿಕಾರದ ಅವಧಿಯನ್ನು ಮುಗಿಸತಕ್ಕಂಥ ವಿಚಾರ ಇರುತ್ತಾದೆ. ಕೆಲವೊಮ್ಮೆ ಈ ಮಾತು ಸತ್ಯಕ್ಕೆ ದೂರವಾಗಿದೆ. ಒಂದು ಮಾತು ಎಲ್ಲರೂ ಒಪ್ಪಬೇಕು. ಜನರ ಬೆಂಬಲ ಸಿಕ್ಕಿದ ಮೇಲೆ ಅದೇ ಜನರ ಬೆಂಬಲ ನಿತ್ಯಕಾಲಕ್ಕೂ ಅಂದರೆ ಅಧಿಕಾರದ ಅವಧಿ 5 ವರ್ಷ ಮುಗಿಯುವವರೆಗೂ ಇರತಕ್ಕದ್ದು ಒಳ್ಳೆಯದು ಒಂದು ಪಕ್ಷದ ಸರ್ಕಾರ ರಚನೆಯಾದ ಮೇಲೆ ಆ ಪಕ್ಷ ತನ್ನ ಸರ್ಕಾರದ ಮುಖಾಂತರ ಆಗತಕ್ಕ ಕಾರ್ಯಕ್ರಮಗಳನ್ನು ಹಂತಹಂತದಲ್ಲಿ ನಡೆಯುತ್ತಿರಬೇಕು, ಈ ಕಾರ್ಯಕ್ರಮಗಳು ಸ್ಪಷ್ಟವಾಗಿ ಜನರ ಮನಸ್ಸಿಗೆ ಅಥವಾ ಜನಜೀವನದ ನಾಡಿಗೆ ಸಮ್ಮಿಳನವಾಗಬೇಕು ಆಗ ಮಾತ್ರ ಜನತೆಗೆ ಮತ್ತು ಸರ್ಕಾರಕ್ಕೆ ಅಧಿಕಾರದ ಅವಧಿಗೂ ನೇರವಾದ ಸಂಪರ್ಕ ಉಳಿಯುತ್ತದೆ ಜನರಿಂದಲೇ ಸರ್ಕಾರ ರಚನೆಯಾಗುವುದಿಲ್ಲ. ಆ ಒಂದು ಸಂಪರ್ಕಕ್ಕೆ ಸರ್ಕಾರ ಹಾಕತಕ್ಕಂತಹ ಕಾರ್ಯಕ್ರಮಗಳು ಜನತೆಯ ನಾಡಿ ಮಿಡಿತಕ್ಕೆ, ಜೀವನ ಸ್ಪಂದನಕ್ಕೆ ಒಳಗಾದಾಗ ಮಾತ್ರ, ಜನತೆಯ ಕೃಪಾಶೀರ್ವಾದದಿಂದ ಸರ್ಕಾರ ಮುಂದುವರಿಸಿಕೊಂಡು ಹೋದರೆ ಜನತೆಯ ಬೆಂಬಲ ಆ ಪಕ್ಷಕ್ಕೆ ಮುಂದುವರಿಯುತ್ತದೆ ಈ ಒಂದು ನೀತಿಯ ಪ್ರಶ್ನೆಯನ್ನು ನಾವು ವಿಚಾರಣೆ ಮಾಡೋಣ. ಸುಮಾರು ನನಗೆ ಗೊತ್ತಿರುವ ಹಾಗೆ ನಮ್ಮಂಥ ರಾಜಕಾರಣದಲ್ಲಿ ಜನತೆಗೆ ಒಂದು ಸಾರಿ ಮಾತನ್ನು ಕೊಟ್ಟ ಮೇಲೆ ಅವರ ಕರ್ತವ್ಯ ಪ್ರಜ್ಞೆ ಅವರಿಗೆ ಇದ್ದರೂ ಕೂಡ ಅಧಿಕಾರದ ಅವಧಿಯು ಮುಕ್ತಾಯ ಸಮಯದಲ್ಲಿ ಆ ಸಂಬಂಧ ಕಡಿದುಹೋಗುತ್ತದೆ: ತಪ್ಪಿಹೋಗುತ್ತದೆ ಎನ್ನುವ ಭಾವನೆ ಇಟ್ಟುಕೊಂಡಿರಬಹುದು. ಆದರೆ ಚುನಾವಣೆ ಆದಮೇಲೆ ಶಾಸಕರ ಬೆಂಬಲದಿಂದ ಮಾತ್ರ ಸರ್ಕಾರ ಉಳಿಯುತ್ತದೆ ಒಬ್ಬ ಶಾಸಕ ಜನರ ಪ್ರತಿನಿಧಿಯಾಗಿ ಪ್ರಜಾಪ್ರಭುತ್ವದಲ್ಲಿ. ಜನರ ಕಷ್ಟ ಕೋಟಲೆಗಳನ್ನು ಕಾಲಕ್ಕೆ ಸರಿಯಾಗಿ, ಪ್ರತಿನಿಧಿಸತಕ್ಕ ಒಬ್ಬ ವ್ಯಕ್ತಿಯಾಗಿರುತ್ತಾನೆ ಒಂದು ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದು ಏನೆಂದರೆ ಜನರ ಪ್ರೀತಿ ವಿಶ್ವಾಸ ಇರುವ ತನಕ ಸರ್ಕಾರ ಉಳಿಯುತ್ತದೆ ಎನ್ನುವ ಮಾತನ್ನು ಯಾವಾಗಲೂ ಹೇಳುತ್ತಿರುತ್ತಾರೆ, ಪದೇ ಪದೇ ಹೇಳುತ್ತಿರುತ್ತಾರೆ. ಸುಮಾರಾಗಿ ನನಗನಿಸುತ್ತದೆ, ಜನಗಳ ನೇರವಾದ ಪ್ರೀತಿ ವಿಶ್ವಾಸ ಯಾವಾಗ ಸಾಧ್ಯ ಎಂದು ವಿಚಾರ ಮಾಡುವುದಾದರೆ, ಸರ್ಕಾರ ಹಾಕತಕ್ಕಂತಹ ಕಾರ್ಯಕ್ರಮಗಳು ಸಮಾಜದಲ್ಲಿರತಕ್ಕಂತಹ ಜನತೆಯ ಜೀವನದಲ್ಲಿ ಸಮ್ಮಿಳನವಾಗಬೇಕು ಎನ್ನತಕ್ಕ ಮಾತನ್ನು ಪುನಃ ಒತ್ತಾಯವಾಗಿ ಹೇಳುತ್ತೇನೆ ಸಮಾಜದಲ್ಲಿರತಕ್ಕ ದುರ್ಬಲವರ್ಗದವರಿಗೆ ಆಯವ್ಯಯ ಪುಸ್ತಕದಲ್ಲಿ ಮೂರನೇ ಪ್ಯಾರಾದಲ್ಲಿ ಕೂಡ ಸ್ಪಷ್ಟವಾಗಿ ತಿಳಿಸಿದ್ದೀರಿ ನನ್ನ ಸಮಾಜದ ಆ ವರ್ಗಗಳ ವಿಶೇಷತ ರೈತರು ಕಾರ್ಮಿಕರು, ವಿದ್ಯಾರ್ಥಿಗಳು. ಹಾಗೂ ದುರ್ಬಲ ವರ್ಗಗಳಿಂದ ಅಪಾರ ಪ್ರಮಾಣದಲ್ಲಿ ದೊರೆತ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇನೆಂದು ತಿಳಿಯಪಡಿಸಿದ್ದಾರೆ. ಆ ಪ್ರಕಾರ, ಜನಸಾಮಾನ್ಯರ ಬೆಂಬಲ ಸರ್ಕಾರಕ್ಕೆ ದೊರೆತು ಮುಂದುವರಿಯಬೇಕು ಎನ್ನುವ ಭಾವನೆ ನಿಮಗೆ ಬರಬೇಕು ಎನ್ನುವುದಾದರೆ. ದುರ್ಬಲವರ್ಗದವರಿಗೆ ಸಂಬಂಧಪಟ್ಟ ಸಮಸ್ಯೆಗಳ ಅರಿವಿನ ಚೌಕಟ್ಟಿನಲ್ಲಿ ತಾವು ಕಾರ್ಯಕ್ರಮಗಳನ್ನು ರೂಪಿಸಬೇಕು. ಕಾರ್ಯಕ್ರಮಗಳನ್ನು ಕೂಡಲೇ ಜಾರಿಗೆ ಕೊಡಬೇಕು. ಆಗ ಮಾತ್ರ ದುರ್ಬಲವರ್ಗದವರ, ಕಾರ್ಮಿಕರು ರೈತರ ಸದಾ ಕಾಲದ ಬೆಂಬಲ ನಿರೀಕ್ಷೆ ಮಾಡಬೇಕು ಮತ್ತು ಬೆಂಬಲ ಪಡೆಯಬೇಕು. ಅದಕ್ಕೆ ಯಾರ ಭಿನ್ನಾಭಿಪ್ರಾಯವೂ ಇರುವುದಿಲ್ಲ. ನಾವು ಈಗ ಬಜೆಟ್ ವಿಚಾರ ಮಾಡೋಣ. ಈ ಒಂದು ಆಯವ್ಯಯ ಪತ್ರವನ್ನು ಇವತ್ತು ಸದನದ ಒಪ್ಪಿಗೆಗಾಗಿ ಏನು ಮಂಡನೆ ಮಾಡಿದ್ದೀರಿ ಇದರಲ್ಲಿ ಸಮಾಜದಲ್ಲಿರತಕ್ಕ ದುರ್ಬಲವರ್ಗದವರಿಗೆ, ಸರ್ಕಾರ ಯಾವ ಕಾರ್ಯಕ್ರಮಗಳನ್ನು ರೂಪಿಸಿದೆ ಎನ್ನತಕ್ಕಂತಾದ್ದನ್ನು ವಿಚಾರ ಮಾಡೋಣ. ರೈತರಿಗೆ ಯಾವ ಕಾರ್ಯಕ್ರಮ ರೂಪಿಸಿದೆ, ಕಾರ್ಮಿಕರಿಗೆ ಯಾವ ಕಾರ್ಯಕ್ರಮ ರೂಪಿಸಿದೆ. ಯುವಕರಿಗೆ ಯಾವ ಕಾರ್ಯಕ್ರಮಗಳನ್ನು ರೂಪಿಸಿದೆ ಎನ್ನತಕ್ಕಂತಾದನ್ನೂ ವಿಚಾರ ಮಾಡೋಣ ಸರ್ಕಾರ ಇಂತಹ ವರ್ಗಗಳ ಬೆಂಬಲ ಸದಾ ಕಾಲದಲ್ಲೂ ಪಡೆಯುತ್ತಿದ್ದೇನೆ ಎಂದು ನನಗೆ ಗೊತ್ತಿರುವಹಾಗೆ ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಹೇಳುತ್ತಿದ್ದಾರೆ ಜನತೆಯ ಸಹಕಾರ, ಬೆಂಬಲ ಈ ಸರ್ಕಾರಕ್ಕೆ ಇರುವವರೆಗೂ ನಾವು ಉಳಿಯುತ್ತೇವೆಂದು ಹೇಳುತ್ತಿದ್ದಾರೆ

**3-00 P M**

ಜನತೆಯ ಬೆಂಬಲ ನಮಗೆ ಎಲ್ಲಿಯವರೆಗೂ ಇರುತ್ತದೆಯೋ ಅಲ್ಲಿಯತನಕ ನಾವು ಅಧಿಕಾರದಲ್ಲಿ ಮುಂದುವರಿಯುತ್ತೇನೆ. ಎಂದು ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಜನತೆಯ ಪ್ರತಿನಿಧಿಗಳು ಶಾಸಕರು ಒಂದು ಸರ್ಕಾರ ಆಡಳಿತದಲ್ಲಿ ಮುಂದುವರಿಯಬೇಕಾದರೆ ಶಾಸಕರ ಬೆಂಬಲ ಬೇಕಾಗುತ್ತದೆ. ಆ ಶಾಸಕರ ಬೆಂಬಲವನ್ನು ಪಡೆದುಕೊಳ್ಳುವುದಕ್ಕಾಗಿ ಏನೇನು ಕೆಲಸಗಳನ್ನು ಮಾಡುತ್ತಾರೆ ಆ ಕೆಲಸವನ್ನು ಜನತಾ ಸರ್ಕಾರದವರು ಮಾಡಿದ್ದಾರೆ. ಆದರೆ ಆಡಳಿತವನ್ನು ನಡೆಸುತ್ತಿರುವ ಯಾವುದೇ ಒಂದು ಪಕ್ಷಕ್ಕೆ ನೇರವಾಗಿ ಜನಗಳ ಸಂಪರ್ಕ ಬರುವುದಿಲ್ಲ. ಆ ಜನತೆಯ ಸಂಪರ್ಕ ಬರಬೇಕಾದರೆ ಅವರನ್ನು ಪ್ರತಿನಿಧಿಸತಕ್ಕಂಥ ಶಾಸಕರ ಮುಖಾಂತರ ತಮಗೆ ಜನತೆಯ

ಬೆಂಬಲ ಬರುತ್ತದೆ, ಆ ಒಂದು ಮಾತನ್ನು ತಾವು ಯಾವಾಗಲೂ ತಮ್ಮ ಮನಸ್ಸಿನಲ್ಲಿಟ್ಟುಕೊಂಡಿದರೆ ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ. ಆದರೆ ನಾನು ಇದೇ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡುವುದಾದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಾಸನದಲ್ಲಿ ಭಾಷಣ ಮಾಡುತ್ತಾ ಒಂದು ಮಾತನ್ನು ಹೇಳಿದ್ದಾರೆ. ಅದು ಏನೆಂದರೆ ಅವರ ಭಾಷಣವನ್ನು ನಾನು ನೋಡಲಿಲ್ಲ. ಮತ್ತು ಅವರ ಭಾಷಣವನ್ನು ನಾನು ಪತ್ರಿಕೆಯಲ್ಲಿ ಓದಲು ಸಹ ಇಲ್ಲ. ಕಾರಣವೇನೆಂದರೆ ನಾನು ಆ ಸಮಯದಲ್ಲಿ ಯಾವುದೋ ಒಂದು ಮೂಲೆ ಹಳ್ಳಿಯಲ್ಲಿ ಇದ್ದೆ. ಅಲ್ಲಿ ನನಗೆ ಪತ್ರಿಕೆ ಕೂಡ ಸಿಗಲಿಲ್ಲ ಆದರೆ ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ ನಮ್ಮ ಜನತಾ ಸರ್ಕಾರವನ್ನು ಯಾರೂ ಕೂಡ ಬೀಳಿಸುವುದಕ್ಕೆ ಆಗುವುದಿಲ್ಲ. ನಾವು ಒಂದು ವರ್ಷದಲ್ಲಿ ಒಳ್ಳೆಯ-ಕೆಲಸಕಾರ್ಯಗಳನ್ನು ಮಾಡಿದ್ದೇವೆ. ಜನತೆಯ ಪ್ರೀತಿ ಮತ್ತು ವಿಶ್ವಾಸ ಎಲ್ಲಿಯವರೆಗೆ ನಮ್ಮ ಮೇಲೆ ಇರುತ್ತದೆಯೋ ಅಲ್ಲಿಯವರೆಗೆ ನಾವು ಅಧಿಕಾರದಲ್ಲಿ ಇರುತ್ತೇವೆ ಮತ್ತು ಜನತಾ ಸರ್ಕಾರವನ್ನು ವೀರಪ್ಪಮೊಯ್ಲಿಯವರಂತಹ ನೂರು ಜನರು ಬಂದರೂ ಏನೂ ಆಗುವುದಿಲ್ಲ. ಮತ್ತೆ ಶ್ರೀಮಾನ್ ಬಂಗಾರಪ್ಪನವರಂತಹವರು ನೂರು ಜನರು ಬಂದರೂ ಏನೂ ಆಗುವುದಿಲ್ಲ ಮತ್ತು ಶ್ರೀಮತಿ ಇಂದಿರಾಗಾಂಧಿಯಂತಹವರು ನೂರು ಜನರು ಬಂದರೂ ಏನೂ ಆಗುವುದಿಲ್ಲ ಯಾರೂ ಬಂದರೂ ಕೂಡ ನಮ್ಮ ಒಂದು ಕೂದಲನ್ನು ಸಹ ಕಿತ್ತುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಅರ್ಥ ಬರುವ ರೀತಿಯಲ್ಲಿ ಅವರು ಭಾಷಣ ಮಾಡಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ತಾವು ಕಡೆಯಲ್ಲಿ ಏನು ಪದಪ್ರಯೋಗ ಮಾಡಿದ್ದೀರಿ ಆ ಮೂರು ಅಕ್ಷರಗಳು ನೋಡಿ ಆ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿಲ್ಲ.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳ ಪ್ರತಿಯೊಂದು ಭಾಷಣದಲ್ಲಿ ನಾನು ಹಾಜರಾಗಿದ್ದೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಆ ಮಾತನ್ನು ಎಲ್ಲಿಯೂ ಸಹ ಹೇಳಿಲ್ಲ. ತಾವು ಸುಮ್ಮನೆ ರಾಜಕೀಯ ದೃಷ್ಟಿಯಿಂದ ಆ ಪದಗಳನ್ನು ಬಳಸುವುದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ.—ಆಗಲಿ ಸ್ವಾಮಿ ಆ ಪದವನ್ನು ವೈಸೆಸ್ ಮಾಡೋಣ. ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು, ಮತ್ತು ಮಾನ್ಯ ಸದಸ್ಯರು ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಆ ಪದವನ್ನು ಬಳಸಲಿಲ್ಲವೆಂದು ಹೇಳಿದ್ದಾರೆ ಆದರೆ ನಾನು ಪತ್ರಿಕೆಯನ್ನು ಓದಲಿಲ್ಲವೆಂದು ಮೊದಲೇ ಹೇಳಿದ್ದೇನೆ. ನನ್ನಂತಹವರು ಮತ್ತು ಶ್ರೀಮಾನ್ ವೀರಪ್ಪಮೊಯ್ಲಿಯವರಂತಹವರು ನೂರು ಜನರು ಬಂದರೂ ಸಹ ನಮ್ಮ ಜನತಾ ಸರ್ಕಾರವನ್ನು ಹುರುಳಿಸಲು ಆಗುವುದಿಲ್ಲವೆಂದು ಮಾನ್ಯಮುಖ್ಯಮಂತ್ರಿಗಳು ನೇರವಾಗಿ ಹೇಳಿದ್ದಾರೆ. ಯಾವುದೇ ಒಂದು ಸರ್ಕಾರ ರಾಜ್ಯಾಂಗ ಬದ್ಧವಾಗಿ ರಚನೆಯಾದ ಮೇಲೆ ಆ ಸರ್ಕಾರ ತನ್ನ ಪೂರ್ಣ ಅವಧಿಯ ತನಕ ಇರಬೇಕೆಂದು ನಾನು ಕೂಡ ಅನೇಕ ಸಲ ಪ್ರಸ್ತಾಪ ಮಾಡಿದ್ದೇನೆ. ಆದರೂ ಕೂಡ ಕೆಲವಾರು ಕಾರಣಗಳಿಂದ ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಚಾತುರ್ಯ ನಡೆದೊ. ಆದರೆ ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ ನಾವು ನಮ್ಮ ಸರ್ಕಾರವನ್ನು ಭದ್ರವಾಗಿ ಉಳಿಸಿಕೊಂಡು ಹೋಗಬೇಕು ಎನ್ನುವ ಒಂದು ಆಸೆ ಮತ್ತು ಆಕಾಂಕ್ಷೆ ಸಾಮಾನ್ಯವಾಗಿ ಎಲ್ಲರಿಗೂ ಕೂಡ ಇರುತ್ತದೆ. ಆದರೆ ನಾವು ಚುನಾವಣೆಯ ಸಂದರ್ಭದಲ್ಲಿ ಜನತೆಗೆ ಕೊಟ್ಟಂತಹ ಆಶ್ವಾಸನೆಗಳನ್ನು ಕೂಡ ಗಮನದಲ್ಲಿಟ್ಟುಕೊಳ್ಳುವುದು ಒಳ್ಳೆಯದು. ಅಂತಹ ಒಂದು ಆತ್ಮವಿಶ್ವಾಸವನ್ನು ತಾವು ತಮುಲ್ಲಿಟ್ಟುಕೊಂಡು ತಮ್ಮನ್ನು ಚುನಾಯಿಸಿ ಕಳುಹಿಸಿದಂತಹ ಜನತೆಗೆ ತಮ್ಮಲ್ಲಿ ಅಂದರೆ ನಿಮ್ಮಲ್ಲಿ ಅಂತಹ ಒಂದು ಆತ್ಮ ವಿಶ್ವಾಸವನ್ನು ಸದಾ ಮುಂದುವರಿಸಿಕೊಂಡು ಹೋಗುವಂಥ ಕೆಲಸಕಾರ್ಯಗಳನ್ನು ತಾವು ಮಾಡಬೇಕಾಗುತ್ತದೆ. ಆದರೆ ಜನತೆಯ ಹೆಸರಿನಲ್ಲಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ಏನೇ ಆದರೂ ಕೂಡ ನಾವು ಅಧಿಕಾರವನ್ನು ಉಳಿಸಿಕೊಳ್ಳುತ್ತೇವೆ ಎಂದು ಹೇಳಿದರೆ ಅದು ಸಾಧ್ಯವಾಗದ ಮಾತು. ಏಕೆಂದರೆ ರೋಮನ್‌ರು ಕಟ್ಟಿದಂಥ ಚಕ್ರಾಧಿಪತ್ಯಗಳೇ ಬಿದ್ದು ಹೋಗಿರುವಾಗ ಇನ್ನು ನಿಮ್ಮ ಜನತಾ ಸರ್ಕಾರ ಬಿದ್ದು ಹೋಗುವುದರಲ್ಲಿ ನನಗೆ ಯಾವುದೇ ರೀತಿಯ ಅನುಮಾನವಿಲ್ಲ ಸ್ವಾಮಿ ವಿವೇಕನಂದರು ಕೂಡ ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ ಆ ರೋಮನ್ ಜನಾಂಗದವರು ಕಟ್ಟಿದಂತಹ ಚಕ್ರಾಧಿಪತ್ಯಗಳ ಜಾಗದಲ್ಲಿ ಜೇಡಿನ ಬಲೆಗಳು ಕಟ್ಟಿಕೊಂಡಿರತಕ್ಕಂಥದ್ದು ನಾವು ಇಂದಿಗೂ ಕೂಡ ಕಣ್ಣಿನಿಂದ ನೋಡಬಹುದಾಗಿದೆ. ಅವರ ಚಕ್ರಾಧಿಪತ್ಯಗಳೇ ಆ ರೀತಿಯಾದ ಮೇಲೆ ಇನ್ನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸರ್ಕಾರದ ಗತಿ ಏನಾಗಬಹುದು ಎಂಬುದನ್ನು ತಾವೇ ಊಹಿಸಿ ನೋಡಿಕೊಳ್ಳಿ. ಈ ಮಾತನ್ನು ನಾನು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ತಾವು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಬೇಕು ಎನ್ನುವ ಒಂದು ಅರ್ಥದಲ್ಲಿ ಆ ಮಾತನ್ನು ಉಪಯೋಗಿಸಿರಬಹುದು. ಆದರೆ ತಾವು ಯಾವಾಗ ಜನಸಾಮಾನ್ಯರ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡುವುದರಲ್ಲಿ ವಿಫಲರಾಗುತ್ತೀರೋ ಜನಸಾಮಾನ್ಯರ ಕಲ್ಯಾಣವನ್ನು ಮಾಡುವು

ದರಲ್ಲಿ ವಿಫಲರಾಗುತ್ತೀರೋ ಆಗ ಜನ ನಿಮ್ಮನ್ನು ಸಹ ದೂರ ಮಾಡುತ್ತಾರೆ ಎನ್ನುವ ಒಂದು ಮಾತನ್ನು ತಾವು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕಾದುದು ಬಹಳ ಅವಶ್ಯಕವಿದೆ. ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಯಾವ ಒಂದು ಅಭಿವೃದ್ಧಿ ಕೆಲಸವನ್ನು ಸಹ ಮಾಡಿಲ್ಲ.

ಒಬ್ಬ ಸದಸ್ಯರು.--ಸ್ವಾಮಿ, ಈ ನೂರು ಜನರನ್ನು ಬಿಟ್ಟರೆ ಬೇರೆ ಯಾರ ಕೈಯಲ್ಲಿ ಈ ಜನತಾ ಸರ್ಕಾರವನ್ನು ಅಲ್ಲಾಡಿಸಲು ಆಗುವುದಿಲ್ಲವೇ ?

ಶ್ರೀ ಕೆ. ಬಿ. ಮಲ್ಲಪ್ಪ --ಸ್ವಾಮಿ ಟೈಮ್ ಸಿಕ್ಕಿದರೆ ನಿಮ್ಮ ಮಾನ್ಯ ವೈ. ರಾಮಕೃಷ್ಣರವರು ಕೂಡ ಪ್ರಯತ್ನ ಮಾಡುತ್ತಾರೆ. ಆದರೆ ಅವರಿಗೆ ಟೈಮ್ ಸಿಕ್ಕಿಲ್ಲ.

ಶ್ರೀ ಎಸ್. ಬಂಗಾರಪ್ಪ.--ಸ್ವಾಮಿ ಟೈಮ್ ಸಿಕ್ಕಿದರೆ ನಿಮ್ಮ ಮಾನ್ಯ ಕೆ. ಜಿ. ಮಹೇಶ್ವರಪ್ಪನವರು ಕೂಡ ಪ್ರಯತ್ನ ಮಾಡುತ್ತಾರೆ. ಆದರೆ ಅವರಿಗೆ ಆ ಸಂದರ್ಭ ಇನ್ನು ಬಂದಿಲ್ಲ. ಆದರೆ ಆ ವಿಚಾರ ಈಗ ಬೇಡ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮುಂದೆ ಇಟ್ಟಿರತಕ್ಕ ಆಯವ್ಯಯ ಪಟ್ಟಿಯ ಕಡೆ ನಾವು ಅವಲೋಕನ ಮಾಡಿದಾಗ ಒಂದು ಮಾತನ್ನು ಹೇಳಬೇಕೆಂದು ಅನಿಸುತ್ತದೆ. ಸ್ವಾಮಿ ನಿಮ್ಮ ಸರ್ಕಾರದವರು ಜಾರಿಗೆ ತಂದಿರತಕ್ಕಂಥ ಹೌಸಿಂಗ್ ಸ್ಕೀಮ್‌ನಲ್ಲಿ ದುರ್ಬಲವರ್ಗದವರಿಗಾಗಿ ಮನೆಯನ್ನು ಕಟ್ಟಿಕೊಡುತ್ತೇವೆಂದು ಸ್ಪಷ್ಟವಾಗಿ ಬರೆದಿದ್ದಾರೆ. ಆದರೆ ದುರ್ಬಲವರ್ಗದವರು ಅಂದರೆ ಯಾರು? ದುರ್ಬಲವರ್ಗದವರು ಎಂದರೆ ಒಕ್ಕಲಿಗರೇ ಅಥವಾ ಲಿಂಗಾಯುತರೇ? ಆದರೆ ಮುಂದುವರೆದ ಜನಾಂಗದಲ್ಲಿ ಕೂಡ ಕೆಲವರು ಬಡವರು ಇದ್ದಾರೆ. ಅವರನ್ನು ತಾವು ದುರ್ಬಲವರ್ಗದವರೆಂದು ಕರೆಯುತ್ತೀರಾ ? ಇವತ್ತು ಎಷ್ಟೋ ಜನ ಒಕ್ಕಲಿಗರಲ್ಲಿ ಕೂಲಿ ಮಾಡಿಕೊಂಡು ಜೀವನ ಮಾಡತಕ್ಕಂಥವರು ಇದ್ದಾರೆ. ನೀವು ನಿಜವಾಗಿಯೂ ಕೂಡ ದುರ್ಬಲವರ್ಗದವರ ಸೇವೆ ಮಾಡುತ್ತಿದ್ದೀರಾ ? ನಿಮ್ಮ ಕರ್ತವ್ಯವನ್ನು ನೀವು ಪ್ರಾಮಾಣಿಕವಾಗಿ ಮಾಡುತ್ತಿದ್ದೀರಾ ? ಎಂಬುದನ್ನು ಕೂಡ ಜನತೆ ನೋಡುತ್ತಾರೆ. ಸ್ವಾಮಿ ಹಿಂದಿನ ಸರ್ಕಾರದವರು ಲೋಕಾಸ್ಟ್ ವೆಚ್ಚದಲ್ಲಿ ಕಟ್ಟಿರತಕ್ಕಂಥ ಮನೆಗಳಿಗೆ ಹಿಂದಿನ ಸರ್ಕಾರದವರು ಬಜೆಟ್‌ನಲ್ಲಿ ಸುಮಾರು 12 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಆದರೆ ತಾವು ಈ ವರ್ಷ ಎಷ್ಟು ಹಣವನ್ನು ಇಟ್ಟಿದ್ದೀರಿ ? ಇದೇ ಪ್ರಸ್ತಾಪವನ್ನು 1983 ರಲ್ಲಿ ನಾವು ನೀವು ಮಾಡಿದ್ದೇವೆ. ಯಾರ‍್ಯಾರು ಶಾಸಕರಿದ್ದೀರಿ, ಯಾರ‍್ಯಾರು ಮಂತ್ರಿಗಳಿದ್ದೀರಿ ನಿಮ್ಮ ಕ್ಷೇತ್ರಗಳಲ್ಲಿ ಇದನ್ನು ವಿಚಾರ ಮಾಡಬಹುದು. ನಾವು ಕಳೆದ ಸಲ ಬಜೆಟ್ ಮೇಲೆ ಮಾತನಾಡುವಾಗ ಪದೇ ಪದೇ ಹೇಳಿದ್ದೇನೆ. ಸಮಾಜದಲ್ಲಿರತಕ್ಕ ದುರ್ಬಲವರ್ಗದವರ ಬೆಂಬಲ ಪಡೆದು ಅಧಿಕಾರಕ್ಕೆ ಬಂದಿದ್ದೀರಿ. ನೀವು ದುರ್ಬಲವರ್ಗದವರನ್ನು ಸಂಪೂರ್ಣವಾಗಿ ಕಡೆಗಣಿಸಿದ್ದೀರಿ. ನಿಮ್ಮ ಯೋಜನೆಗಳ ವಿಚಾರಧಾರೆ ಇದಲ್ಲ. ಪ್ರತಿಯೊಂದು ಸಾಮಾನಿನ ಬೆಲೆ ಇವತ್ತು ಜಾಸ್ತಿಯಾಗಿದೆ. ಈಗ ಉದಾಹರಣೆಗೆ ಹೇಳುವುದಾದರೆ, ಶಾಲಾ ಕಟ್ಟಡ ಕಟ್ಟಲಿಕ್ಕೆ ಹಿಂದೆ ನಾಲ್ಕು ಸಾವಿರ ಚಿಲ್ಲರೆ ಕೊಡುತ್ತಿದ್ದರು. ಈ ಸರ್ಕಾರ ಅದನ್ನು 9 ಸಾವಿರ ಮಾಡಿ, ಅದನ್ನು 14 ಸಾವಿರದವರೆಗೂ ಹೆಚ್ಚಿಸಿದ್ದಾರೆಂದು ಗೊತ್ತಾಗಿದೆ. ಹೀಗೆ ಮಾಡಿದರೆ ನಾವು ಕೊನೆಯ ಪಕ್ಷ ವಿದ್ಯಾರ್ಥಿಗಳಿಗೆ ಒಂದು ಒಳ್ಳೆಯ ಕೊಠಡಿಯನ್ನಾದರೂ ಕೊಡಬಹುದು. ಜನತಾ ಮನೆಗಳಿಗಾಗಲಿ, ಹುಡ್ಕೋ ಯೋಜನೆಯಲ್ಲಿ ಬರುವ ಮನೆಗಳಿಗಾಗಲಿ ಕಡಿಮೆ ವರಮಾನ ಇರತಕ್ಕವರಿಗೆ ಕೊಡತಕ್ಕ ಮನೆಗಳಿಗಾಗಲಿ, ಯಾವುದೇ ಯೋಜನೆಯಲ್ಲಿ ಮನೆಗಳಿಗೆ ಕೊಡತಕ್ಕ ಮರಮುಟ್ಟು ಹೆಂಚು ಈ ವಸ್ತುಗಳ ಬೆಲೆ ಜಾಸ್ತಿಯಾಗಿವೆ. ನೀವು ಬಜೆಟ್‌ನಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ಇಟ್ಟಿದ್ದೀರಿ ? ಹಿಂದೆ ಎಷ್ಟು ಹಣವನ್ನು ಇಟ್ಟಿದ್ದೀರಿ, ಅಷ್ಟೆ ಹಣವನ್ನು ಈಗಲೂ ಇಟ್ಟಿದ್ದೀರಿ 1 ರೂಪಾಯಿ ಕೂಡ ಜಾಸ್ತಿ ಇಟ್ಟಿಲ್ಲ. ನಿಮ್ಮ ಒಂದು ವರ್ಷದ ಅಧಿಕಾರಾವಧಿಯಲ್ಲಿ ಮನೆಗಳು ಯಾವರೀತಿ ಗ್ರಾಮಾಂತರ ಪ್ರದೇಶಗಳಲ್ಲಿ ಬರುತ್ತಿವೆ ಎಂಬುದು ಅಲ್ಲಿ ಹೋಗಿ ನೋಡಿದಾಗ ಗೊತ್ತಾಗುತ್ತದೆ. ಹಿಂದಿನ ಸರ್ಕಾರಗಳು ಇದ್ದಾಗ ಗ್ರಾಮಾಂತರ ಪ್ರದೇಶಗಳಲ್ಲಿ ಬಡಜನರು ಬಹುಸಂಖ್ಯೆಯಲ್ಲಿ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದರು. ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಮನೆಗಳನ್ನು ಕಟ್ಟತಕ್ಕ ಕೆಲಸ ಹಿಂದೆ ಎಷ್ಟು ಪ್ರಗತಿಪರವಾಗಿ ನಡೆಯುತ್ತಿತ್ತು ಎಂಬುದು ತಮಗೆ ಗೊತ್ತಿದೆ. ಅದೇರೀತಿ ಈ ಒಂದು ವರ್ಷದಲ್ಲಿ ನೋಡಿದರೆ ಏನು ಇಲ್ಲವೇ ಇಲ್ಲ. ನಿಮ್ಮ ಕ್ಷೇತ್ರಗಳಲ್ಲಿ ನೋಡಿದ್ದೀರಿ, ಜನರು ಜನತಾ ಮನೆಗಳನ್ನು ಕೊಡಿ, ಕಡಿಮೆ ಖರ್ಚಿನಲ್ಲಿ ಕಟ್ಟುವ ಮನೆಗಳನ್ನು ಕೊಡಿಯೆಂದು ನಮಗೆ ನಿಮಗೆ ಅರ್ಜಿಗಳನ್ನು ಕೊಡುತ್ತಾರೆ. ನಮಗೂ ಕೊಟ್ಟಿದ್ದಾರೆ ನಿಮಗೂ ಕೊಟ್ಟಿದ್ದಾರೆ. ಮಂತ್ರಿಗಳಿಗೂ ಕೂಡ ಕೊಟ್ಟಿದ್ದಾರೆ. ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಎಷ್ಟು ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗಿದೆ ಎನ್ನುವುದು ಮುಖ್ಯವಾದ ಪ್ರಶ್ನೆ. ನಮಗೆ ನಿಮಗೆ ಗೊತ್ತಿರುವಹಾಗೆ ಮನೆಗಳನ್ನು ಕಟ್ಟತಕ್ಕ ಕಾರ‍್ಯಕ್ರಮ ಕಳೆದ 1 ವರ್ಷದ ಅವಧಿಯಲ್ಲಿ ಸಂಪೂರ್ಣವಾಗಿ ನಿಂತುಹೋಗಿದೆ. ಆ ಒಂದು ಕಾರ‍್ಯಕ್ರಮನ್ನೇ ಇವರು ಬಿಟ್ಟು ಬಿಟ್ಟಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ತಮ್ಮ ಕ್ಷೇತ್ರವಾದ ಕೊರಟಗೆರೆಯನ್ನೇ ತೆಗೆದುಕೊಳ್ಳಿ ಬಡವರಿಗೆ ಮನೆಗಳನ್ನು ಕೊಡತಕ್ಕ ಕಾರ‍್ಯಕ್ರಮ 1 ವರ್ಷ

ದಲ್ಲಿ ಹಾಳಾಗಿ ಹೋಗಿದೆ. ಹೊಸದಾಗಿ ಸರ್ಕಾರ ಬಂತು ಹಣದ ಕೊರತೆಯಿದೆಯೆಂದು ಹೇಳುತ್ತಿದ್ದಾರೆ. ಈ ತರಹ ನೀವು ಹೇಳಿದರೆ ಹಳ್ಳಿಯಲ್ಲಿರತಕ್ಕ ಬಡ ಜನರಿಗೆ ತೃಪ್ತಿಯಾಗುವುದಿಲ್ಲ. ಬಡವರಿಗಾಗಿ ಇರತಕ್ಕ ಕಾರ್ಯಕ್ರಮ ಇದು. ಬಡವರಿಗೆ ಮನೆಗಳನ್ನು ಕಟ್ಟತಕ್ಕ ಕಾರ್ಯಕ್ರಮಕ್ಕೆ ಈ ವರ್ಷದಲ್ಲಾದರೂ ಹಣವನ್ನು ಜಾಸ್ತಿ ಇಡಬೇಕಾಗಿತ್ತು. ನೀವು ಇಟ್ಟಿರತಕ್ಕ ಹಣದಲ್ಲಿ ಯಾರೂ ಕೂಡ ಒಂದು ಮನೆಯನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತಿನ ದಿನಸ ಎಲ್ಲಾ ಸಾಮಾನುಗಳ ಬೆಲೆ ಜಾಸ್ತಿಯಾಗಿದೆ ಈ ಸರ್ಕಾರ ಸಮಾಜದ ದುರ್ಬಲವರ್ಗದವರಿಗೆ ಕೊಡತಕ್ಕ ಕಾರ್ಯಕ್ರಮಗಳ ಕಡೆಗೆ ಹೆಚ್ಚು ಗಮನ ಹರಿಸಬೇಕಾಗಿತ್ತು. ಮನೆಗಳನ್ನು ಕೊಡುವುದರ ಮುಖಾಂತರ ನೀವು ಅವರಿಗೆ ಸಹಾಯ ಮಾಡಿದ್ದರೆ, ಅವರು ಹೊಸ ಸರ್ಕಾರ ಜನಸಾಮಾನ್ಯರಿಗೆ ತಲುಪುವಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆಯೆಂದು ನಿಮ್ಮ ಬಗ್ಗೆ ಅಭಿಮಾನ ಇಟ್ಟುಕೊಳ್ಳುತ್ತಿದ್ದರು. ಜನಸಾಮಾನ್ಯರಿಗೆ ತಲುಪುವ ಹೊಸ ಕಾರ್ಯಕ್ರಮಗಳನ್ನು ಹೊಸ ಸರ್ಕಾರ ಹಾಕಿಕೊಳ್ಳಬೇಕಾಗಿತ್ತು. ನಿಮ್ಮ ಒಂದು ವರ್ಷದ ಅವಧಿಯಲ್ಲಿ ಯಾವುದೇ ಕ್ಷೇತ್ರ ತೆಗೆದುಕೊಳ್ಳಿ ಎಲ್ಲೂ ಕೂಡ ಮನೆಗಳನ್ನು ಕಟ್ಟತಕ್ಕ ಕೆಲಸ ಸಂಪೂರ್ಣವಾಗಿ ಸ್ಥಗಿತವಾಗಿದೆ ಇದರಲ್ಲಿ ಯಾವುದೇ ಅನುಮಾನವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಪತ್ರದಲ್ಲಿ ದುರ್ಬಲ ವರ್ಗಗಳಿಂದ ಅಪಾರ ಪ್ರಮಾಣದಲ್ಲಿ ದೊರೆತ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇನೆ ಎಂದು ಹೇಳಿದ್ದಾರೆ. ಇವರಿಗೆ ಅಪಾರವಾದ ಸಹಕಾರವನ್ನು ಯಾರು ಕೊಡುತ್ತಾರೆ ? ಜನಸಾಮಾನ್ಯರಿಗೆ ನಿವೇಶನ ಕೊಡಲಿಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ ? ೨೦ ಸಾವಿರ ಚಿಲ್ಲರೆ ಹಣವನ್ನು ಇಟ್ಟಿದ್ದೀರಿ. ಈ ಸಾರಿ ಬಡ್ಜೆಟ್ ಭಾಷಣದಲ್ಲಿ ನಿವೇಶನಗಳನ್ನು ಎಷ್ಟು ಹಂಚಿದ್ದೀರಿ ಎನ್ನುವುದನ್ನು ಹೇಳಿದ್ದೀರಿ. ನೀವು ಕೊಟ್ಟಿರತಕ್ಕ ಅಂಕಿ ಅಂಶಗಳು ತಪ್ಪು. ಹಳ್ಳಿ ಪ್ರದೇಶಗಳಲ್ಲಾಗಲೀ, ನಗರ ಪ್ರದೇಶಗಳಲ್ಲಾಗಲೀ, ಮನೆಗಳನ್ನು ಕೇಳತಕ್ಕವರ ಸಂಖ್ಯೆ ಎಷ್ಟು ? ನಿವೇಶನ ಕೇಳತಕ್ಕವರ ಸಂಖ್ಯೆ ಎಷ್ಟು ಎಂಬುದನ್ನು ಆಯವ್ಯಯ ಪತ್ರದಲ್ಲಿ ನಮೂದುಮಾಡಬೇಕು. ಎಷ್ಟು ಬೇಡಿಕೆ ಇದೆ. ನೀವು ಎಷ್ಟು ಕೊಟ್ಟಿದ್ದೀರಿ ಅದನ್ನೆಲ್ಲಾ ಇದರಲ್ಲಿ ನಮೂದಿಸಬೇಕಾಗಿತ್ತು. ಅವರು 150 ರೂಪಾಯಿ ಕೇಳಿದ್ದು, ನೀವು 5 ರೂಪಾಯಿ ಕೊಟ್ಟಿದ್ದರೆ, ಅದನ್ನೆಲ್ಲಾ ಇದರಲ್ಲಿ ನಮೂದಿಸಿದ್ದರೆ ನಾವು ಅದನ್ನು ಗುರುತಿಸಬಹುದಾಗಿತ್ತು. ನಿವೇಶನಗಳನ್ನು ಮಾಡಲಿಕ್ಕೆ ಇಡೀ ರಾಜ್ಯಕ್ಕೆ 55 ಸಾವಿರ ರೂಪಾಯಿ ಇಟ್ಟರೆ, ಲೆಕ್ಕಚಾರ ಹಾಕಿದರೆ ಅದು ಎಷ್ಟು ಬರುತ್ತದೆ ? ಲೇಔಟ್ ಫಾರಂ ಮಾಡಲಿಕ್ಕೆ ತಾಲ್ಲೂಕು ಬೋರ್ಡ್‌ಗಳಿಗೆ ಹಣ ಕೊಡಬೇಕು ನೀವು ಹಣ ಕೊಟ್ಟರೆ ಮಾತ್ರ ಅವರು ಲೇಔಟ್‌ಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ನನಗೆ ಗೊತ್ತಿರುವ ಹಾಗೆ 1974 ರಿಂದ 1978ರ ವರೆಗೆ ಮಲೆನಾಡು ಪ್ರದೇಶಗಳಲ್ಲಿ ಮನೆ ನಿವೇಶನಗಳನ್ನು ಕೊಡುವುದಕ್ಕೆ ಅರಣ್ಯ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಿದ್ದರು. ಅರಣ್ಯ ಪ್ರದೇಶಗಳಲ್ಲಿ ಮನೆ ನಿವೇಶನಗಳನ್ನು ಕೊಡತಕ್ಕ ಒಂದು ಕಾರ್ಯಕ್ರಮ ಜಾರಿಗೆ ಬಂತು. ಈಗ ಅರಣ್ಯ ಇಲಾಖೆಯ ಅಧಿಕಾರಿಗಳು ಅರಣ್ಯ ಭೂಮಿಯನ್ನು ಮನೆ ನಿವೇಶನಗಳಿಗೆ ಕೊಡುವುದಕ್ಕೆ ಆಗುವುದಿಲ್ಲವೆಂದು ತಿಳಿಸಿದ್ದಾರೆ ನೀವು ಅಧಿಕಾರಕ್ಕೆ ಬಂದಮೇಲೆ ಎಷ್ಟು ನಿವೇಶನಗಳನ್ನು ಕೊಟ್ಟಿದ್ದೀರಿ ? ಈಗ ಅರಣ್ಯ ಇಲಾಖೆಯವರು ಭೂಮಿಯನ್ನು ಕೊಡದೆ ಇರುವುದರಿಂದ ನೀವು ಯಾವ ರೀತಿ ನಿವೇಶನಗಳನ್ನು ಕೊಡುತ್ತಿದ್ದೀರಿ ? ಬಯಲು ಪ್ರದೇಶಗಳಲ್ಲಿ ರೆವಿನ್ಯೂ ಭೂಮಿಯನ್ನು ಬಿಟ್ಟರೆ ಗ್ರಾಮಠಾಣಗಳಲ್ಲಿ ನಿಮಗೆ ಜಾಗ ಸಿಕ್ಕುವುದಿಲ್ಲ ನೀವು ಜನರಿಗೆ ಸೈಟುಗಳನ್ನು ಕೊಡುವುದಕ್ಕೆ ಸಾಧ್ಯವಿದೆಯೆ ? ಜನ ಸಾಮಾನ್ಯರ ಬೇಡಿಕೆ ಎಷ್ಟಿತ್ತು ? ನೀವು ಅವರ ಬೇಡಿಕೆಯನ್ನು ಎಷ್ಟು ಪೂರೈಸಿದ್ದೀರಿ ? ಮನೆಗಳ ಬೇಡಿಕೆ ಈ ಆಯವ್ಯಯ ಪತ್ರದಲ್ಲಿ ಕಾಣುತ್ತಿಲ್ಲ. ನಾನು ಮುಖ್ಯಮಂತ್ರಿಗಳಿಗೆ ಹೇಳಬೇಕಾಗಿದೆ, ನೀವು ಇಟ್ಟಿರತಕ್ಕ ಆಯವ್ಯಯಪತ್ರದಲ್ಲಿ ಅನೇಕ ಅಂಕಿ ಅಂಶಗಳನ್ನು ಮುಚ್ಚಿಟ್ಟಿದ್ದೀರಿ, ನೀವು ಜನಸಾಮಾನ್ಯರ ಬಗ್ಗೆ ಏನನ್ನೂ ಪ್ರಸ್ತಾಪ ಮಾಡಿಲ್ಲ. ಮನೆ ಮತ್ತು ನಿವೇಶನಗಳಿಗಾಗಿ ರಾಜ್ಯದಲ್ಲಿ ಎಷ್ಟು ಮನವಿಗಳು ಬಂದವು ? ನೀವು ತಾಲ್ಲೂಕು ಬೋರ್ಡ್‌ಗಳಿಂದ ಎಷ್ಟು ಲೇಔಟ್ ಮಾಡಿದ್ದೀರಿ ? ಲೇಔಟ್ ಮಾಡುವುದಕ್ಕೆ ಎಷ್ಟು ಹಣ ಬೇಕು ? ನಮ್ಮಲ್ಲಿ ಹಣದ ಕೊರತೆಯಿರುವುದರಿಂದ ಇಷ್ಟು ಹಣವನ್ನು ಕೊಟ್ಟಿದ್ದೇವೆಂದು ಹೇಳಬೇಕಾಗಿತ್ತು. ಹುಡ್ಕೋ ಯೋಜನೆಯಿಂದ ಇಷ್ಟು ಮನೆಗಳನ್ನು ಕೊಟ್ಟಿದ್ದೇವೆ, ನಮ್ಮ ರಾಜ್ಯ ಸರ್ಕಾರದ ಯೋಜನೆಯಿಂದ ಇಷ್ಟು ಮನೆಗಳನ್ನು ಕೊಟ್ಟಿದ್ದೇವೆ. ಇಂಥಿಂಥಾ ಕಡೆಯಿಂದ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳುತ್ತಿದ್ದೇವೆಂದು ಹೇಳಿದ್ದರೆ ನಾವು ಎಲ್ಲರೂ ನಿಜವಾಗಿಯೂ ಸಂತೋಷಪಡಬಹುದಾಗಿತ್ತು. ಆ ಮಾತಿನ ಪ್ರಸ್ತಾಪವೇ ಈ ಆಯವ್ಯಯ ಪತ್ರದಲ್ಲಿಲ್ಲ. ಆ ಒಂದು ಅಂಕಿ ಸಂಖ್ಯೆಗಳನ್ನು ಒಟ್ಟುಗೂಡಿಸುವುದಕ್ಕೆ ನಿಮ್ಮಿಂದ ಸಾಧ್ಯವಾಗಿಲ್ಲ. ನಿವೇಶನ ಕೊಡುವುದಕ್ಕಾಗಿ ನೀವು ಇಟ್ಟಿರತಕ್ಕ ಹಣ ಒಂದೊಂದು ಜಿಲ್ಲೆಗೆ ಎಷ್ಟು ಬರುತ್ತದೆ ಎನ್ನುವುದನ್ನು ನೀವು ಮುಚ್ಚಿಟ್ಟಿದ್ದೀರಿ. ನೀವು ಕೊಟ್ಟಿರತಕ್ಕ ಅಂಕಿ ಅಂಶಗಳ ಆಧಾರದ ಮೇಲೆ ಹೇಳುವುದಾದರೆ ಜನಸಾಮಾನ್ಯರ ಪ್ರೀತಿ ವಿಶ್ವಾಸವನ್ನು ನೇರವಾಗಿ ನೀವು ಪಡೆಯಲಿಕ್ಕೆ ಸಾಧ್ಯವಾಗಿಲ್ಲ, ವಾಸ್ತ

ವಾಂಶಗಳನ್ನು ಈ ಆಯವ್ಯಯ ಪತ್ರದಲ್ಲಿ ಮುಚ್ಚಿಟ್ಟಿದ್ದೀರಿ. ನಾನು ಉದಾಹರಣೆಗೆ ನಿವೇಶನ ಕೊಡುವ ಬಗ್ಗೆ ಮಾತ್ರ ಹೇಳಿದ್ದೇನೆ, ಇನ್ನೂ ಅನೇಕ ವಿಚಾರಗಳು ಇವೆ. ಮನೆ ನಿವೇಶನ ಬೇಕೆಂದು ಅರ್ಜಿ ಕೊಟ್ಟ ಎಲ್ಲರಿಗೂ ನಿವೇಶನ ಕೊಡಲಿಕ್ಕೆ ಸಾಧ್ಯವಿಲ್ಲ ಅದನ್ನು ನಾನು ಒಪ್ಪುತ್ತೇನೆ. ಹಿಂದಿನ ಸರ್ಕಾರ ಎನ್ನುವ ಮಾತನ್ನು ಹೇಳಿರುವುದರಿಂದ ನಾನು ಈ ಮಾತನ್ನು ಹೇಳಬೇಕಾಗಿದೆ ಅಂಕಿ ಅಂಶ ಗಳನ್ನು ಮುಚ್ಚಿಟ್ಟಿರುವುದರಿಂದ ನೀವು ಜನಸಾಮಾನ್ಯರಿಗೆ ಎಷ್ಟು ಅನುಕೂಲ ಮಾಡಿದ್ದೀರಿ ಎನ್ನುವ ವಾಸ್ತವಾಂಶವನ್ನು ಪತ್ತೆ ಹಚ್ಚಬೇಕಾಗಿದೆ. ವಾಸ್ತವಾಂಶವನ್ನು ಪತ್ತೆಹಚ್ಚಿ, ಸರ್ಕಾರದ ಮೇಲೆ ಜವಾಬ್ದಾರಿಯನ್ನು ಹೊರಿಸಬೇಕಾಗುತ್ತದೆ. ನಿವೇಶನ ಮತ್ತು ಮನೆಯನ್ನು ಪಡೆಯದಿರತಕ್ಕ ಜನರು ನಿಮಗೆ ಯಾವ ರೀತಿಯ ಸಹಕಾರ ಕೊಟ್ಟಿದ್ದಾರೆ? ಅಪಾರ ಸಹಕಾರ ದೊರೆತಿದೆಯೆಂದು ಹೇಳಿಕೊಳ್ಳುತ್ತೀರಿ. ಕಳೆದ ಒಂದು ವರ್ಷದಲ್ಲಿ ಬಡವರಿಗೆ ಎಷ್ಟು ಮನೆಗಳನ್ನು ಕೊಟ್ಟಿದ್ದೀರಿ? 'ದುರ್ಬಲ ವರ್ಗದವರ ಪ್ರೀತಿ ವಿಶ್ವಾಸವನ್ನು ಗಳಿಸಲಿಕ್ಕೆ ನಿಮ್ಮಿಂದ ಎಂದೂ ಸಾಧ್ಯವಿಲ್ಲ' ವೆಂದು ನಾನು ಹೇಳುತ್ತಿದ್ದೇನೆ. ನಾನು ಇದಕ್ಕೆ ಒಂದು ಉದಾಹರಣೆ ಕೊಡಬೇಕಾಗುತ್ತದೆ: 'ಒಬ್ಬ ರಾಜ ಇರುತ್ತಾನೆ, ಅವನಿಗೆ ತನ್ನ ರಾಜ್ಯದಲ್ಲಿ ಪ್ರಜೆಗಳು ಯಾವ ರೀತಿ ಇದ್ದಾರೆ, ಸೈನ್ಯ ಎಷ್ಟಿದೆ ಯಾವುದೊಂದು ಗೊತ್ತಿರುವುದಿಲ್ಲ. ನನ್ನದೇ ಸಂಸ್ಥಾನವೆಂದು ತಿಳಿದುಕೊಂಡು ಬಿಟ್ಟಿರುತ್ತಾನೆ. ಸಿಂಹಾಸನದ ಮೇಲೆ ಮೊಳೆ ಹೊಡೆಸಿಕೊಂಡು ಕುಳಿತುಕೊಂಡು ಬಿಟ್ಟಿರುತ್ತಾನೆ, ತನಗೆ ತಾನೇ ಜಯ ಘೋಷ ಹಾಕಿಕೊಳ್ಳುತ್ತಾನೆ 'ಮಹಾರಾಜ್ ಕಿ ಜೈ' ಎಂದು ಅವನೇ ಸ್ವಯಂಪ್ರೇರಣೆಯಿಂದ ಹೇಳತಕ್ಕ ಮಾತು. ಆ ರೀತಿ ಇವರು ಏನು ಹೇಳಿಕೊಂಡಿದ್ದಾರೆಂದರೆ 'ದುರ್ಬಲ ವರ್ಗಗಳಿಂದ ಅಪಾರ ಪ್ರಮಾಣ ದಲ್ಲಿ ದೊರೆತ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇನೆ' ಇಷ್ಟು ಹೇಳಿದ ಕೂಡಲೇ ದುರ್ಬಲ ವರ್ಗದವರು ಇವರಿಗೆ ಖಾಯಂ ಆಗಿ ಆಶೀರ್ವಾದ ಮಾಡುತ್ತಾರೆಂದು ತಿಳಿದುಕೊಂಡಿದ್ದಾರೆ ದುರ್ಬಲ ವರ್ಗದವರ ಆಶೀರ್ವಾದವನ್ನು 1983ನೇ ಚುನಾವಣೆಯಲ್ಲಿ ನಾವು ಪಡೆದುಲಿಕ್ಕೆ ಎಷ್ಟು ಕಷ್ಟವಾಯಿತು ಎಂಬುದು ಎಲ್ಲರಿಗೂ ಗೊತ್ತಿದೆ. ಸಂಪೂರ್ಣವಾಗಿ ದುರ್ಬಲ ವರ್ಗದವರ ಆಶೀರ್ವಾದ ಪಡೆಯಕೊಳ್ಳಲಿಕ್ಕೆ ನಮ್ಮಿಂದ ಸಾಧ್ಯವಾಗಲಿಲ್ಲ ದುರ್ಬಲವರ್ಗದವರ ಸಂಪೂರ್ಣವಾದ ಆಶೀರ್ವಾದ ನಿಮ್ಮ ಮೇಲೆ ಇದಿದ್ದರೆ ಸಿ ಪಿ ಐ, ಸಿ ಪಿ ಐ (ಎಂ), ಬಿ. ಜೆ. ಪಿ. ಮತ್ತು ಪಕ್ಷೇತರ ಬೆಂಬಲ ಪಡೆಯುತಕ್ಕ ಸಂದರ್ಭ ಬರುತ್ತಿರಲಿಲ್ಲ.

ಶ್ರೀ ಪಿ. ತಿಪ್ಪಯ್ಯ.—18 ಜನ ದುರ್ಬಲ ವರ್ಗದ ಸದಸ್ಯರು ಆಡಳಿತ ಪಕ್ಷದ ಕಡೆ ಇದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಅವರೆಲ್ಲಾ ಯಾವ್ಯಾವ ಪಕ್ಷದಿಂದ ಬಂದವರು ಎಂದು ನನಗೆ ಗೊತ್ತಿದೆ. ಜನಸಾಮಾನ್ಯರ ಬೆಂಬಲವನ್ನು ಗಳಿಸದೆ ಇರತಕ್ಕ ಇವರು 'ಅಪಾರವಾದ ಸಹಕಾರ ದುರ್ಬಲ ವರ್ಗದವರ ಕಡೆಯಿಂದ ಇವೆಯೆಂದು ಹೇಳಿಕೊಳ್ಳುತ್ತಿದ್ದಾರೆ' ಅವರನ್ನು ಅವರೇ ಹಾಡಿ ಹೊಗಳಿಕೊಳ್ಳತಕ್ಕ ಕೆಲಸ ವನ್ನು ಮಾನ್ಯ ಮುಖ್ಯ ಮಂತ್ರಿಗಳು ಅವರ ಆಯವ್ಯಯ ಪತ್ರದಲ್ಲಿ ಸ್ಪಷ್ಟವಾಗಿ ಇಟ್ಟಿದ್ದಾರೆ.

ಇನ್ನು ಹರಿಜನರ ಬಗ್ಗೆ ಮತ್ತೊಂದು ಆಜ್ಞೆ ಹೊರಡಿಸಿದರು. ಅದೇನೆಂದರೆ ಸ್ನಾತಕೋತ್ತರ ಪದವೀಧರರಾಗಿರತಕ್ಕ ಹರಿಜನ ಗಿರಿಜನ ಅಭ್ಯರ್ಥಿಗಳು ಯಾರು ಹೆಚ್ಚಿನ ಅಂಕಗಳನ್ನು ಪಡೆದುಕೊಂಡಿರುತ್ತಾರೆ ಅವರು ಲೋಕಸೇವಾ ಆಯೋಗದಿಂದ ಆಯ್ಕೆಯಾಗಬೇಕಾಗಿಲ್ಲ ಅಂತಹವರನ್ನು ಸರ್ಕಾರವೇ ನೇರವಾಗಿ ಗೆಜೆಟೆಡ್ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುತ್ತದೆಂದು ಕಳೆದ ಸಾಲಿನ ಆಯವ್ಯಯ ಪತ್ರ ದಲ್ಲಿ ಹೇಳಿದ್ದಾರೆ. ಇವತ್ತು ಅದರ ಬಗ್ಗೆ ಸರ್ಕಾರಿ ಆಜ್ಞೆ ಆಗಿದೆಯೆ?

ಶ್ರೀ ಕೆ. ಎಚ್. ರಂಗನಾಥ್.—ಬೇಕಾದರೆ ಒಂದೇ ದಿನಸದಲ್ಲಿ ಪೋಸ್ಟ್ ಕ್ರಿಯೇಟ್ ಆಗಿ ಒಂದೇ ದಿವಸದಲ್ಲಿ ಆರ್ಡರ್ ಆಗಿಬಿಡುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಸಮಾಜದಲ್ಲಿರತಕ್ಕಂಥ ದುರ್ಬಲ ವರ್ಗದವರ ಬಗ್ಗೆ ತಾವು ಕೊಟ್ಟ ಭರವಸೆ ಗಳೇನು, ಈಡಿದವಾಗ್ದಾನಗಳೇನು? ಒಂದು ಮಾತನ್ನು ಹೇಳಿದಮೇಲೆ ಅದನ್ನು ತಾವು ನಡೆಸಿಕೊಡಬೇಕು ಅಂಥಾ ಸ್ಥೈರ್ಯ ಇರಬೇಕು ಈ ಸಂಬಂಧವಾಗಿ ಟೀಕೆ, ದೂಷಣೆಗಳು ಬಂದರೆ ಅದನ್ನು ಎದುರಿಸತಕ್ಕಂಥ ಧೈರ್ಯ ಕೂಡ ಬರಬೇಕು. ಇದು ನೀವು ಹಾಕಿಕೊಳ್ಳುವ ಆಧಾರದ ಮೇಲೆ ಬರಬೇಕಾಗುತ್ತದೆ. ಸರ್ಕಾರಿ ಆಜ್ಞೆ ಹೊರಡಿಸುವುದಕ್ಕೆ ಒಂದು ವರ್ಷ ಆಗಿಲ್ಲ. ಸಮಾಜದಲ್ಲಿರತಕ್ಕಂಥ ದುರ್ಬಲ ವರ್ಗದವರ ಬಗ್ಗೆ ಹೇಳಿಕೊಳ್ಳತಕ್ಕದ್ದು, ಭಾಷಣ ಮಾಡತಕ್ಕದ್ದು ನಿಮಗೇನು ಹಕ್ಕು ಇದೆಯೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಕೇಳಬಯಸುತ್ತೇನೆ ಮಾನ್ಯ ಅಧ್ಯಕ್ಷರೇ, ಇದು ಹಿಂದುಳಿದ ವರ್ಗ ಗಳ ಅಲ್ಪಸಂಖ್ಯಾತರ ವರ್ಗಗಳ ಬೆಂಬಲ ಪಡೆದುಕೊಂಡು ಅಧಿಕಾರಕ್ಕೆ ಬಂದತಂಹ ಸರ್ಕಾರ. ಈ ಬಜೆಟ್ಟನ್ನು ಅವಲೋಕನ ಮಾಡಿದಾಗ ಹಿಂದುಳಿದ ವರ್ಗಗಳು, ಅಲ್ಪ ಸಂಖ್ಯಾತರು ಇವರ ಬಗ್ಗೆ ಯಾವುದೇ

ಒಂದು ಕಾರ್ಯಕ್ರಮದ ಪ್ರಸ್ತಾಪ ಇಲ್ಲ. ಸ್ಪಷ್ಟವಾದ ಯಾವ ಒಂದು ಯೋಜನೆಯೂ ಇಲ್ಲ. ಅದಕ್ಕಾಗಿ ಹಣವನ್ನೂ ಕೂಡ ತೆಗೆದಿಟ್ಟಿಲ್ಲ. ಯಾವ ವರ್ಗದ ಬೆಂಬಲ ಪಡೆದು ಸರ್ಕಾರ ರಚನೆ ಆಯಿತೋ, ಈಗ ಸಂಪೂರ್ಣವಾಗಿ ಆ ವರ್ಗಗಳನ್ನು ತುಳಿದುಹಾಕತಕ್ಕಂಥ ಮಟ್ಟಕ್ಕೆ ನಿಮ್ಮ ಯೋಜನೆಗಳು ಇದ್ದಿರಬೇಕೆಂಬುದು ನನ್ನ ಯೋಚನೆ. ಹಿಂದಿನ ಬಜೆಟ್ಟಿನಲ್ಲಿ ಇದರ ಬಗ್ಗೆ ಪ್ರಸ್ತಾಪವನ್ನಾದರೂ ಮಾಡಿದ್ದೀರಿ. ಈ ಸಲದ ಬಜೆಟ್ಟಿನಲ್ಲಿ ಪ್ರಸ್ತಾಪವೇ ಇಲ್ಲ. ಈ ಬಜೆಟ್ಟನ್ನು ಅವಲೋಕನ ಮಾಡಿದಾಗ, ಕೊರತೆ ಇರತಕ್ಕಂಥ ಬಜೆಟ್ಟನ್ನು ಪ್ರತಿವರ್ಷವೂ ನೋಡುತ್ತಿದ್ದೇವೆ. ನಾನು ಇದನ್ನು ಹೇಳುವಾಗ ಕೊರತೆ ಇರತಕ್ಕಂಥ ಬಜೆಟ್ ಇರಬಾರದು ಎಂದು ನನ್ನ ಭಾವನೆ ಅಲ್ಲ. ನಮ್ಮ ಯೋಜನೆಗಳ ಗಾತ್ರ; ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದು ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಕೆಲವೊಮ್ಮೆ ಬಜೆಟ್ ತಯಾರು ಮಾಡತಕ್ಕಂಥ ಸಂದರ್ಭದಲ್ಲಿ ಕೊರತೆ ಅನಿವಾರ್ಯವಾಗುತ್ತದೆ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಸರ್ಕಾರ ತಯಾರು ಮಾಡಿದಂಥ ಈ ಬಜೆಟ್ಟಿನ ಬಗ್ಗೆ ವಿಚಾರ ಮಾಡಿದಾಗ ನನಗಂತೂ ಅನ್ನಿಸಿದೆ, ಏನೆಂದರೆ, ಉದಾಹರಣೆಯಾಗಿ ನೀರಾವರಿಯನ್ನು ತೆಗೆದುಕೊಂಡರೆ, "1983-84ರ 89 ಕೋಟಿ ರೂಪಾಯಿಗಳ ಯೋಜನಾ ಮೊತ್ತವನ್ನು 1984-85 ಕ್ಕೆ 98 ಕೋಟಿ ರೂಪಾಯಿಗಳಿಗೆ ಏರಿಸಿದ್ದೇವೆ"- ಒಂದು ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಹಣದ ಗಾತ್ರ ಜಾಸ್ತಿ ಆಗಲೇಬೇಕು. ಅಲ್ಲಿ ಕಾಸ್ಟ್ ಕೂಡ ಜಾಸ್ತಿಯಾಗುತ್ತದೆ. ನನಗೆ ಗೊತ್ತಿರುವಹಾಗೆ 1983-84 ರಲ್ಲಿ ನಿರಾವರಿ ಯೋಜನೆಯ ಗಾತ್ರ 89 ಕೋಟಿ ರೂಪಾಯಿ ಇದ್ದುದನ್ನು 1984-85 ಕ್ಕೆ 98 ಕೋಟಿಗೆ ಹೆಚ್ಚಿಸಿದ್ದಾರೆ. ಇದರಲ್ಲಿ ಕಾವೇರಿ ಜಲಾನಯನ ಪ್ರದೇಶದ ಮೊತ್ತವನ್ನು ಸೀಮಿತಗೊಳಿಸಿದ್ದಾರೆ. ಇಲ್ಲಿ 65.56 ಕೋಟಿ ರೂಪಾಯಿಗೆ ಇದನ್ನು ಏರಿಸಿದ್ದಾರೆ. 98 ಕೋಟಿಯಲ್ಲಿ ಈ 65-56 ಕೋಟಿಯನ್ನು ಕಳೆದು ಬಿಟ್ಟರೆ ಉಳಿದಿರತಕ್ಕಂಥ ಹಣ ಕೃಷ್ಣಾ ಮೇಲ್ದಂಡೆ ಯೋಜನೆ ಮತ್ತು ಬೇರೆ ಬೇರೆ ಯೋಜನೆಗಳಿಗೆ ಸಂಬಂಧಪಟ್ಟದ್ದು. 98 ಕೋಟಿ ಯಲ್ಲಿ 66 ಕೋಟಿ ಕಳೆದುಬಿಟ್ಟರೆ ಎಷ್ಟು ಉಳಿಯುತ್ತದೆ? 32 ಕೋಟಿ ರೂಪಾಯಿಗಳು ಮಾತ್ರ ಉಳಿಯುತ್ತದೆ. ಅಂದರೆ 32 ಕೋಟಿ ರೂಪಾಯಿಗಳನ್ನು ಮಾತ್ರ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಉಳಿದ ಎಲ್ಲಾ ನೀರಾವರಿ ಯೋಜನೆಗಳಿಗೆ ತೆಗೆದಿಟ್ಟಿದ್ದೀರಿ. ಹೈದರಾಬಾದ್ ಕರ್ನಾಟಕ ಭಾಗ ಮೊದಲುಗೊಂಡು ಬೇರೆಬೇರೆ ಜಲಾಶಯಗಳಿವೆ. ಮಲಪ್ರಭಾ, ಘಟಪ್ರಭಾ, ಬೊಂಬಾಯಿ ಕರ್ನಾಟಕ ಭಾಗದಲ್ಲಿ, ಬೀದರ್ ಜಿಲ್ಲೆಯಲ್ಲಿ ಹಾಗೇಯೇ ಉಳಿದುಕೊಂಡಿದೆ. ಅಪ್ಪರ್ ಕೃಷ್ಣಾ ಇದೆ. ನಾನು ಇಲ್ಲಿ ಕಾವೇರಿ ಜಲಾನಯನ ಪ್ರದೇಶವನ್ನು ಬಿಟ್ಟು ಮಾತನಾಡುತ್ತಿದ್ದೇನೆ. ಬರೇ ಮೂವತ್ತು ಕೋಟಿ ರೂಪಾಯಿಗಳಿಂದ ಎಷ್ಟು ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಸಾಧ್ಯ ಆಗುತ್ತದೆ ಎನ್ನುವುದು ಇಲ್ಲಿನ ಪ್ರಶ್ನೆ. ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಯಾವಾಗಲೂ ಬರಗಾಲ ತಾಂಡವವಾಡುತ್ತದೆ. ಮಾತ್ರವಲ್ಲ ಬಿಜಾಪುರ ಜಿಲ್ಲೆಯಲ್ಲಿ ಕೂಡ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ನೀರಾವರಿಗೆ ಹಣ ಇಟ್ಟಿರುವುದನ್ನು ನೋಡಿದರೆ ಕಾವೇರಿ ಜಲಾನಯನ ಪ್ರದೇಶಕ್ಕೆ ಕೊಟ್ಟದ್ದು 66 ಕೋಟಿ. ಕೃಷ್ಣಾ, ಮಲಪ್ರಭಾ, ಘಟಪ್ರಭಾ ಮೊದಲಾದ ದೊಡ್ಡ ನೀರಾವರಿ ಯೋಜನೆಗಳು ಏನಿವೆ ಅವುಗಳನ್ನು ಪೂರೈಸುವ ಬಗ್ಗೆ ಬಹಳ ಕಡಿಮೆ ಹಣ ಇಟ್ಟಿದ್ದೀರಿ. ಅಂದಮೇಲೆ ಮುಂದೆ ಬರತಕ್ಕಂಥ ವರ್ಷಗಳಲ್ಲಿ ಇದೇ ಗಾತ್ರದಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತದೆಯೋ ? ಸಂಬಳ ಸಾರಿಗೆ, ಮೆಶಿನರಿಗೆ ಅಂತ ಅರ್ಧ ಭಾಗಕ್ಕಿಂತಲೂ ಕಡಿಮೆ ಇಲ್ಲದಂತೆ ಹೊರಟು ಹೋಗಿರುತ್ತದೆ. ಇನ್ನು ಉಳಿದಿರತಕ್ಕಂಥ ಹದಿನಾರು ಕೋಟಿ ರೂಪಾಯಿಗಳಲ್ಲಿ ನನಗೆ ಗೊತ್ತಿರುವಹಾಗೆ ಎಷ್ಟು ನೀರಾವರಿಯನ್ನು ಕೊಡುವುದಕ್ಕೆ ಸಾಧ್ಯವೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳುತ್ತೇನೆ. ಆದ್ದರಿಂದ ನೀವು ಇಟ್ಟಿರತಕ್ಕಂಥ ಹಣ ನೋಡಿದರೆ

ಶ್ರೀ ಬಾಪುಗೌಡ ದರ್ಶನಾಪುರ --ಕಾವೇರಿ ಬೇಸಿನ್‌ಗೆ ಇಟ್ಟಿರುವ ಹಣ ಸರಿ ಇದೆ. ಕೃಷ್ಣಾ ಬೇಸಿನ್‌ಗೆ ಇಟ್ಟಿರುವ ಹಣ 80 ಕೋಟಿ ಇದೆ

ಶ್ರೀ ಕೆ ಎಚ್. ರಂಗನಾಥ್ --ಘಟಪ್ರಭಾ, ಮಲಪ್ರಭಾ ಸರಿ ಸ್ವಾಮಿ. ಘಟಪ್ರಭಾ ಮಲಪ್ರಭಾ ಯಾವ ಕಾಲದಲ್ಲಿ ಶುರುವಾಗಿದ್ದು ? ಕೃಷ್ಣಾ ಬೇಸಿನ್ ತೆಗೆದುಕೊಂಡಿದ್ದು ಯಾವಾಗ ?

ಶ್ರೀ ಬಾಪುಗೌಡ ದರ್ಶನಾಪುರ --ನನ್ನ ಮುಂದಿನ ಮಾತು ಕೇಳಿ

ಶ್ರೀ ಕೆ ಎಚ್. ರಂಗನಾಥ್.--ಕಾವೇರಿ ಬೇಸಿನ್‌ಗೆ ಯಾವ ಪ್ರಮಾಣದಲ್ಲಿ ಹಣ ಇಟ್ಟಿದ್ದಾರೆ, ಅದೇ ಪ್ರಮಾಣದಲ್ಲಿ ಇಟ್ಟರೆ ನಾಲ್ಕು ವರ್ಷಗಳಲ್ಲಿ ಈ ಯೋಜನೆ ಮುಗಿದುಹೋಗುತ್ತದೆ

ಶ್ರೀ ಕೆ ಎಚ್. ರಂಗನಾಥ್ —ಜಾಸ್ತಿ ಮಾಡಿ. ನಾವು ಬೇಡ ಎನ್ನುವುದಿಲ್ಲ. ಕೃಷ್ಣಾ ಬೇಸಿನ್ ಕೆಲಸ 74ಕ್ಕೆ ಮುಗಿಯಬೇಕಿತ್ತು

ಶ್ರೀ ಬಾಪೂಗೌಡ ದರ್ಶನಾಪುರ.—ಕಾವೇರಿ ಬೇಸಿನ್‌ಗೆ ಪ್ರತಿವರ್ಷ ಇಷ್ಟು ಹಣ ಇಟ್ಟರೆ ನಾಲ್ಕು

ವರ್ಷಗಳಲ್ಲಿ ಇದು ಮುಗಿಯುತ್ತದೆ. ಕೃಷ್ಣಾ ಬೇಸಿನ್‌ಗೆ ಇಟ್ಟಿದ್ದು ಕಡಿಮೆ ಇದೆ. ಅದರ 20 30 ಕೋಟಿ ಅಲ್ಲ. ಪ್ರತಿವರ್ಷ 60 ಕೋಟಿ ಕೊಡುವ ಪ್ರಯತ್ನ ಮಾಡಿದ್ದಾರೆ. ಇದೇ ರೀತಿ ಹಣ ಇಟ್ಟರೆ ಕೃಷ್ಣಾ ಯೋಜನೆಯ ಮೊದಲ ಹಂತ ಮುಗಿಯುವುದಕ್ಕೆ ಬಹಳ ವರ್ಷಗಳೇ ಬೇಕಾಗುತ್ತವೆ. ಈ ರೀತಿ ಹಣ ಇಟ್ಟರೆ ಸರಿಯಲ್ಲವೆಂದು ನಾನು ಕೂಡ ಒಪ್ಪುತ್ತೇನೆ

ಶ್ರೀ ಕೆ ಹೆಚ್. ರಂಗನಾಥ್ —ಬರೇ ಅಪ್ಪರ್ ಕೃಷ್ಣಾ ಅಲ್ಲ. ತುಂಗಭದ್ರಾದಿಂದ ಒಂದು ಹನಿ ಕೂಡ ತೆಗೆದುಕೊಳ್ಳಬಾರದು ಎಂದು ಅವಾರ್ಡ್ ಆಯಿತು ಇದಕ್ಕೆ ಕಾರಣ ಏನು ? ಇಂತಹ ಪರಿಸ್ಥಿತಿ ಏತಕ್ಕೆ ಬಂತು ?

ಶ್ರೀ ಬಾಪೂಗೌಡ ದರ್ಶನಾಪುರ.—ನಿಮ್ಮ ಕಾಲದಲ್ಲಿ ಹತ್ತು ವರ್ಷಗಳಲ್ಲಿ ಏನು ಆಯಿತು ?

ಶ್ರೀ ಕೆ. ಎಚ್, ರಂಗನಾಥ್.—ಮುಖ್ಯಮಂತ್ರಿಗಳೂ ಕೂಡ ಇಲ್ಲಿ ಇದ್ದಾರೆ. ಏನು ಮಾತನಾಡುತ್ತೀರಿ ನೀವು ?

ಶ್ರೀ ಬಾಪೂಗೌಡ ದರ್ಶನಾಪುರ.--ವಿಶ್ವ ಬ್ಯಾಂಕ್, ಸಹಾಯಕ್ಕೆ ಬಂದಿದ್ದರಿಂದ ಇದು ಪ್ರಾರಂಭವಾಯಿತು.

ಶ್ರೀ ಕೆ. ಎಚ್. ರಂಗನಾಥ್ --ಮುಖ್ಯಮಂತ್ರಿಗಳು ಇಲ್ಲಿದ್ದಾರೆ. ವರ್ಲ್ಡ್ ಬ್ಯಾಂಕಿನಿಂದ ಬಂದದ್ದು ಎಷ್ಟು ? 24 ಲಕ್ಷ ಹೆಕ್ಟೇರ್‌ನಷ್ಟು ನೀರಾವರಿಯಾಗಿದೆ. ಎಕನಾಮಿಕ್ಸ್ ರಿವ್ಯೂ ನೋಡಿ. 24 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ವರ್ಲ್ಡ್ ಬ್ಯಾಂಕ್‌ನಿಂದ ಬಂದಿರುವುದು ಎಷ್ಟು ? ಎಲ್ಲಾ ನಾವೇ ಮಾಡಿರುವುದು.

ಶ್ರೀ ಬಾಪೂಗೌಡ ದರ್ಶನಾಪುರ.--ವರ್ಲ್ಡ್ ಬ್ಯಾಂಕ್ ಕೊಟ್ಟ ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂಥ ಯೋಗ್ಯತೆ ನಿಮಗೆ ಇರಲಿಲ್ಲ

ಶ್ರೀ ಕೆ. ಎಚ್ ರಂಗನಾಥ್ --ಮುಖ್ಯಮಂತ್ರಿಗಳು ಹಿಂದೆ ಅರ್ಥಿಕ ಮಂತ್ರಿಯಾಗಿದ್ದರು. ಒಬ್ಬ ಮಾನ್ಯ ಸದಸ್ಯರು ವಿಷಯ ಎತ್ತಿದಾಗ ಮಾನ್ಯ ಬಂಗಾರಪ್ಪನವರು ಇಲ್ಲಿದ್ದರು 1961ನೇ ಇಸವಿಯಾದ ಮೇಲೆ, ಕಾವೇರಿ ಬೇಸಿನ್ ನೀರಿನ ಬಗ್ಗೆ ಈ ಸದನ ಕಮಿಟಿಯನ್ನು ಮಾಡಿ ಹತ್ತು ಕೋಟಿ ಹೆಚ್ಚು ಸಂಪನ್ಮೂಲಗಳನ್ನು ಮಾಡುತ್ತೇವೆ ಎಂದು ತೋರಿಸಿಕೊಟ್ಟ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಹಣ ಒದಗಿಸಿದ್ದು ಉಂಟು. ಅಲ್ಲಿಂದ ಈಚೆಗೆ ನೀರಾವರಿಯಲ್ಲಿ ಟೆಂಪೋ ಕ್ರಿಯೇಟ್ ಆಯಿತು ಅದ್ದರಿಂದ ಹಳೆಯಕಾಲದ ವಿಷಯ ಗೊತ್ತಿಲ್ಲದವರು ಇಲ್ಲಿ ಇರುತ್ತಾರೆ ಎಂದು ಹೇಳಿದರೆ ಆಗುವುದಿಲ್ಲ ಇವತ್ತು ಯಾವುದು ಬೇಡ ? ಈ ರಾಜ್ಯದ ಅಭಿವೃದ್ಧಿ ಬೇಕೋ ಬೇಡವೋ ? ನಿನ್ನೆ ತಾನೆ ಎಕನಾಮಿಕ್ ರಿವ್ಯೂ ಕೊಟ್ಟಿದ್ದಾರೆ. ಓದಿ ಮಾತನಾಡಿ.

ಶ್ರೀ ಬಾಪೂಗೌಡ ದರ್ಶನಾಪುರ.--ಹಿಂದಿನ ಹತ್ತು ವರ್ಷಗಳಲ್ಲಿ ಕಾವೇರಿ ಬೇಸಿನ್‌ನಲ್ಲಿ ಹತ್ತು ಲಕ್ಷ ಎಕರೆಯಷ್ಟು ನೀರಾವರಿಯಾಗಿದೆ. ಕೃಷ್ಣಾ ಬೇಸಿನ್ ಪ್ರದೇಶದಲ್ಲಿ 30 ಲಕ್ಷ ಎಕರೆಯಷ್ಟು ನೀರಾವರಿಯಾಗಿದೆ.

## 3-30 M. P.

ಶ್ರೀ ಕೆ. ಎಚ್. ರಂಗನಾಥ.--ಕಾವೇರಿ ಬೇಸಿನ್‌ನಲ್ಲಿ ಎಷ್ಟು ಎಕರೆಗಳು ನೀರಾವರಿಯಾಗುತ್ತಿದೆ, ಹಾಗೂ ಕೃಷ್ಣಾ ಬೇಸಿನ್‌ನಲ್ಲಿ ಎಷ್ಟು ಲಕ್ಷ ಎಕರೆ ನೀರಾವರಿಯಾಗುತ್ತದೆ ಎಂಬುದನ್ನು ಸರ್ಕಾರ ಹೇಳಲಿ ಕಬಿನಿ ಪ್ರಾಜೆಕ್ಟನ್ನು ತೆಗೆದುಕೊಂಡದ್ದು ಯಾವಾಗ, ಅದರ ಎಸ್ಟಿಮೇಟ್ ಕಾಸ್ಟ್ ಎಷ್ಟು ಈವತ್ತು ಎಷ್ಟು ಎಕರೆಗಳನ್ನು ನೀರಾವರಿಗೆ ತರಲು ಎಸ್ಟಿಮೇಟ್ ಮಾಡಿತ್ತೋ ಅಷ್ಟು ಎಕರೆ ಭೂಮಿಯನ್ನು ನೀರಾವರಿಗೆ ಏತಕ್ಕೆ ತರಲಾಗಲಿಲ್ಲ ಎಂಬುದನ್ನು ಕೇಳುತ್ತೇನೆ. ಇದಕ್ಕೆ ಬೇಕಾಗುವಷ್ಟು ಹಣವನ್ನು ಏತಕ್ಕೆ ತೆಗೆದಿಟ್ಟಿಲ್ಲವೆಂದು ಕೇಳುತ್ತೇನೆ. ಇದರಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಪಾತ್ರವೂ ಇರುತ್ತದೆ ಮಾನ್ಯ ದೊಡ್ಡ ಬೋರೇಗೌಡರು ಸುಮ್ಮನೆ ಏತಕ್ಕೆ ಮಾತನಾಡುತ್ತಾರೆ. ಅಷ್ಟು ಲಘುವಾಗಿ ಮಾತನಾಡಬೇಡಿ

ಶ್ರೀ ಎಸ್. ಬಂಗಾರಪ್ಪ --ಮಾನ್ಯ ಸಭಾಧ್ಯಕ್ಷರೇ, ನನ್ನ ಮಾತಿನ ಅರ್ಥ ಇಷ್ಟೆ. ಈವತ್ತು ಕಾವೇರಿ ಜಲಾನಯನದಲ್ಲಿ ಆಗಬೇಕಾದಂಥ ಕೆಲಸಗಳಿಗೆ ಹಣವನ್ನು ಏನು ತೆಗೆದಿಟ್ಟಿರುತ್ತೀರಿ. ಅದು ಸಾಕಾಗುವುದಿಲ್ಲ ಇನ್ನಷ್ಟು ಹಣವನ್ನು ಜಾಸ್ತಿ ತೆಗೆದಿಟ್ಟು ಎಲ್ಲ ಕೆಲಸಗಳನ್ನು ಬೇಗನೆ ಮುಗಿಸತಕ್ಕಂಥ ವ್ಯವಸ್ಥೆ ಮಾಡಿದರೆ ಬಹಳ ಸಂತೋಷ. ಅದೇರೀತಿಯಲ್ಲಿ ಉತ್ತರ ಕರ್ನಾಟಕದಲ್ಲಿ ಬರತಕ್ಕಂಥ ಕೃಷ್ಣಾ ಮೇಲ್ದಂಡೆ, ಮಲಪ್ರಭಾ, ಘಟಪ್ರಭಾ ಪ್ರದೇಶದಲ್ಲಿ ಬರತಕ್ಕಂಥ ಟ್ರ್ಯಾನಲ್‌ವರ್ಕ್ಸ್ ಮುಗಿಸುವುದಕ್ಕೆ ಆಗಲಿ, ಕಾರಂಜಾ ಯೋಜನೆಗಾಗಲಿ, ಹಾಗೆಯೇ ಪೂರ್ಣವಾಗದೆ ಉಳಿದ ಇತರ ಯೋಜನೆಗಳಿಗೆ ಹಣವನ್ನು ಹೆಚ್ಚು ತೆಗೆದು ಇಡತಕ್ಕಂಥ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ. ಈವತ್ತು ಕರ್ನಾಟಕ

ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳಿಗೆ ಇಟ್ಟಿರತಕ್ಕಂಥ ಹಣ ಬಹಳ ಕಡಿಮೆ ಎಂದು ಎಲ್ಲರೂ ಮಾತನಾಡುತ್ತಿರುತ್ತಾರೆ. ಆದ್ದರಿಂದ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ತೊಡಗಿಸಿ ಸ್ವಲ್ಪ ಜನಸಾಮಾನ್ಯರಿಗೆ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ಈಗ ಈ ನೀರಾವರಿ ಯೋಜನೆಗಳಿಗೆ ತೆಗೆದಿಟ್ಟಿರತಕ್ಕಂಥ ಹಣವನ್ನು ನೋಡಿದರೆ ಸರ್ಕಾರಕ್ಕೆ ಸಾಮರ್ಥ್ಯವಿಲ್ಲ ಎಂದು ಅರ್ಥವಾಗುತ್ತದೆ. ಈಗಲೂ ಬಜೆಟ್ಟನ್ನು ರಿವೈಸ್‌ಮಾಡಬೇಕು. ಹಣವನ್ನು ಜಾಸ್ತಿ ಕೊಡಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕು. ಹಾಗೆ ಮಾಡದೇಹೋದರೆ ಹೈದರಾಬಾದ್, ಬಾಂಬೆ, ಕೃಷ್ಣಾ ಬೇಸಿನ್ ಭಾಗಗಳು ಏನೇನು ಬರುತ್ತದೆ ಅದೆಲ್ಲಾ ಪ್ರದೇಶಗಳಿಗೂ ಅನ್ಯಾಯ ಮಾಡಿದಂತಾಗುತ್ತದೆ ಎನ್ನುವ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ಇನ್ನು ಉದ್ಯಮಗಳ ಬಗ್ಗೆ ಮಾನ್ಯ ಬೊಮ್ಮಾಯಿಯವರು ಮಾಡಿದ ಭಾಷಣವನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಒಂದು ತಿಂಗಳಿಗೆ ಒಂದುಸಾವಿರ ಕೈಗಾರಿಕಾ ಘಟಕಗಳನ್ನು ಪ್ರಾರಂಭಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನೂ ಕೂಡ ಇದರಲ್ಲಿ ಬರೆದಿದ್ದಾರೆ. ಸಣ್ಣ ಪ್ರಮಾಣದ ಉದ್ಯಮ ಕೈಗಾರಿಕೆಗಳನ್ನು 750 ರ ಮಟ್ಟವನ್ನು ತಲುಪಿದ್ದೇವೆಂದು ಹೇಳಿದ್ದಾರೆ. ಮಾನ್ಯ ಬೊಮ್ಮಾಯಿಯವರ ಇಂಡಸ್ಟ್ರೀಸ್ ಎಲ್ಲಿ ಹೋಯಿತೋ ತಿಂಗಳಿಗೆ ಒಂದುಸಾವಿರ ಸಣ್ಣ ಉದ್ಯಮಗಳನ್ನು ಸ್ಥಾಪನೆ ಮಾಡುವಂಥದು ಎಲ್ಲಿ ಹೋಯಿತೋ ಗೊತ್ತಾಗುತ್ತಿಲ್ಲ. ಸುಮಾರು ಎಂಟುತಿಂಗಳಲ್ಲಿ ಅವರ ಲೆಕ್ಕದಂತೆ ಎಂಟುಸಾವಿರ ಘಟಕಗಳು ಆಗಬೇಕಾಗಿತ್ತು. ಆದರೆ ಇಡೀ ಕರ್ನಾಟಕದಲ್ಲಿ 750 ಘಟಕಗಳನ್ನು ಈ ಅವಧಿಯಲ್ಲಿ ಮಾಡಿರುತ್ತೇವೆಂದು ಹೇಳುವುದಾದರೆ ಸರ್ಕಾರದ ವೈಫಲ್ಯತೆಯನ್ನು ಇದರಿಂದ ಕಾಣಬಹುದಾಗಿರುತ್ತದೆ. ಸಂಪೂರ್ಣವಾಗಿ ಈ ಉದ್ಯಮ ಕ್ಷೇತ್ರದಲ್ಲಿ ವಿಫಲಗೊಂಡಿದ್ದಾರೆಂದು ಅಂಕಿಅಂಶಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ತಿಂಗಳಿಗೆ ಒಂದುಸಾವಿರ ಸಣ್ಣ ಸಣ್ಣ ಕೈಗಾರಿಕಾ ಘಟಕಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿರತಕ್ಕಂಥವರು ಒಟ್ಟು 750 ಘಟಕಗಳನ್ನು ಸ್ಥಾಪನೆ ಮಾಡಿರುತ್ತಾರೆಂದು ಹೇಳಿದರೆ, ಸಂಪೂರ್ಣವಾಗಿ ಈ ವಿಚಾರದಲ್ಲಿ ವಿಫಲರಾಗಿದ್ದಾರೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಇಲ್ಲಿ 1983-84 ರ ಅವಧಿಯಲ್ಲಿ ತಮ್ಮ ಸಾಧನೆಗಳ ಹೆಗ್ಗುರುತಿನ ಒಂದು ಪಟ್ಟಿ ಮಾಡಿ ಇಟ್ಟಿದ್ದೀರಿ. ಅದು ಚೆನ್ನಾಗಿ ಇದೆ. ಅನೇಕ ನಿಗಮಗಳನ್ನು ಮಾಡಿದ್ದೀರಿ. ಕುಶಲಕರ್ಮಿಗಳಿಗೆ ರಾಜ್ಯ ಪ್ರಶಸ್ತಿ ನೀಡುವಪದ್ಧತಿಯ ಪುನರಾರಂಭ, ಎಂದು ಹೇಳಿದ್ದಾರೆ. ಇದೊಂದು ದೊಡ್ಡ ಯೋಜನೆಯೆ ?

ವಿಕ್ರಾಂತ ಭಾರತ ಪತ್ರಿಕೆಯಲ್ಲಿ ರಾಜ್ಯ ಮುಂಗಡ ಪತ್ರದಲ್ಲಿ ರೈತರಿಗೆ ರಿಯಾಯತಿ ಕೊಡುವ ಬಗ್ಗೆ ಒಂದ್ ಕಾರ್ಟೂನ್ ಕೊಟ್ಟಿದ್ದಾರೆ. ಈ ಕಾರ್ಟೂನ್ ಬಹಳ ಚೆನ್ನಾಗಿದೆ. ರೈತರ ವಿಚಾರಕ್ಕೆ ಬಂದಾಗ ಅದರ ಬಗ್ಗೆ ಮಾತನಾಡುತ್ತೇನೆ.

ಕುಶಲ ಕರ್ಮಿಗಳಿಗೆ ಪ್ರಶಸ್ತಿ ಕೊಡತಕ್ಕಂಥ ಪದ್ಧತಿ. ಇದು ದೊಡ್ಡ ಯೋಜನೆಯೇನೂ ಅಲ್ಲ. ಯಾರು ಹೇಳಿದ್ದು ನಿಮಗೆ ಇದು ದೊಡ್ಡ ಯೋಜನೆ ಎಂದು ಪಟ್ಟಿ ಮಾಡತಕ್ಕಂಥ ಸಂದರ್ಭದಲ್ಲಿ ಕುಶಲ ಕರ್ಮಿಗಳ ಬಗ್ಗೆ ಬೇರೆ ಯಾವುದಾದರೂ ಯೋಜನೆ ತಯಾರು ಮಾಡಿ, ಪ್ರಶಸ್ತಿ ಕೊಡತಕ್ಕಂಥಾದ್ದು ಆ ಪದ್ಧತಿಯಲ್ಲಿನ ಒಂದು ಭಾಗ ಬರೀ ಮೆಡಲ್ ಸಿಕ್ಕಿಸುವುದು, ಸರ್ಟಿಫಿಕೇಟ್ ಕೊಡುವುದು ಇವೆಲ್ಲಾ ದೊಡ್ಡ ಯೋಜನೆ ಅಲ್ಲ. ಆದರೆ ಸಾಧನೆಗಳ ಪಟ್ಟಿಯಲ್ಲಿ ಇದೂ ಕೂಡಾ ಸೇರಿದೆ. ಇವೆಲ್ಲಾ ಕ್ರಾಂತಿಕಾರಕ ಬದಲಾವಣೆಗಳಲ್ಲ. ಇನ್ನು 20 ನೇ ನಂಬರ್‌ನಲ್ಲಿ 9ನೇ ಪಟ್ಟಿಯಲ್ಲಿ "ಭಾರತ ಸರ್ಕಾರದ ಯಾವುದೇ ನೆರವಿಲ್ಲದೆ ದೇಶದಲ್ಲೇ ಮೊಟ್ಟಮೊದಲ ಬಾರಿಗೆ ಉಣ್ಣೆ ನೇಕಾರರಿಗೆ ಸಾಂದ್ರ ಕ್ರಮಗ ಅಭಿವೃದ್ಧಿ ಯೋಜನೆಯ ಜಾರಿ. ರಾಜ್ಯ ಉಣ್ಣೆ ವಸ್ತ್ರಗಳ ಉತ್ಪಾದನೆಯಲ್ಲಿ ಕ್ರಾಂತಿಕಾರಕ ಪರಿವರ್ತನೆ ಸಂಭವಿಸಿತು ಎಂದು ಹೇಳಿದ್ದಾರೆ ಇದು ಬಹಳ ಚೆನ್ನಾಗಿದೆ" ಒಂದು ವರ್ಷದೊಳಗೆ ನಿಮ್ಮ ಆಡಳಿತದಲ್ಲಿ ಎಷ್ಟೊಂದು ಸಾಧನೆ ಮಾಡಬೇಕಾಗಿತ್ತೋ ಅದು ಆಗಿಲ್ಲ. ಆಗಬಹುದು ಎಂಬ ಹೇಗ್ಗಳಿಕೆಯ ಮಾತನಾಡುವ ಬದಲು ಇಷ್ಟು ಆಗಿದೆ ಎಂದು ಹೇಳಬಹುದಾಗಿತ್ತು. ಆಗಬಹುದು ಎಂದರೆ ಆಗಿದೆ ಎಂಬ ಭಾವನೆ ಅಲ್ಲ. ಇಂತಹ ಒಂದು ಅಭಿಪ್ರಾಯ ಹೇಗೆ ಎಂದರೆ Self proclaimed king ನಾನೇ ಚಕ್ರಾಧಿಪತಿ Sole Modarch ಎಂದು ಹೇಳಿಕೊಂಡು ಇದ್ದಹಾಗೆ ಹೋಗುತ್ತದೆ. ಸಾಧನೆ ಮಾಡಿ ಆಮೇಲೆ ಹೇಳಿಕೊಳ್ಳಬಹುದಾಗಿತ್ತು. ಅಂತಹಾದ್ದು ಈ ಕಾರ್ಯಕ್ರಮದ ಪಟ್ಟಿಯಲ್ಲಿ ಕಾಣುತ್ತಿಲ್ಲ.

ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ಅರಣ್ಯಾಭಿವೃದ್ಧಿಯ ಬಗ್ಗೆ ಒಂದು ಮಾತನ್ನು ಆಡಬೇಕು ಭಾರತ ಸರಕಾರದ ಅಂಕಿ ಅಂಶಗಳ ಪ್ರಕಾರ ಅರಣ್ಯ ಪ್ರದೇಶ ಶೇಕಡಾ 33 ರಷ್ಟು ಇರಬೇಕು. ಆದ್ದ

ನಾವು ಬಹಳ ಕಡಿಮೆ ಇದ್ದೇವೆ, ಅಂದರೆ 17 ಪರ್ಸೆಂಟ್ ಇದ್ದೇವೆ, ಇದು ನಮ್ಮ ಕರ್ನಾಟಕ ರಾಜ್ಯದಲ್ಲಿ ಜಾಸ್ತಿಯಾಗಬೇಕು ಇದಕ್ಕೆ ಯಾವುದೇ ಸರಕಾರ ಇದ್ದರೂ ಹಣವನ್ನು ತೊಡಗಿಸಿ, ಗಿಡಮರಗಳನ್ನು ಬೆಳೆಸತಕ್ಕ ಯೋಜನೆಗೆ ಗಮನ ಕೊಡಬೇಕು. ಮಾನ್ಯ ರಾಮಕೃಷ್ಣ ಹೆಗಡೆಯವರೂ ಮಲೆನಾಡು ಪ್ರದೇಶದಿಂದ ಬಂದವರು. ಮಾನ್ಯ ಜೀವಿಜಯ ಅವರೂ ಬಂದಿದ್ದಾರೆ, ನಾವೂ ಬಂದಿದ್ದೇವೆ. ಅನೇಕ ಶಾಸಕರೂ ಅಲ್ಲಿಂದ ಬರುತ್ತಿದ್ದಾರೆ. ಇವತ್ತು ಕಟ್ಟಿಗೆಯನ್ನು, ಉರುವಲು ಕಟ್ಟಿಗೆಯನ್ನಾಗಿ ಮಾರಿ ಜೀವನ ಮಾಡತಕ್ಕ ಜನ ಇದ್ದಾರೆ, ನನ್ನ ಕ್ಷೇತ್ರದಲ್ಲೂ ಇದ್ದಾರೆ. ಬೇರೆ ಬೇರೆ ಕ್ಷೇತ್ರದಲ್ಲೂ ಇದ್ದಾರೆ ಕಟ್ಟಿಗೆಯನ್ನು ಕಡಿದು. ಉರುವಲು ಕಟ್ಟಿಗೆಯನ್ನಾಗಿ ಮಾರತಕ್ಕ ಸಂದರ್ಭ ಹಾಸನ ಜಿಲ್ಲೆಯಲ್ಲೂ ಇದೆ ಬಯಲು ಸೀಮೆಯ ಕಡೆ ಕಟ್ಟಿಗೆ ಸಂಬಂಧ ಇಲ್ಲ ಜೋಳದ ದಂಟು ಮೆಣಸಿನ ಗಿಡ, ಇದನ್ನು ಉಪಯೋಗ ಮಾಡಿ ಬೆಂಕಿ ಹಚ್ಚಿಕೊಳ್ಳುತ್ತಾರೆ. ಹತ್ತಿ ಕಡ್ಡಿಗಳನ್ನೂ ಉಪಯೋಗ ಮಾಡುತ್ತಾರೆ ಅದರೆ ನಮ್ಮ ಪದ್ಧತಿ ಇದಲ್ಲ. ನಮ್ಮ ಸೀಮೆಯಲ್ಲಿ ಭತ್ತ ಬೆಳೆಯುತ್ತಾರೆ ಭತ್ತದ ಹುಲ್ಲು ತೆಗೆದುಕೊಂಡು ಹೋಗಿ ಅಡಿಗೆ ಮಾಡುವುದಕ್ಕೆ ಬರುವುದಿಲ್ಲ ಬೆಂಕಿಯೇನೋ ಬರುತ್ತದೆ. ಆದರೆ ಮೈ ತುಂಬಾ ಬೂದಿ, ಆಮೇಲೆ ಪೂರ್ತಿ ಸಿಗುವುದು ಬೂದಿಯೇ ಇದರಿಂದ ಗುಡಿಸಲುಗಳು ಹತ್ತಿಕೊಳ್ಳುವ ಸಂದರ್ಭಗಳೂ ಇರುತ್ತವೆ. ಇದರ ಬಗ್ಗೆ ಏನಾದರೂ ಒಂದು ಯೋಜನೆ ಹಾಕಬೇಕು. ಕಟ್ಟಿಗೆಯನ್ನು ತಂದು ಜೀವನ ಮಾಡತಕ್ಕ ಪದ್ಧತಿ ಜೀವಿಜಯ ಅವರ ಕ್ಷೇತ್ರದಲ್ಲೂ ಇದೆ. ಅವರಿಗೆ ಗೊತ್ತು ಕಟ್ಟಿಗೆಯನ್ನು ಮುಟ್ಟಬೇಡಿ ಎಂದರೆ ಏನು ಉರಿ ಹಾಕಿಕೊಂಡು ಅಡಿಗೆ ಮಾಡುವುದು ಒಲೆಯೊಳಗೆ ಕೈಕಾಲು ಇಟ್ಟುಕೊಳ್ಳಬೇಕೆ? ಏನು ಮಾಡಬೇಕು? ಕಟ್ಟಿಗೆಗೋಸ್ಕರ ಹಸಿರು ಗಿಡಮರಗಳನ್ನು ಕಡಿಯಬಾರದು, ಒಣ ಕಟ್ಟಿಗೆ ತೆಗೆದುಕೊಳ್ಳಬಹುದು. ಕೊನೆಯಪಕ್ಷ ಪರ್ಯಾಯವಾಗಿ ಗೋಬರ್ ಗ್ಯಾಸ್ ಪ್ಲಾಂಟ್‌ಗಳನ್ನು ಮಲೆನಾಡು ಪ್ರದೇಶದಲ್ಲಿ ಹಾಕಿ ದೊಡ್ಡ ಯೋಜನೆ ಮಾಡಬಹುದಾಗಿತ್ತು. ಇವತ್ತು ಏನು ಮಾಡಿದ್ದೀರಿ? ಇಲ್ಲಿಯೂ ಲಂಚದಹಾವಳಿ ನಡೆಯುತ್ತಿದೆ. ಲಂಚ ತೆಗೆದುಕೊಂಡು ಕಟ್ಟಿಗೆ ಗಾಡಿ ಬಿಡುತ್ತಿದ್ದಾರೆ. ಲಂಚ ಕೊಡದೇ ಇದ್ದರೆ ಕೇಸ್ ಹಾಕುತ್ತಿದ್ದಾರೆ. ಇದು ಸರಿಯಲ್ಲ ಕಟ್ಟಿಗೆ ಇಲ್ಲವೆ ಜೀವನ ಮಾಡುವುದಕ್ಕೆ ಆಗುವುದಿಲ್ಲ. ನನ್ನನ್ನು ಬಿಟ್ಟರೆ, ನನಗೆ ಕಟ್ಟಿಗೆ ಇಲ್ಲದೆ ಒಲೆ ಉರಿ ಹಚ್ಚುವುದಕ್ಕೆ ಬರುವುದಿಲ್ಲ. ಗೋಬರ್‌ಗ್ಯಾಸ್ ಪ್ಲಾಂಟ್ಸ್‌ಗೆ ಎಷ್ಟು ಕೋಟಿ ರೂಪಾಯಿಗಳನ್ನು ತಾವು ತೆಗೆದಿಟ್ಟಿದ್ದೀರಿ ಮಲೆನಾಡು ಪ್ರದೇಶದಲ್ಲಿ ಗೋಬರ್‌ಗ್ಯಾಸ್‌ನ್ನು ಪಾಪ್ಯುಲರೈಸ್ ಮಾಡುವ ಕಾರ್ಯಕ್ರಮ ಏನು ಹಾಕಿಕೊಳ್ಳಬೇಕು. ಇದು ದನದ ಸಗಣಿಯಿಂದ ಉತ್ಪತ್ತಿ ಮಾಡತಕ್ಕದ್ದು, ಇದರಿಂದ ಕಟ್ಟಿಗೆ ಬಳಸತಕ್ಕ ಪರಿಸ್ಥಿತಿ ಕಡಿಮೆಯಾಗುತ್ತದೆ ಎಂದು ಹೇಳಿಬೇಕು. ಕಾಡನ್ನು ಪ್ರದೇಶ ಉಳಿಸುವುದಕ್ಕೆ ಆಲ್ಟರ್‌ನೇಟೀವ್ ಆಗಿ ಏನೂ ಯೋಜನೆ ತಮ್ಮಲ್ಲಿ ಇಲ್ಲ. ನಿಮ್ಮ ಆರಣ್ಯಾಭಿವೃದ್ಧಿ ಬಗ್ಗೆ ಈ ಬಡ್ಜೆಟನಲ್ಲಿ ಎಷ್ಟಿದೆ? 4+3, ಏಳೂವರೆ ಲೈನ್ ಇವೆ ನಿಮ್ಮ ಬಜೆಟನಲ್ಲಿ, ನಿಮ್ಮ ಆರಣ್ಯಾಭಿವೃದ್ಧಿ ಪರಿಸ್ಥಿತಿ ಇಲ್ಲಿದೆ. ಹೆಡ್ಡಿಂಗ್ ಹಾಕಿ ಏಳೂವರೆ ಲೈನ್‌ನಲ್ಲಿ ಬರೆದಿದ್ದೀರಿ.

ಶ್ರೀ ಬಿ ಎ. ಜೀವಿಜಯ.--ಏಳೂವರೆ ಲೈನ್ ಇದ್ದರೂ ಕೂಡ 14 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ

ಶ್ರೀ ಹೆಚ್. ಆರ್ ಲಕ್ಷ್ಮಯ್ಯ --ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಹಾಗೆ, ನೀವು ಏಳೂವರೆ ಲೈನ್ ಇದೆ ಎಂದರಲ್ಲ, ಆ ವಿಚಾರಕ್ಕೆ ನಾನು ಹೇಳಿದೆ

ಶ್ರೀ ಎಸ್. ಬಂಗಾರಪ್ಪ.--ಒಂದೊಂದು ಲೈನಿಗೆ ಎರಡೆರಡು ಕೋಟಿ ಬೀಳುತ್ತದೆ. ಸಂತೋಷ.

ಮಾನ್ಯ ಸಭಾಧ್ಯಕ್ಷರೇ. ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ನೀವು 16 ಕೋಟಿ ಇದಕ್ಕೆ ಇಟ್ಟಿದ್ದರೂ ಕೂಡಾ, ಗೋಬರ್ ಗ್ಯಾಸ್ ಪ್ಲಾಂಟ್ ಬಗ್ಗೆ ಎಲ್ಲೂ ಬಂದಿಲ್ಲ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯವರು ಸಾಲ ಕೊಡುತ್ತಾರೆ, ಯೋಜನೆ ಕೊಡುತ್ತಾರೆ. ಗೋಬರ್ ಗ್ಯಾಸ್ ಪ್ಲಾಂಟ್ ಹಾಕಿಕೊಡುತ್ತಾರೆ ಇದರಲ್ಲಿ ಗೋಬರ್‌ಗ್ಯಾಸ್ ಸುದ್ದಿಯೇ ಇಲ್ಲ.

ಶ್ರೀ ಬಿ. ಎ. ಜೀವಿಜಯ.--ಅದು ರೂರಲ್ ಡೆವೆಲಪ್‌ಮೆಂಟ್ ಸ್ಕೀಮ್ಸ್‌ನಲ್ಲಿ ಖರ್ಚು ಮಾಡುತ್ತೇವಲ್ಲವೇ?

ಶ್ರೀ ಎಸ್. ಬಂಗಾರಪ್ಪ --ಬಜೆಟ್‌ನಲ್ಲಿ ಬರಬೇಕು ಇಲ್ಲದೇ ಹೋದರೆ ಅದು ಬರುವುದಿಲ್ಲ. ಇದಕ್ಕೆ ಇಷ್ಟು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದೆ ಎಂದು ಹೇಳಬೇಕು. ಇಲ್ಲದಿದ್ದರೆ ಮಲೆನಾಡು ಪ್ರದೇಶದಲ್ಲಿ ಕಟ್ಟಿಗೆ ಕಡಿಯುವುದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ ಕಾಡು ಹೆಚ್ಚು ಮಾಡುವುದಕ್ಕೆ ಆಗುವುದಿಲ್ಲ, ಇದಕ್ಕೆ ಪರ್ಯಾಯವಾಗಿ ಯೋಜನೆ ಮಾಡದೇ ಹೋದರೆ ವನಗಳ ಅಭಿವೃದ್ಧಿ ಆಗುವುದಿಲ್ಲ. ಈ ವಿಷಯ ಥಿಂಕ್ ಟ್ಯಾಂಕ್‌ನವರಿಗೆ ಗೊತ್ತಿಲ್ಲ ಎಂದು ಕಾಣುತ್ತದೆ, ಎಲ್ಲಿ ಹೋದರು ಅವರು? ಅವರಿಗೆ ಏತಕ್ಕಾಗಿ ಹಣ ಖರ್ಚು ಮಾಡುತ್ತಿದ್ದೀರಿ. ಏತಕ್ಕಾಗಿ ಇಟ್ಟಿದ್ದೀರಿ, ಈ ಕಾಡು ಪ್ರದೇಶ ಬೆಳೆಸುವ ವಿಚಾರ,

ಮತ್ತೊಂದು ಅವರಿಗೆ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಇದಕ್ಕೆ ಏನಾದರೂ ಒಂದು ದಾರಿ ಕಂಡು ಹಿಡಿಯದೇ, ಇದ್ದರೆ, ಬಜೆಟ್‌ನಲ್ಲಿ ವಿಷಯ ಪ್ರಸ್ತಾಪ ಮಾಡದೇ ಇದ್ದರೆ, ಕಾಡು ಪ್ರದೇಶ ಬೆಳೆಸುವುದಕ್ಕೆ ಆಗುವುದಿಲ್ಲ. ಈ ರೀತಿ ಭಾಷಣ ಮಾಡಿ ಹೋದ ಬಹಳ ಜನರನ್ನು ಹತ್ತಾರು ವರ್ಷಗಳಿಂದ ನೋಡುತ್ತಿದ್ದೇವೆ. ನೀವು ಈ ರೀತಿ ಮಾಡಿದರೆ ನಿಮ್ಮನ್ನೂ ಆ ಪಟ್ಟಿಗೆ ಸೇರಿಸಿ ಇಡುತ್ತೇವೆ. ನಿಮಗೆ ಎಚ್ಚರಿಕೆ ಕೊಡುತ್ತಿದ್ದೇನೆ, ನೀವು ಚೆನ್ನಾಗಿ ಕೆಲಸ ಮಾಡದಿದ್ದರೆ, ಆ ಹಳೆಯ ಪಟ್ಟಿಗೆ ನೀವೂ ಒಬ್ಬ ವ್ಯಕ್ತಿಯಾಗಿ ಸೇರಿಕೊಂಡು ಹೊರಟುಹೋಗುತ್ತೀರಿ. ಮಾನ್ಯ ಸಭಾಧ್ಯಕ್ಷರೇ, ಈ ಗೋಬರ್ ಗ್ಯಾಸ್ ಪ್ಲಾಂಟ್ ವಿಚಾರಕ್ಕೆ ಹೆಚ್ಚು ಗಮನವನ್ನು ಕೊಡಬೇಕು. ಮಂತ್ರಿಮಂಡಲದ ಸಭೆಯಲ್ಲಿ ತೆಗೆದುಕೊಳ್ಳಬೇಕು. ಇದು ಒಳ್ಳೆಯ ಯೋಜನೆ. ಇದನ್ನು ಏನಾದರೂ ಮಾಡಿ ಜಾರಿಗೆ ತರತಕ್ಕ ಪ್ರಾಮಾಣಿಕ ಪ್ರಯತ್ನ ನಿಮ್ಮಿಂದ ಬರಲಿ ಎಂಬ ದೃಷ್ಟಿಯಿಂದ ಈ ಮಾತನ್ನು ಆಡುತ್ತಿದ್ದೇನೆ.

ಇನ್ನು ಗ್ರಾಮೀಣ ಅಭಿವೃದ್ಧಿ–ಇದರಲ್ಲಿ ಕುಡಿಯುವ ನೀರಿನ ಯೋಜನೆ ಬಗ್ಗೆ ಯಾವಾಗಲೂ ಹೆಗ್ಗಳಿಕೆಯ ಮಾತು ಪದೇಪದೇ ಕೇಳಿಬರುತ್ತಿದೆ ಕುಡಿಯುವ ನೀರಿನ ಯೋಜನೆ ದೊಡ್ಡ ಪ್ರಮಾಣದಲ್ಲಿ ಪ್ರಾರಂಭವಾದುದು 1972-73 ರಲ್ಲಿ, ನನಗೆ ಗೊತ್ತಿರುವ ಹಾಗೆ ಹೈದರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ ಭಾಗದಲ್ಲಿ ಈ ಕುಡಿಯುವ ನೀರಿನ ತೊಂದರೆ ಬಹಳ. ಹಳೇ ಮೈಸೂರು ರಾಜ್ಯದಲ್ಲಿ ಕೂಡ ತೊಂದರೆ ಇದೆ. ಶ್ರೀಮಾನ್ ದೇವರಾಜಅರಸು ಅವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಇದರ ಬಗ್ಗೆ ವ್ಯಾಪಕವಾಗಿ ಕಾರ್ಯಕ್ರಮ ತೆಗೆದುಕೊಂಡರು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಮಾನ್ಯ ಸಭಾಧ್ಯಕ್ಷರೇ ಸರಕಾರದವರು ಏನೋ ಅಂಕಿ ಅಂಶಗಳನ್ನು ಕೊಡುತ್ತಿದ್ದಾರೆ ನಾನು ಹಿಂದೆ ಗವರ್ನರ್ ಅಡ್ರೆಸ್ ಮೇಲೆ ಮಾತನಾಡಬೇಕಾದರೆ ಇದನ್ನು ಹೇಳಿದ್ದೇನೆ, ಬಾವಿಯನ್ನು ಕೊರೆದಿರುವುದು ಸುಳ್ಳು ಎಂದು ಹೇಳುವುದಕ್ಕೆ ಆಗುವುದಿಲ್ಲ. ಕೊರೆದದ್ದು ಸರಿ, ಅಂಕಿ ಅಂಶಗಳು ತಪ್ಪು ಎನ್ನತಕ್ಕ ದೃಷ್ಟಿಯಿಂದ ನಾನು ಮಾತನಾಡುವುದಿಲ್ಲ. ಆದರೆ ಎಷ್ಟು ಬಾವಿಗಳಲ್ಲಿ ನೀರು ಬಂದಿದೆ ಎಂಬ ಅಂಕಿ ಅಂಶಗಳನ್ನು ತಾವು ಕೊಡಬೇಕು. ಹ್ಯಾಂಡ್ ಪಂಪ್ ಇತ್ಯಾದಿ ಪಂಪುಗಳನ್ನು ಹಾಕಿದ್ದೀರಿ, ರಿಪೇರಿ ಮಾಡುವುದಕ್ಕೆ ಯೋಜನೆ ಮಾಡಿದ್ದೀರಾ? ಇದನ್ನು ನೀವು ಹೇಳದೆ, ನಾವು ಗ್ರಾಮಗಳಿಗೆ ಕುಡಿಯುವ ನೀರನ್ನು ಕೊಡುತ್ತೇವೆ ಎಂಬ ಮಾತನ್ನು ಅನೇಕ ವರ್ಷಗಳಿಂದ ಹೇಳಿರತಕ್ಕ ಮಾತನ್ನು ಹೇಳುತ್ತಿದ್ದೀರಿ. ಹಿಂದಿನ ವರ್ಷದ ಬಜೆಟ್‌ನಲ್ಲಿ ಓದಿನೋಡಿ ಇವೇ ಮಾತುಗಳಿವೆ. ಈ ವರ್ಷ ಇಷ್ಟು ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿದ್ದೇವೆ, ಮುಂದಿನ ವರ್ಷ ಇಷ್ಟು ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುತ್ತೇವೆ, ಇದೇ ಮಾತು ಬಂದೇ ಬರುತ್ತದೆ, ಇವತ್ತು 40-50 ಮನೆಗಳು ಬಂದರೆ ಒಂದು ಊರಾಗುತ್ತದೆ. ಅದನ್ನು ಒಂದು ಊರು ಎಂದು ಪರಿಗಣಿಸಿ, ಕುಡಿಯುವ ನೀರಿನ ಸೌಲಭ್ಯ ನೀವು ಕೊಡಬೇಕು. ಈ ರೀತಿ ಯೋಜನೆ ಇಲ್ಲದೇ ಇಲ್ಲ. ಆದರೆ ಇದು ಅಷ್ಟು ಬಾವಿ ತೋಡಿದೆವು ಇಷ್ಟು ಬಾವಿ ತೋಡಿದೆವು ಎಂಬ ಹೆಗ್ಗಳಿಕೆ ಆಗಬಾರದು, ಬಾವಿ ತೋಡಿಸಿ ನೀರನ್ನು ಎಷ್ಟು ಕೊಡುತ್ತೇವೆ ಎಂಬುದು ಮುಖ್ಯ. ಈ ರೀತಿ ಹೇಳಿದರೆ ಮಂತ್ರಿಮಂಡಲ ಮಾಡುವುದೇ ಒಂದು ದೊಡ್ಡ ಸಾಧನೆ ಎಂದು ಹೇಳಿದ ಹಾಗೆ ಆಗುತ್ತದೆ. ಸರಕಾರ ರಚನೆ ಮಾಡುವುದೇ ಮುಖ್ಯವಲ್ಲ. ಹೊಸ ಸರಕಾರ ರಚನೆ ಮಾಡಿದರೆ ತನ್ಮೂಲಕ ಸಮಸ್ಯೆಗಳಿಗೆ ಪರಿಹಾರ ಎಷ್ಟು ಮಾಡಿದ್ದೀರಿ ಎನ್ನುವುದು ಮುಖ್ಯವೇ ವಿನಃ ಒಂದು ಸರಕಾರ ತೆಗೆದು ಇನ್ನೊಂದು ಸರಕಾರ ತಂದಿರಿಸುವುದು ದೊಡ್ಡ ಸಾಧನೆ ಅಲ್ಲ. ಆದುದರಿಂದ ಮಾನ್ಯ ಸಭಾಧ್ಯಕ್ಷರೇ, ಕುಡಿಯುವ ನೀರಿನ ವಿಚಾರದಲ್ಲಿ ಒಂದು ಸಣ್ಣ ಹಳ್ಳಿಗೂ ಕೂಡಾ ಕುಡಿಯುವ ನೀರನ್ನು ತಲುಪಿಸತಕ್ಕ ವಿಚಾರದಲ್ಲಿ ಇನ್ನೂ ಇವರು ವಿಫಲರಾಗಿದ್ದಾರೆ. ಎಲ್ಲಿಯಾದರೂ ಹ್ಯಾಂಡ್ ಪಂಪ್ ಕೆಟ್ಟು ಹೋದರೆ, ಅಲ್ಲಿಗೆ ಮೊಬಾಯಿಲ್ ವ್ಯಾನ್‌ಗಳನು ಕಳುಹಿಸಿ, ಅದನ್ನು ಸರಿಪಡಿಸತಕ್ಕ ಕಾರ್ಯಕ್ರಮ ಮಾಡದೇ ಇದ್ದರೆ, ಜನಸಾಮಾನ್ಯರಿಗೆ ಕುಡಿಯುವ ನೀರನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ನಾನು ಪ್ರತಿಯೊಂದು ಸಬ್‌ಜೆಕ್ಟಿಗೂ ಒಂದೊಂದು ಮಾತನ್ನು ಆಡಿಕೊಂಡು ನನ್ನ ಭಾಷಣ ಮುಗಿಸುತ್ತೇನೆ. ಭೂಸುಧಾರಣೆ ಬಗ್ಗೆ ಹೇಳುವುದಾದರೆ, ಮಾನ್ಯ ಮುಖ್ಯಮಂತ್ರಿಗಳು ಇತ್ತ ಕಡೆ ಗಮನ ಕೊಡಬೇಕು ಭೂ ಸುಧಾರಣಾ ಕಾನೂನು ಪ್ರಕಾರ ಭೂಮಿ ಕಳೆದುಕೊಂಡವರಿಗೆ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟುಗಳನ್ನು ಸರ್ಕಾರ ಕೊಡಲು ನಿರ್ಧರಿಸಿದೆ ; ಜೊತೆಗೆ 15 ಕೋಟಿ ರೂಪಾಯಿಗಳನ್ನು ಕೂಡ ಒದಗಿಸಿದೆ. ಹಿಂದಿನ ಆಯವ್ಯಯ ಅಧಿವೇಶನ ಕಾಲದಲ್ಲಿ ಭೂಮಿಯನ್ನು ಕಳೆದುಕೊಂಡಂಥ ಸಣ್ಣ ಪುಟ್ಟ ಜಮೀನುದಾರರಿಗೆ ಏಕ ಗಂಟಿನಲ್ಲಿ ಹಣ ಕೊಡಬೇಕೆಂದು ತಿಳಿಸಿದೆ. ದೊಡ್ಡ ದೊಡ್ಡ ಭೂ ಮಾಲೀಕರು ಲಂಚ ಕೊಟ್ಟು ಹಣ ಪಡೆಯುತ್ತಾರೆ ; ನಾನು ಮೊನ್ನೆ ಸೊರಬಾಕ್ಕೆ ಹೋಗಿದ್ದಾಗ ಭೂ ನ್ಯಾಯ ಮಂಡಲಿಗಳಲ್ಲಿ ಸುಳ್ಳು ಸರ್ಟಿಫಿಕೇಟ್ ಕೊಟ್ಟು ಹಣ ಪಡೆದಿರುವಂಥ ಪ್ರಕರಣಗಳು ನಡೆದಿರುವಂಥ ಪ್ರಕರಣಗಳು ನಡೆದಿರುವುದನ್ನು ನನ್ನ ಗಮನಕ್ಕೆ ತಂದರು. ಇದನ್ನು ನಿಲ್ಲಿಸುವುದರಲ್ಲಿ ಸಂಪೂರ್ಣವಾಗಿ ತಾವು ವಿಫಲರಾಗಿದ್ದೀರೆಂದು ಹೇಳುತ್ತೇನೆ. ಇದು ರಾಜ್ಯದ 19 ಜಿಲ್ಲೆಗಳಲ್ಲಿಯೂ ನಡೆಯು

ತ್ತಿದೆ; ಇದರ ಬಗ್ಗೆ ಸಮೀಕ್ಷೆ ನಡೆಸಿ ನ್ಯಾಯಾಂಗ ತನಿಖೆ ಮಾಡಿ ಎಂದು ನಾನು ಹೇಳುವುದಿಲ್ಲ. ಶಕ್ತಿವಂತ ಭೂ ಮಾಲೀಕರು ಹೇಗಾದರೂ ಹಣ ಪಡೆದುಕೊಳ್ಳುತ್ತಾರೆ; ಆದರೆ ಸಣ್ಣ ಪುಟ್ಟ ಭೂಮಾಲೀಕರಿಗೆ ಸರ್ಕಾರದ ಹಣ ತಲುಪಿಲ್ಲ. ಕೆಲವು ಜನರಿಗೆ ತಲುಪಿದೆ; ಇದು ಸರ್ಕಾರದ ಆಡಳಿತದ ವೈಫಲ್ಯತೆಯನ್ನು ತೋರಿಸುತ್ತದೆ, ಏಕಗಂಟಿನಲ್ಲಿ ಕೊಡಬೇಕೆಂದು ರಾಮಕೃಷ್ಣ ಹೆಗಡೆಯವರನ್ನು ಕೇಳಿದ್ದೆ. ರಾಜ್ಯದಲ್ಲಿ ಲಕ್ಷಾಂತರ ಜನ ಇದ್ದಾರೆ; ಅವರಿಗೆಲ್ಲಾ ಹಕ್ಕು ಕೊಟ್ಟಿದ್ದೇವೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸಣ್ಣಪುಟ್ಟ ಗೇಣಿದಾರರು ಏನಿದ್ದಾರೆ ಅವರಿಗೆಲ್ಲಾ ಮಾಫಿ ಮಾಡುತ್ತೇವೆಂದು ಹೇಳಿದ್ದರೂ ಕೂಡ ಸರ್ಕಾರದವರು ಇದರ ಬಗ್ಗೆ ಒಂದು ಮಾತನ್ನು ಆಡಿಲ್ಲ. ಬಡ ಗೇಣಿದಾರರು ನಿಮಗೆ ಬೆಂಬಲ ಕೊಡಲಿಲ್ಲವೆ? ತಾವು 83ರ ಚುನಾವಣೆ ಕಾಲದಲ್ಲಿ ಹೇಳಲಿಲ್ಲವೇ? ಇವತ್ತು ಇದನ್ನು ಬದಿಗೊತ್ತಿ; ಭೂಮಾಲೀಕರ ಪರವಾಗಿ ಬಡ್ಜೆಟ್ ತಂದು ಸಂಪೂರ್ಣವಾಗಿ ಗೇಣಿದಾರರನ್ನು ತುಳಿಯಲಾಗಿದೆಯೆಂದು ಹೇಳುತ್ತೇನೆ. ಗೇಣಿದಾರರ ವರ್ಗವನ್ನು ಏತಕ್ಕೆ ತುಳಿದಿಟ್ಟಿದ್ದೀರಿ. ಕರ್ನಾಟಕ ರಾಜ್ಯದಲ್ಲಿ ಗೇಣಿದಾರರ ಹೋರಾಟಗಳು ನಡೆದಿವೆ. ಲಕ್ಷಾಂತರ ಜನ ಭಾಗವಹಿಸಿದ್ದಾರೆ; ಅನೇಕ ವರ್ಷಗಳ ಇತಿಹಾಸ ಇದೆ. ವಸ್ತುಸ್ಥಿತಿ ಹೀಗಿದ್ದರೂ ಗೇಣಿದಾರರನ್ನು ಕೈಬಿಟ್ಟು ಭೂ ಮಾಲೀಕರ ಬಗ್ಗೆ ಮಾತ್ರ ಸರ್ಕಾರಕ್ಕೆ ನೆನಪು ಬಂತೆ ನೀವು ತಯಾರು ಮಾಡಿರತಕ್ಕಂಥ ಬಡ್ಜೆಟ್ ಶಕ್ತಿವಂತ, ಪಟ್ಟಭದ್ರ, ಹಿತಾಶಕ್ತಿಗಳ ಹಾಗೂ ಐಶ್ವರ್ಯವಂತ ವರ್ಗಕ್ಕೆ ಎಂದು ಈ ಸಂದರ್ಭದಲ್ಲಿ ಆಡಲೇ ಬೇಕಾಗಿದೆ. ಸ್ವಾಮಿ, ರೆವಿನ್ಯೂ ಭೂಮಿಯಲ್ಲಿ ಕಟ್ಟಿಕೊಂಡಿರತಕ್ಕ ಮನೆಗಳ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಇದರ ಬಗ್ಗೆ ಅನೇಕ ವಿಚಾರಗಳು ನಮ್ಮ ಹತ್ತಿರ ಇವೆ. ಕಾಮನಹಳ್ಳಿಯಲ್ಲಿ ದೊಡ್ಡ ಚಳುವಳಿ ನಡೆದಿದೆ; ಚಿಕ್ಕಮಾರನಹಳ್ಳಿಯಲ್ಲೂ ಕೂಡ ರೆವಿನ್ಯೂ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದಾರೆ. ಬೆಂಗಳೂರು ನಗರದಲ್ಲಿ ಅನೇಕ ಲಕ್ಷ ಸಂಖ್ಯೆಯಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ನಾನು ಕಂದಾಯ ಮಂತ್ರಿಯಾಗಿದ್ದಾಗ ಒಂದು ಕಾನೂನು ತಂದಿದ್ದೆ; ಮನೆ ಇಲ್ಲದವರು ನಿವೇಶನ ಇಲ್ಲದವರು ರೆವಿನ್ಯೂ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದರೆ, ಅವರು ಫ್ಯಾಕ್ಟರಿಯಲ್ಲಿರುವವರು ಇರಬಹುದು? ಸಣ್ಣಪುಟ್ಟ ಸರ್ಕಾರೀ ನೌಕರರು ಇರಬಹುದು? ಕೂಲಿ ಮಾಡುವವರು ಇರಬಹುದು ಸಿವಿಲ್ ಡಿಸ್ಪ್ಯೂಟ್ ಇಲ್ಲದೇ ಇರತಕ್ಕವರು ತಾಲ್ಲೂಕು ಆಫೀಸಿಗೆ ಅರ್ಜಿ ಕೊಟ್ಟು ವಿವರಗಳನ್ನು ಒದಗಿಸಿಕೊಟ್ಟರೆ ಆಟೋಮ್ಯಾಟಿಕ್ ಆಗಿ ಅವರಿಗೆ ಅನುಕೂಲವಾಗುವಂಥ ವ್ಯವಸ್ಥೆ ಮಾಡಲಾಗಿತ್ತು. ಕಾರಣಾಂತರದಿಂದ ಅದು ಮೊದಲೇ ಲ್ಯಾಪ್ಸ್ ಆಯಿತು ಇತ್ತೀಚಿಗೆ ರೆವಿನ್ಯೂ ಜಾಗದಲ್ಲಿ ಮನೆ ಕಟ್ಟಿಕೊಂಡಿರುವ ವಿಚಾರದಲ್ಲಿ ಮಾನ್ಯ ನಗರಾಭಿವೃದ್ಧಿ ಮಂತ್ರಿಯವರಾದ ಚಂದ್ರಶೇಖರ್‌ರವರು ಬಿಜಾಪುರದಲ್ಲಿ ಒಂದು ಹೇಳಿಕೆ ಕೊಟ್ಟರು; ಮತ್ತೊಬ್ಬ ಮಂತ್ರಿಮಂಡಲದ ಸದಸ್ಯರಾದ ಶ್ರೀಮಾನ್ ರಘುಪತಿಯವರು ಒಂದು ರೀತಿಯ ಹೇಳಿಕೆ ಕೊಟ್ಟರು; ಕೂಡೆ ಮನೆ ಕೆಡವಿದವರಿಗೆ ಪರಿಹಾರ ಕೊಡಲಿಲ್ಲ. ಮನೆಗಳನ್ನು ಹಾಳು ಮಾಡಿದರೆ ಹೊರತು; ಪರಿಹಾರ ಮಾತ್ರ ಕೊಡಲಿಲ್ಲ; ರಸ್ತೆಗಳು ಬರುವಂಥ ಕಡೆ ಮಾತ್ರ ಮನೆಗಳನ್ನು ಕೆಡವುತ್ತೇವೆಂದು ಹೇಳಿದರು. ಇದನ್ನು ಬಳಸಿಕೊಂಡು ಅಧಿಕಾರಿಗಳು ಹಣ ತಿನ್ನುವುದನ್ನು ಜಾಸ್ತಿ ಮಾಡಿದ್ದಾರೆ. ಪ್ರತಿ ಜಿಲ್ಲೆಯಲ್ಲಿಯೂ ತಾಲ್ಲೂಕು ಆಫೀಸಿನಲ್ಲಿ ನಡೆಯತಕ್ಕ ಲಂಚವನ್ನು ತಪ್ಪಿಸುವುದಕ್ಕಾಗಿಲ್ಲ; ಸಂಪೂರ್ಣವಾಗಿ ಆಡಳಿತದ ಬಿಗಿ ಕೈತಪ್ಪಿ ಹೋಗಿದೆ, ಹಿಂದಿಗಿಂತಲೂ ಜಾಸ್ತಿಯಾಗಿದೆ. ಬೇಸಾಯೇತರ ಉದ್ದೇಶಗಳಿಗೆ ಕೊಡಬೇಕಾದರೆ, ದಂಡ ಕಟ್ಟಿಸಿಕೊಂಡು ಮಾಡುತ್ತೀರಿ. ಈ ಒಂದು ಸಮಸ್ಯೆ ಇಡೀ ರಾಜ್ಯದಲ್ಲಿಯೇ ಇರುವುದರಿಂದ, ಸರ್ಕಾರದವರು ವಿಚಾರ ಮಾಡಿ; ಸೂಕ್ತ ಕಾನೂನು ತರದೇ ಹೋದರೆ ಯಾರಿಗೂ ಸೈಟು ಕೊಡುವುದಕ್ಕಾಗುವುದಿಲ್ಲ. ರೆವಿನ್ಯೂ ಜಾಗದಲ್ಲಿ ಮನೆ ಕಟ್ಟಿಸಿಕೊಂಡವರಿಗೂ ಸಹಾಯ ಮಾಡುವುದಕ್ಕಾಗುವುದಿಲ್ಲ-ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಬೆಂಗಳೂರು ಮತ್ತು ಕಲ್ಬುರ್ಗಿ ನಗರಗಳಲ್ಲಿ ಟಿ ವಿ ಸೆಟ್ಟುಗಳನ್ನು ಹರಿಜನ ಕಾಲೋನಿಗಳಲ್ಲಿ ಹಾಕುತ್ತೇವೆಂದು ಹೇಳಿದ್ದಾರೆ. ಹರಿಜನ ವಿದ್ಯಾರ್ಥಿಗಳಿಗೆ ಮೂರು ಜನ ನೇಮಕಾತಿ ಮಾಡಿದಂತೆ ಇದು ಆಗುತ್ತದೆ. ಇದು ಅವರಿಗೆ ಮಾತ್ರ ತಲುಪುವುದಿಲ್ಲ; ಬರೀ ಪ್ರಚಾರಕ್ಕಾಗಿ ಮಾತ್ರ ಎಂದು ಹೇಳುತ್ತೇನೆ. ಒಂದು ಕಾರ್ಯಕ್ರಮ ಹಾಕಿಕೊಂಡರೆ, ಅದರಲ್ಲೂ ಕೂಡ ದುರ್ಬಲವರ್ಗದವರ ಬಗ್ಗೆ ಹಾಕಿಕೊಂಡರೆ ಸಹಾಯದ ಹಸ್ತ ಅವರ ಮುಂದೆ ನಿಲ್ಲಬೇಕು ಬಹುಪಾಲು ಅದು ಉಳಿಯಬೇಕು. ಇದನ್ನು ನಾನು ಯೋಜನೆ ಎಂದು ಕರೆಯುತ್ತೇನೆ. 20 ಟಿ. ವಿ. ಇಡುತ್ತೇವೆಂದು ಹೇಳುವುದು ಸರಿಯಲ್ಲ ದಿವಂಗತ ದೇವರಾಜ ಅರಸರ ಕಾರ್ಯಕ್ರಮಗಳನ್ನು ಜಾರಿಗೆ ತರುವುದಕ್ಕೆ ತಾವು ಯೋಜನೆ ಮಾಡಲಿಲ್ಲ; ಅವರ ಹೆಸರಿನಲ್ಲಿ ಅಭಿವೃದ್ಧಿ ಅಧ್ಯಯನ ಪೀಠವನ್ನು ಪ್ರಾರಂಭಿಸಲು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯವಸ್ಥೆ ಮಾಡಲಾಗುವುದೆಂದು ಹೇಳಿದ್ದಾರೆ.

ಮಾನ್ಯ ಸಭಾಧ್ಯಕ್ಷರೇ, ಹಿಂದಿನ ಬಜೆಟ್‌ನಲ್ಲಿ ದೇವರಾಜ್ ಅರಸ್‌ರವರ ಹೆಸರನ್ನು ಹಾಕಲಿಕೆ

ಇವರಿಗೆ ನೆನಪು ಬಂದಿರಲಿಲ್ಲ, ಈಗ ನೆನಪು ಬಂದಿತು. ಏತಕ್ಕೆ ಎನ್ನುವುದು ಮಾನ್ಯ ಬಾಪುಗೌಡರವರಿಗೂ ಗೊತ್ತಿದೆ. ಅವರು ನಗುತ್ತಿದ್ದಾರೆ. ಆದುದರಿಂದ ಈಗ ಡಿ. ದೇವರಾಜ್ ಅರಸ್‌ರ ಹೆಸರು ಏತಕ್ಕೆ ಬಂತು ಎನ್ನುವುದು ಎಲ್ಲರಿಗೂ ಗೊತ್ತಿದೆ, ಆದುದರಿಂದ ಆ ವಿಚಾರ ಒಂದು ಕಡೆ ಇರಲಿ, ಅದರ ಬಗ್ಗೆ ಚರ್ಚೆ ಮಾಡತಕ್ಕ ವಿಷಯವಲ್ಲ ಅದು ಆದುದರಿಂದ ದಯವಿಟ್ಟು ಕ್ಷಮಿಸಬೇಕು. ಅವರ ಹೆಸರಿನಲ್ಲಿ ಒಂದು ಅಧ್ಯಯನ ಪೀಠವನ್ನು ಮಾಡಿದ್ದಾರೆ ಅದನ್ನು ಬಹಳ ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಆದರೆ ಗ್ರಾಮಾಂತರ ಪ್ರದೇಶದ ಬದುಕಿಗೆ ಹತ್ತಿರವಾಗುವ ಹಾಗೆ ಈ ಅಧ್ಯಯನ ಪೀಠವನ್ನು ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಬಜೆಟ್‌ನಲ್ಲಿ, ಏಕ ಶಿಕ್ಷಕರ ಶಾಲೆಗಳನ್ನು ಕ್ರಮವಾಗಿ ಇಬ್ಬರು ಶಿಕ್ಷಕರ ಶಾಲೆಗಳನ್ನಾಗಿ ಪರಿವರ್ತಿಸುವುದು, ಸ್ವಯಂ ಸೇವಾ ಸಂಸ್ಥೆಗಳು ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ತೆರೆಯಲು ಪ್ರೋತ್ಸಾಹಿಸುವುದು, ಉಚಿತ ಸಮವಸ್ತ್ರ ಹಾಗೂ ಪಠ್ಯಪುಸ್ತಕಗಳನ್ನು ನೀಡಿ ಪ್ರೋತ್ಸಾಹಿಸುವುದು ಮಧ್ಯಾಹ್ನದ ಉಪಹಾರದ ವ್ಯವಸ್ಥೆ ಇತ್ಯಾದಿ ಮಾಡುವ ಬಗ್ಗೆ ಹೇಳಿದ್ದಾರೆ. ಈ ರೀತಿಯಾಗಿ ಮಾಡುವುದಾಗಿ ಭಾಷಣ ಮಾಡಿಬಿಟ್ಟರು. ಆದರೆ ತಮಿಳು ನಾಡಿನವರು 1200 ಕೋಟಿ ರೂ. ಗಳನ್ನು ಪ್ರತಿ ವರ್ಷ ಬಜೆಟ್‌ನಲ್ಲಿ ತೆಗೆದಿಡುತ್ತಿದ್ದಾರೆ. ಶ್ರೀ ಎಂ. ಜಿ. ರಾಮಚಂದ್ರನ್‌ರವರು ಮಕ್ಕಳಿಗೆ ಮಧ್ಯಾಹ್ನದ ಊಟವೆಂದು ಹೊಸದಾಗಿ ಒಂದು ವ್ಯವಸ್ಥೆ ಮಾಡಿ ಬಹಳ ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಅದೇ ರೀತಿಯಾಗಿ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳಾದ ಶ್ರೀ ಎನ್. ಟಿ. ರಾಮರಾವ್‌ರವರು ಒಂದು ಯೋಜನೆ ಮಾಡಿದ್ದಾರೆ. ಅಂದರೆ ತಮಿಳು ನಾಡಿನ ಗಾತ್ರದಲ್ಲಿ ಅಷ್ಟು ಇರದಿದ್ದರೂ ಸಹ ಸುಮಾರು 60-70 ಕೋಟಿ ರೂ. ಗಳನ್ನು ಬಜೆಟ್‌ನಲ್ಲಿ ತೆಗೆದಿಟ್ಟಿದ್ದಾರೆ. ಅವರೂ ಸಹ ಬ್ರೆಡ್, ಹಾಲನ್ನು ಕೊಡುವ ಪ್ರಯತ್ನ ಮಾಡಿದ್ದಾರೆ. ಅದೇ ರೀತಿಯಾಗಿ ಮಧ್ಯಾಹ್ನದ ಉಪಹಾರದ ವ್ಯವಸ್ಥೆ ಮಾಡುವುದಾಗಿ ತಿಳಿಸಿದ್ದಾರೆ. ಅದನ್ನು ಜಾರಿಗೆ ತರುತ್ತೇವೆಂದು ಅಭಿಪ್ರಾಯ ಕೊಟ್ಟಿದ್ದಾರೆ ಸಂತೋಷ. ಇದರಿಂದ ಅಕ್ಷರಾಭ್ಯಾಸವನ್ನು ಜಾಸ್ತಿ ಮಾಡಬಹುದು ಎನ್ನತಕ್ಕದ್ದು ಅಭಿಪ್ರಾಯವಿದೆ. ನಾವು ಇಲ್ಲಿ ಅಕ್ಷರ ಸೇನೆ ಬಗ್ಗೆ ಮಾತನಾಡುವಾಗ ದೇಶದಲ್ಲಿ ಸಂಪೂರ್ಣವಾಗಿ ಇದರಿಂದ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಬೇಕಾಗಿದೆ. ದೇಶದಲ್ಲಿ ಸಂಪೂರ್ಣವಾಗಿ ಈ ಮಧ್ಯಾಹ್ನದ ಊಟದ ಯೋಜನೆ ಏನಿದೆ ಇದು ಬಹಳ ಒಳ್ಳೆಯದು. ಇದರಿಂದ ಹಳ್ಳಿಗಳಲ್ಲಿ ಮಕ್ಕಳ ಹಾಜರಾತಿ ಕೂಡ ತಕ್ಷಣವೇ ಜಾಸ್ತಿಯಾಗುತ್ತದೆ. ಇದರಿಂದ ಮಕ್ಕಳ ಹಾಜರಾತಿಯನ್ನು ಸಹ ತಕ್ಷಣವೇ ಜಾಸ್ತಿ ಮಾಡಬಹುದು. ಊಟವಿಲ್ಲದೇ ಇರುವುದರಿಂದ ಅವರು ಶಾಲೆಗಳಿಗೆ ಬಾರದೇ ಇರತಕ್ಕದ್ದು ಎಲ್ಲರಿಗೂ ಗೊತ್ತಿರತಕ್ಕ ವಿಚಾರವಾಗಿದೆ. ಇದಕ್ಕಾಗಿ ಬಜೆಟ್‌ನಲ್ಲಿ ಎಷ್ಟು ಹಣವನ್ನು ತೆಗೆದಿಡಲಾಗಿದೆ ಎನ್ನುವ ಬಗ್ಗೆ ಎಲ್ಲಿಯೂ ಸಹ ಹೇಳಿಲ್ಲ. ತಮಿಳು ನಾಡಿನ ಸರ್ಕಾರದವರು 1200 ಕೋಟಿ ತೆಗೆದಿಟ್ಟಿದ್ದರೆ ಆಂಧ್ರದವರು 50-60 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ತೆಗೆದಿಟ್ಟಿದ್ದಾರೆ. ಅದೇ ರೀತಿಯಾಗಿ ನಮ್ಮಲ್ಲಿಯೂ ಸಹ ಮಾಡಿದರೆ ಅಕ್ಷರ ಸೇನೆಯ ಅವಶ್ಯಕತೆ ಇಲ್ಲದೇನೇ ಆಟೋಮ್ಯಾಟಿಕ್ ಆಗಿ ಮಕ್ಕಳ ವಿದ್ಯಾಭ್ಯಾಸದ ಸಂಖ್ಯೆ ಜಾಸ್ತಿಯಾಗುತ್ತದೆ. ಆದರೆ ನಮ್ಮಲ್ಲಿ ಇಲ್ಲಿ ಭಾಷಣ ಮಾಡಿದ್ದಾರೆ ಹಣವನ್ನೇ ಬಜೆಟ್‌ನಲ್ಲಿ ಇಟ್ಟಿಲ್ಲ. ಹಣವನ್ನೇ ಇಡದೇ ಭಾಷಣ ಮಾಡತಕ್ಕ ಆಯವ್ಯಯ ಪತ್ರವಾದರೆ ಇದು ಏತಕ್ಕೆ ಬರುತ್ತದೆ?

ಇನ್ನು "ಸಮಗ್ರ ಶಿಕ್ಷಣ ವಿಧೇಯಕದ" ಬಗ್ಗೆ ಹೇಳಿದ್ದಾರೆ. ಇದು ಪೂರ್ತಿಯಾಗಿ ಶಿಕ್ಷಕರ ಪರವಾಗಿರತಕ್ಕಂಥ ಬಿಲ್ ಆಗಿದೆಯೇ ಹೊರತು ಸಮಗ್ರ ಶಿಕ್ಷಣ ಮಸೂದೆಯಾಗಿಲ್ಲ. ಆದುದರಿಂದ ಸಮಗ್ರ ಶಿಕ್ಷಣಮಸೂದೆಯನ್ನು ತರುವುದಕ್ಕೂ ನೀವು ತರುತ್ತಿರುವುದಕ್ಕೂ ಬಹಳ ವ್ಯತ್ಯಾಸವಿದೆ.

ಇನ್ನು ಆಹಾರ ನಾಗರೀಕ ಪೂರೈಕೆ ವಿಚಾರದಲ್ಲಿ ಈ ಸರ್ಕಾರದ ನೀತಿ ಏನಿದೆ ಎನ್ನುವುದು ಗೊತ್ತಾಗಲಿಲ್ಲ. ಪ್ರೈಜ್ ವಿಚಾರದಲ್ಲಿ ಒಂದು ಶ್ವೇತ ಪತ್ರವನ್ನು ಮಂಡನೆ ಮಾಡಿದ್ದಾರೆ. ಅದನ್ನು ಮಂಡನೆ ಮಾಡುವಾಗ ನಾನು ಇರಲಿಲ್ಲ. ಆದರೆ ಅದನ್ನು ಈ ದಿವಸ ನೋಡಿದೆ. ಅದರಲ್ಲಿ ಈ ಸರ್ಕಾರದ ನೀತಿ ಏನಿದೆ ಎಂಬುದನ್ನು ಅದರಲ್ಲಿ ನೋಡಿದೆ. ಇವತ್ತು ಆಹಾರ ಮತ್ತು ನಾಗರಿಕ ಪೂರೈಕೆಯ ವಿಚಾರದಲ್ಲಿ ಎಲ್ಲಾ ವಿವರವಾಗಿ ಚರ್ಚೆ ಮಾಡಲಿಕ್ಕೆ ಹೋಗಲು ಇವತ್ತು ಕಾಲ ಹತ್ತಿರ ಬಂದಿಲ್ಲ, ಆದರೂ ನಾನು ಅನೇಕ ಸಾರಿ ಇಲ್ಲಿ ಹೇಳಿದ್ದೇನೆ. ಅಗತ್ಯ ವಸ್ತುಗಳ ಕಾನೂನು 1955,56.57, ಮತ್ತು 1978-80ರ ಕಾನೂನು ಏನಿದೆ ಅದನ್ನು ಕೋಟ್ ಮಾಡಿ ನಾನು ಹೇಳಿದ್ದೇನೆ. ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಂ ಮಾತ್ರ ನಿಮಗೆ ಸೇರಿರತಕ್ಕದ್ದು ಮಿಕ್ಕದ್ದೆಲ್ಲಾ ಕೇಂದ್ರ ಸರ್ಕಾರದವರಿಗೆ ಸೇರಿರತಕ್ಕದ್ದು ಎಂಬುದು ನನಗೂ ಗೊತ್ತಿದೆ. ಒಂದು ಮಾತ್ರ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ಬಹುಭಾಗ ಕೇಂದ್ರ ಸರ್ಕಾರದವರ ಮೇಲೆ ನೀವು ಜವಾಬ್ದಾರಿಯನ್ನು ಹೊರಿಸುವುದಕ್ಕೆ ಬದಲಾಗಿ ನಿಮ್ಮಲ್ಲೂ ಕೂಡ

ಜವಾಬ್ದಾರಿ ಇದೆ ಎನ್ನತಕ್ಕ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಉದಾಹರಣೆಗೆ ಒಬ್ಬ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುವವನಿದ್ದರೆ, ಅಕ್ರಮವಾಗಿ ದಾಸ್ತಾನು ಇಟ್ಟುಕೊಂಡಿದ್ದರೆ, ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದರೆ ಅಂಥವರ ಮೇಲೆ ರೈಡ್ ಮಾಡಿ ಅದನ್ನು ವಶಪಡಿಸಿಕೊಂಡು ಅವನಿಗೆ ಶಿಕ್ಷೆ ವಿಧಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಹಕ್ಕಿದೆ. ಆ ಒಂದು ಹಕ್ಕನ್ನು ಕೇಂದ್ರ ಸರ್ಕಾರದವರು ರಾಜ್ಯದವರಿಗೆ ಕೊಟ್ಟಿದ್ದಾರೆ. ಆದುದರಿಂದ ನೀವು ನಿಮ್ಮ ಶ್ವೇತ ಪತ್ರದಲ್ಲಿ ಇದನ್ನು ಮರೆ ಮಾಡಿದ್ದೀರಿ ಈ ಆಹಾರದ ವಿಚಾರದಲ್ಲಿ ಯಾವ ರೀತಿಯಾಗಿರತಕ್ಕ ನೀತಿ ಇದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಿಲ್ಲ. ಈ ಆಹಾರದ ವಿಚಾರದ ಬಗ್ಗೆ ಹೇಳುವುದಾದರೆ ಸರ್ಕಾರದವರು ಬೆಂಬಲ ಬೆಲೆಯನ್ನು ಎಷ್ಟು ನಿಗದಿ ಮಾಡಬೇಕು ಎನ್ನುವ ಬಗ್ಗೆ ಸ್ಪಷ್ಟಪಡಿಸಿಲ್ಲ ಇವತ್ತು ಆಹಾರದ ಬೆಲೆಗಳು ಏರುತ್ತಲೇ ಇವೆ. ಅದನ್ನು ತಡೆಗಟ್ಟಲು ನಿಮ್ಮಿಂದ ಆಗಿಲ್ಲ ತೆಂಗಿನ ಕಾಯಿಯ ಬೆಲೆ ಏರುತ್ತಲೇ ಇದೆ. ತೆಂಗಿನ ಕಾಯಿ ಪೌಡರ್ ಮಾಡತಕ್ಕದು ಈಗ ಹೆಚ್ಚಾಗಿರುವುದರಿಂದ ತೆಂಗಿನಕಾಯಿ ಬೆಲೆ ಏರಿದೆ ಅದನ್ನು ತಡೆಗಟ್ಟುವುದು ರಾಜ್ಯ ಸರ್ಕಾರದವರ ಕರ್ತವ್ಯ ಅಲ್ಲವೇ ?

ಒಬ್ಬ ಮಾನ್ಯ ಸದಸ್ಯರು.—ಮಳೆ ಹೋದುದರಿಂದ ತೆಂಗಿನ ಫಸಲು ಸಹ ಕಡಿಮೆಯಾಗಿದೆ. ಮರಗಳೇ ಒಣಗಿ ಹೋಗಿರುವಾಗ ಇನ್ನು ಎಲ್ಲಿಂದ ತೆಂಗಿನಕಾಯಿ ಬರುತ್ತದೆ ?

ಶ್ರೀ ಎಸ್. ಬಂಗಾರಪ್ಪ.—ಮಳೆ ಹೋಗಿರತಕ್ಕದ್ದನ್ನು ಇವತ್ತು ನಿನ್ನೆಯಿಂದ ನೋಡುತ್ತಿಲ್ಲ. ಇವತ್ತು ಕೊಬ್ಬರಿ ತುರಿ ಮಾಡಿ ಪೌಡರ್ ಮಾಡಿ ಅರಬ್ ಕಂಟ್ರೀಸ್‌ಗೆ ಕಳುಹಿಸುತ್ತಿರುವುದರಿಂದ ಇವತ್ತಿನ ದಿನಸ ತೆಂಗಿನಕಾಯಿ ಬೆಲೆ 4-5 ರೂ. ಗಳು ಆಗಿದೆ.

ಇವತ್ತು ಯಾವುದೇ ವಸ್ತುಗಳ ಬೆಲೆಗಳು ಏರಲಿ ಅದಕ್ಕೆ ಪೂರ್ತಿಯಾಗಿ ಕೇಂದ್ರದ ಮೇಲೆ ಹೊರಿಸುವುದು ಸರಿಯಲ್ಲ ನಿಮ್ಮ ಅಧಿಕಾರವನ್ನು ಸರಿಯಾಗಿ ಚಲಾವಣೆ ಮಾಡುತ್ತಿಲ್ಲ ನಿಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಣೆ ಮಾಡಿದಲ್ಲಿ ಬರೇ ಕೇಂದ್ರ ಸರ್ಕಾರದ ಮೇಲೆ ಆ ಒಂದು ಹೊಣೆಯನ್ನು ಹಾಕುವುದು ಸರಿಯಲ್ಲ. ನಿಮ್ಮ ಅಧಿಕಾರವನ್ನು ಸರಿಯಾಗಿ ಚಾಲನೆ ಮಾಡಿದ್ದೀರಿ ? ವರ್ತಕರು ಮತ್ತು ನೀವು ಶಾಮೀಲಾಗಿರತಕ್ಕದ್ದು ಕರ್ನಾಟಕ ರಾಜ್ಯದಲ್ಲಿ ಸ್ಪಷ್ಟವಾಗಿದೆ ಈವಾಗ ತಾವು ಎಷ್ಟು ಅಕ್ರಮ ಧಾಳಿಕೋರರನ್ನು ಹಿಡಿದು ಕೇಸ್ ಹಾಕಿದ್ದೀರಿ, ಹಿಂದಿನಿಂದ ಅದರ ಲೆಕ್ಕ ಕೊಡಿ. ಏಕೆಂದರೆ ಹಿಂದಿನದಕ್ಕಿಂತ ಒಳ್ಳೆಯ ಆಡಳಿತ ಕೊಡತಕ್ಕವರು ಹೇಳಿ ಎಂದು ಹೇಳತಕ್ಕಂಥವರು ನೀವು ನೀವಾದರೂ ಏಕೆ ಆ ಕೆಲಸಮಾಡಲಿಲ್ಲ. ಸಂಪೂರ್ಣವಾಗಿ ವರ್ತಕರ ಜೊತೆಯಲ್ಲಿ ಶಾಮೀಲಾಗಿದ್ದೀರಿ ಎಂದು ನಾವು ಹೇಳಬೇಕಾಗುತ್ತದೆ.

ಶ್ರೀ ಕೆ. ಜಿ. ಮಹೇಶ್ವರಪ್ಪ —ಮಿಲ್ಸ್ ರೈಡ್ ಆದ ಬಗ್ಗೆ ಶಾಸಕರಿಂದ ದೂರು ಬರುತ್ತಿದೆ. ಮಿಲ್‌ಗಳನ್ನು ಕ್ಲೋಸ್ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ

ಶ್ರೀ ಎಸ್. ಬಂಗಾರಪ್ಪ.—ಯಾವ ಶಾಸಕರಿಂದ ಬಂದಿದೆಯೆಂದು ಹೇಳಿ ಯಾವ ಪಕ್ಷದ ಶಾಸಕರಿಂದ ದೂರು ಬಂದಿದೆ ಎಂದು ಹೆಸರು ಹೇಳಿ, ವಿಚಾರ ಮಾಡೋಣ. ಜನ ಸಾಮಾನ್ಯರ ಬಗ್ಗೆ ನೋಡಬೇಕು, ಶಾಸಕರ ಪ್ರಶ್ನೆಯಲ್ಲ

ಶ್ರೀ ಎಂ ಮಹದೇವ್ —ವಿರೋಧ ಪಕ್ಷದ ಶಾಸಕರಿಂದ ದೂರು ಬರುವುದಿಲ್ಲ. ನಿಮ್ಮ ಕಡೆಯಿಂದ ಮಾಡಬೇಕು ಅಷ್ಟೆ.

ಶ್ರೀ ಎಸ್. ಬಂಗಾರಪ್ಪ —ಹಿಂದಿನ ಸಾರಿ ಉತ್ತರ ಕೊಟ್ಟ ಸಂದರ್ಭದಲ್ಲಿ ಹೇಳಿದ್ದಾರೆ. ನನು ಸಮಿತಿ ವರದಿ ಏನಿದೆ ಅದನ್ನೆಲ್ಲಾ ಜಾರಿಗೆ ಕೊಟ್ಟುಬಿಟ್ಟಿದ್ದೇವೆ. ಎಲ್ಲಾ ಮುಗಿಸಿಬಿಟ್ಟಿದ್ದೇವೆ ಎಂದು ಹೇಳಿದರು. ಸುಮಾರಾಗಿ ರೈತರ ವಿಚಾರದಲ್ಲಿ ಪ್ರತ್ಯೇಕವಾಗಿ ವಿವರಣೆಗಳಿಗೆ, ಅಂಕಿ ಅಂಶಗಳಿಗೆ ಹೋಗುತ್ತೇನೆ. ಸೂಕ್ಷ್ಮವಾಗಿ ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ನಿಮ್ಮ ಗಮನಕ್ಕೆ ತರುತ್ತೇನೆ. ರಾಜ ಸರ್ಕಾರದವರು ಸಪೋರ್ಟ್ ಪ್ರೈಸ್ ಇಷ್ಟು ಇಟ್ಟಿದ್ದರು. ಸೂಪರ್ ಫೈನ್ ವರೈಟಿಗೆ 140, ಮತ್ತು ಕೋರ್ಸ್‌ಗೆ 132 ರೂಪಾಯಿ ಇಟ್ಟಿದ್ದರು, ಜವಾರ್ ಮತ್ತು ರಾಗಿಗೆ 124 ಮಾತ್ರ ರಾಜ್ಯ ಸರ್ಕಾರದವರು ಇಟ್ಟಿದ್ದಾರೆ, ಈಗ ಇತ್ತೀಚಿನ ಮಾಹಿತಿಯನ್ನು ಇಲಾಖೆಯಿಂದ ತರಿಸಿದ್ದೇನೆ ಈಗ ನಾವು ವಿಚಾರ ಮಾಡೋಣ. ನಮ್ಮ ಸಮಿತಿ ವರದಿಯನ್ನು ಸಂಪೂರ್ಣವಾಗಿ ಜಾರಿ ಕೊಟ್ಟಿದ್ದೇವೆ ಎಂದು ತಮ್ಮ ಭುಜವನ್ನು ತಾವೇ ತಟ್ಟಿಕೊಂಡು ಭಾಷಣ ಮಾಡಿದಿರಿ. ನಮ್ಮ ಕಮಿಟಿಯವರು ಯಾವ ಯಾವ ಕಮಾಡಿಟಿ ಬಗ್ಗೆ ಹೇಳಿದ್ದಾರೆ, 1980ನೇ ಇಸವಿಯಲ್ಲಿ ವರದಿ ಏನು ಕೊಟ್ಟಿತ್ತು ನೋಡಿ. 1980 ಇಸವಿಯಾಗಿ ಮೂರು ನಾಲ್ಕು ವರ್ಷವಾಯಿತು. ಈ ಅಂತರದಲ್ಲಿ ಕೆಮಿಕಲ್ ಮೆನ್ಯೂರ್ ರೇಟ್, ವಾಟರ್‌ದು, ಕೂಲಿ ವ್ಯವಸಾಯೋಪಕರಣಗಳು ಇವೆಲ್ಲಕ್ಕೂ ಎಷ್ಟು ಖರ್ಚು ಬರುತ್ತದೆ ಎಂದು ವಿಚಾರ ಮಾಡಿ ಹೇಳಿದರೂ ಕೂಡ ಅದು ಶಾಶ್ವತವಲ್ಲ. ಬೇರೆ ಕಮಾಡಿಟಿಗಳ ರೇಟು ವ್ಯತ್ಯಾಸವಾದ ಹಾಗೆ ಇದೂ ಕೂಡದ

ಪ್ರಪೋರ್ಷನೇಟಾಗಿ ಹೋಗಬೇಕು ಎನ್ನತಕ್ಕ ಮಾತನ್ನು ತಿಳಿಸಿದ್ದೇವೆ. ಈಗಿರತಕ್ಕ ಗೊಬ್ಬರದ ರೇಟನ್ನು ವಿಚಾರ ಮಾಡಿದರೆ 150 ರೂಪಾಯಿ ಎಂದು ಹೇಳುತ್ತಾರೆ. ಹಾಗಾದರೆ ನೀವು ಎಲ್ಲಿ ಜಾರಿ ಕೊಟ್ಟಿದ್ದೀರಿ, ಸೂಪರ್‌ಫೈನ್ 140 ಇಟ್ಟಿದ್ದೀರಿ. ಜವಾರ್ 130 ಎಂದು ಹೇಳಿದ್ದೆವು. ಈಗ ನನ್ನ ಕಮಿಟಿ ಇದ್ದಿದ್ದರೆ ಜೋಳಕ್ಕೆ 170–180 ಎಂದು ಬರೆಯುತ್ತಿದ್ದೆವು. ಭತ್ತಕ್ಕೆ 200 ಎಂದು ಬರೆಯ ಬೇಕು ಇಲ್ಲದೇ ಹೋದರೆ ರೈತ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಗ್ರಾಂನಟ್, ಶುಗರ್‌ಕೇನ್ ಎಲ್ಲದಕ್ಕೂ ನಾವು ಬರೆದಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಬಂಗಾರಪ್ಪ ವರದಿಯನ್ನು ಸಂಪೂರ್ಣ ವಾಗಿ. ಜಾರಿ ಕೊಟ್ಟು ಬಿಟ್ಟಿದ್ದೇವೆ, ಎಲ್ಲೋ ಅಲ್ಪ ಸ್ವಲ್ಪ ಉಳಿದಿರಬೇಕು ಎನ್ನತಕ್ಕ ಅರ್ಥದಲ್ಲಿ ಹೇಳಿ ದರು ಆ ದಿನಸ ವರದಿ ನನ್ನ ಕೈಯಲ್ಲಿ ಇರಲಿಲ್ಲ ರಾಜ್ಯ ಸರ್ಕಾರದವರು ಲೆವಿ ಪ್ರೈಸ್ ಬಗ್ಗೆ ಏನು ಭರವಸೆ ಕೊಟ್ಟಿದ್ದೀರಿ ಅದು ನನ್ನ ಹತ್ತಿರ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ರೈತರ ಬೇಡಿಕೆಗಳ ವಿಚಾರದಲ್ಲಿ ಯಾವ ಮಾತನ್ನು ಹೇಳಿದ್ದಾರೆ ಬಂಗಾರಪ್ಪ ಸಮಿತಿ ಶಿಫಾರಸು ಜಾರಿಗೆ ಕೊಡುತ್ತೇವೆಂದು ಏನು ಹೇಳಿದ್ದಾರೆ ಅದು ವಾಸ್ತವಾಂಶಕ್ಕೆ ಸಂಪೂರ್ಣ ದೂರವಾದುದು, ಸತ್ಯಕ್ಕೆ ದೂರವಾದುದು. ಈಗ ನಾನು ಸಂಪೂರ್ಣವಾಗಿ ವಿವರಗಳಿಗೆ ಹೋಗುವುದಿಲ್ಲ ರೈತರ ಬೇಡಿಕೆ ಬಗ್ಗೆ ಹೇಳಿದ್ದಾರೆ. ಪತ್ರಿಕೆ ಯಲ್ಲಿ ಮುಂಗಡ ಪತ್ರದ ಬಗ್ಗೆ ಒಂದು ಕಾರ್ಟೂನ್ ಬರೆದಿದ್ದಾರೆ. ರೈತರಿಗೆ ಕೊಟ್ಟ ರಿಯಾಯಿತಿ ಯನ್ನು ತೋರಿಸಿದ್ದಾರೆ ಅದರಲ್ಲಿ ರೈತರ ಬಾಯಿ ಬಹಳ ದೊಡ್ಡದಾಗಿ ಬರೆದಿದ್ದಾರೆ.

ಮಾನ್ಯ ರಾಮಕೃಷ್ಣ ಹೆಗಡೆಯವರ ಬಡ್ಜೆಟ್ ಇದೆಯಲ್ಲಾ ಅದು ಗೋಲಿ ಗುಂಡು ಇದ್ದ ಹಾಗೆ ನೀವು ಕೊಡತಕ್ಕ ರಿಯಾಯಿತಿ ಇದೆ ರಾಜ್ಯದಲ್ಲಿ ರೈತರಿಗೆ ಸಾಲ ರಿಯಾಯಿತಿ ಕೊಟ್ಟಿರಿ. ರೈತರಿಗೆ ಸಹಕಾರ ಸಂಘಗಳ ಮುಖಾಂತರ, ಬೇರೆ ಸಂಘಗಳ ಮುಖಾಂತರ ಸಾಲ ರಿಯಾಯಿತಿ ಕೊಟ್ಟಿರಿ ಈ ಬಗ್ಗೆ ಬಡ್ಜೆಟ್‌ನಲ್ಲಿ ಒಂದು ಮಾತನ್ನು ಬರೆದಿದ್ದೀರಿ ಸಂತೋಷ ಆದರೆ ಸಣ್ಣ ಪುಟ್ಟ ರೈತರು ಅದರ ಉಪ ಯೋಗ ಪಡೆದಿಲ್ಲ ಎಂದು ಹೇಳುತ್ತಾರೆ ನೀವು ಬಜ್ಜೆಟ್ ಭಾಷಣ ಮಾಡುವುದಕ್ಕೆ ಮೊದಲು ದೊಡ್ಡ ರೈತರಿಗೆ ರಿಯಾಯಿತಿ ಕೊಟ್ಟಿದ್ದೀರಿ. ಅದಕ್ಕೆ ಎರಡರಷ್ಟು ಸಣ್ಣ ರೈತರಿಗೆ ರಿಯಾಯಿತಿ ಕೊಡಬೇಕು, ಇಲ್ಲದೇಹೋದರೆ ಪ್ರಯೋಜನವಾಗುವುದಿಲ್ಲ; ಸಣ್ಣ ಪುಟ್ಟ ರೈತರಿಗೆ ಸಾಲ ಹುಟ್ಟುವುದಿಲ್ಲ. ದೊಡ್ಡವ ರಿಂದ ಸಾಲ ವಸೂಲಾಗಬೇಕು, ಅದಕ್ಕೋಸ್ಕರ ಬಾಕಿ ಇರುವವರ ಬಗ್ಗೆ ಕಾರ್ಯಕ್ರಮ ಹಾಕಿ. ಆದರೆ ಸಣ್ಣ ಪುಟ್ಟ ರೈತರ ಮನೆ ಜಪ್ತಿ ಮಾಡುತ್ತಿದ್ದಾರೆ, ಬೀಜದ ಭತ್ತ ತೆಗೆದಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಜಪ್ತಿ ಮಾಡುವುದಿಲ್ಲ ಎಂದು ಹೇಳಿದ್ದರು, ಆದರೆ ನನ್ನ ತಾಲ್ಲೂಕಿನಲ್ಲಿ 8–10 ಕಡೆ ನಡೆದಿದೆ. ಈ ಸಂದರ್ಭ ದಲ್ಲಿ ರೈತರ ಬೇಡಿಕೆಗಳು ಏನಿವೆ ಆ ಬೇಡಿಕೆಗಳನ್ನೆಲ್ಲಾ ನಾವು ಈ ಜಾರಿ ಕೊಟ್ಟು ಬಿಟ್ಟಿದ್ದೇವೆ ಎಂದು ರಾಜ್ಯ ಸರ್ಕಾರದ ಮಾತು ಏನಿದೆ ಅದು ಸತ್ಯಕ್ಕೆ ದೂರವಾದದು. ರೈತರ ಬೇಡಿಕೆಯ ಬಗ್ಗೆ ಮಾತನ್ನು ಆಡಿದಾಗ ಸಾಲದ ವಿಚಾರದಲ್ಲಿ ಸಹಾಯದ ಹಸ್ತವನ್ನು ಚಾಚಿದ್ದೀರಿ ಇನ್ನೊಂದು ಕಡೆ ಆಸ್ತಿಗಳನ್ನು ಹರಾಜು ಮಾಡುವುದಕ್ಕೆ ಹೊರಟಿದ್ದೀರಿ. ಹೀಗಾಗಿ ಬಡವರಿಂದ ವಿರೋಧ ಕಟ್ಟಿಕೊಳ್ಳತಕ್ಕ ಸಂದರ್ಭಕ್ಕೂ ಕೂಡ ನೀವು ಹೋಗಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಕನ್ನಡ ಮತ್ತು ಸಂಸ್ಕೃತಿಯ ಬಗ್ಗೆ ಒಂದು ಮಾತನ್ನು ಆಡಬೇಕು, ಕಳೆದ ವರ್ಷದ ಬಡ್ಜೆಟ್ ಪುಸ್ತಕದಲ್ಲಿ ಕನ್ನಡದ ಬಗ್ಗೆ ಎಲ್ಲಿಲ್ಲದ ಅಭಿಮಾನದ ಮಾತು, ಆದರೆ ಈ ಸಾರಿ ಮೈನಸ್.

> "ಈ ವರ್ಷದ ರಾಜ್ಯೋತ್ಸವ ದಿನದಂದು ವಿಶ್ವ ಕನ್ನಡ ಸಮ್ಮೇಳನವನ್ನು ನಡೆಸಲು ನಿರ್ಧರಿಸಿ ದ್ದೇವೆ. 1984-85ರಲ್ಲಿ ಉರ್ದು ಅಕಾಡೆಮಿ, ಸಾಹಿತ್ಯ ಅಕಾಡೆಮಿ, ಹಾಗೂ ನಾಟಕ ಅಕಾಡೆಮಿಗಳಿಗೆ ಕಟ್ಟಡ ಸಮುಚ್ಚಯ ನಿರ್ಮಿಸಲು ನಿಶ್ಚಯಿಸಿದ್ದೇವೆ. ಇದಕ್ಕಾಗಿ ಆಯ ವ್ಯಯ ಪತ್ರದಲ್ಲಿ 30 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.
>
> ರಾಜ್ಯದ ಹೊರಗೆ ಕನ್ನಡ ಶಾಲೆಗಳು ಹಾಗೂ ಕನ್ನಡ ಸಂಘಗಳ ಕಟ್ಟಡಕ್ಕಾಗಿ 25 ಲಕ್ಷ ರೂಪಾಯಿಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.
>
> ರಾಜ್ಯದಲ್ಲಿರುವ ಕನ್ನಡೇತರರಿಗೆ ಕನ್ನಡ ಕಲಿಸುವ ಶಾಲೆಗಳಿಗೆ ವಿಶೇಷ ಸಹಾಯಧನ ನೀಡ ಬಯಸುತ್ತೇನೆ."

ಎಂದು ಹೇಳಿದ್ದಾರೆ. ಮಿಕ್ಕಿದ್ದು ಹೋಯಿತು. ಕನ್ನಡವನ್ನು ಅಡಿಯಿಂದ ಮುಡಿಯವರೆಗೆ ಜಾರಿಗೆ ತರ ತಕ್ಕ ವಿಚಾರದಲ್ಲಿ ಮೂರು ಮುಖ್ಯ ಭಾಗಗಳಿವೆ ಅದು ಆಡಳಿತ ಕ್ಷೇತ್ರ, ಶಿಕ್ಷಣ ಕ್ಷೇತ್ರ ಮತ್ತು ನ್ಯಾಯಾಲಯಗಳು– ಈ ಮೂರು ಭಾಗಗಳಿವೆ. ಕೋರ್ಟಿನಲ್ಲೂ ಕೂಡ ಕನ್ನಡ ಆಗಬೇಕು ಎನ್ನತಕ್ಕ ಭಾವನೆ ಇದೆ. ಇಲ್ಲಿನ ಕೆಲಸ ಕಾರ್ಯಗಳು ಇನ್ನೂ ಸಂಪೂರ್ಣವಾಗಿ ನಡೆಯುತ್ತಾ ಇಲ್ಲ. ಕನ್ನಡದ ಬಗ್ಗೆ ಒಂದು ಕಾವಲು ಸಮಿತಿ ಎಂದು ಇದೆ. ಈ ಕಾವಲು ಸಮಿತಿಯವರು ಏನೇನು ಶಿಫಾರಸು

ಗಳನ್ನು ಕೊಟ್ಟಿದ್ದಾರೆ, ಅದರಲ್ಲಿ ಎಷ್ಟು ಜಾರಿಗೆ ಕೊಟ್ಟಿದ್ದೀರಿ ಎನ್ನುವುದನ್ನು ಬಜೆಟ್‌ನಲ್ಲಿ ಬರೆಯ ಬೇಕಾಗಿತ್ತು. ಕಾವಲು ಸಮಿತಿಯ ಶಿಫಾರಸನ್ನು ಜಾರಿಗೆ ಕೊಟ್ಟಿರುವ ಬಗ್ಗೆ ಒಂದು ಸೊಲ್ಲೂ ಇಲ್ಲ, ಮಾತೂ ಇಲ್ಲ. ಈ ಸಾರಿ ಏಕೆ ಮೈನಸ್ ಮಾಡಿದ್ದೀರಿ ಎಂದು ಗೊತ್ತಿದೆ. ಹೋದಸಲ ಕನ್ನಡದ ಬಗ್ಗೆ ಎಲ್ಲಿಲ್ಲದ ಅಭಿಮಾನದ ಮಾತನಾಡಿರತಕ್ಕ ನೀವು ಸಣ್ಣ ಪುಟ್ಟ ವಿಚಾರ ಬಿಟ್ಟರೆ ಉಳಿದಿರತಕ್ಕ ವಿಷಯ ಗಳ ಬಗ್ಗೆ ಯಾವ ಸೊಲ್ಲೂ ಇಲ್ಲ ಕನ್ನಡವನ್ನು ಆಡಳಿತ, ಶಿಕ್ಷಣ ಮತ್ತು ನ್ಯಾಯಾಲಯಗಳಲ್ಲಿ ನೀವು ತರುವುದಕ್ಕೆ ಸಾಧ್ಯವಿಲ್ಲ ಕಾವಲು ಸಮಿತಿ ಶಿಫಾರಸು ಕಟ್ಟಿಕೊಂಡು ಏನಾಗಬೇಕು ಮಾನ್ಯ ದೊಡ್ಡ ಮೇಟಿಯವರು ಕನ್ನಡದ ಬಗ್ಗೆ ಚೆನ್ನಾಗಿ ಭಾಷಣ ಮಾಡುತ್ತಾರೆ' ಅವರು ಏನು ಹೇಳುತ್ತಾರೋ ನೋಡ ಬೇಕು. ಅದಕ್ಕಾಗಿ ಹಣ ತೆಗೆದಿಟ್ಟಿಲ್ಲ.

ಇನ್ನು ಟ್ಯಾಕ್ಸೇಷನ್ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ತಮಗೆ ಗೊತ್ತಿರುವ ಹಾಗೆ ಜನಸಾಮಾನ್ಯರು ಉಪಯೋಗಿಸತಕ್ಕ ವಸ್ತುಗಳ ಮೇಲೆ ಪುನಃ ತೆರಿಗೆಗಳನ್ನು ಹಾಕಿದ್ದಾರೆ. ಇದ ರಲ್ಲಿ ನೋಡಿದರೆ ಗೊತ್ತಾಗುತ್ತದೆ. "ಹೊಲಿಗೆ ದಾರದ ಮಾರಾಟದ ಮೇಲಣ ತೆರಿಗೆ ದರದಲ್ಲಿ ಏರಿಕೆ 3 ರಿಂದ 4 ಪರ್ಸೆಂಟ್" ಎಂದು ಇದೆ ಇದರ ಮೇಲೆ ಸೆಲ್ಸ್‌ಟ್ಯಾಕ್ಸ್ ಹಾಕಿಬಿಟ್ಟರೆ ಇದನ್ನು ಕೊಂಡು ಕೊಳ್ಳುಹಾಗಿಲ್ಲ. ವನಸ್ಪತಿ, ಶುದ್ಧೀಕರಿಸಿದ ಖಾದ್ಯ ತೈಲದ ಮೇಲಣ ತೆರಿಗೆ ದರದಲ್ಲಿ ಏರಿಕೆ ಮಾಡಿದ್ದೀರಿ. ಮೊನ್ನೆ ನಮ್ಮ ಸ್ನೇಹಿತರು ಹೇಳುತ್ತಿದ್ದರು. ಈಗ ಹತ್ತಿ ಕಾಳಿನಿಂದ ಎಣ್ಣೆ ತೆಗೆಯುತ್ತಾರೆ ಅದನ್ನು ಶುದ್ಧಿ ಮಾಡಿ ಉಪಯೋಗ ಮಾಡುತ್ತಾರೆ. ಶುದ್ಧೀಕರಿಸಿದ ಖಾದ್ಯ ತೈಲದ ಮಾರಾಟದ ಮೇಲಣ ತೆರಿಗೆ ದರ ಏರಿಕೆ 3 ರಿಂದ 5 ಪರ್ಸೆಂಟ್ ಏರಿಸಿದ್ದೀರಿ. ಈಗ ಇದರ ಮೇಲೆ ಕೂಡ ತೆರಿಗೆ ಬಿತ್ತು ಹತ್ತಿ ಕಾಳಿನ ಎಣ್ಣೆಯೂ ಕೂಡ ತಿನ್ನತಕ್ಕ ಎಣ್ಣೆ. ಇದರ ಮೇಲೂ ಕೂಡ ತೆರಿಗೆ ಬೀಳುತ್ತದೆ ಆಮೇಲೆ "50 ರೂಪಾಯಿಗಿಂತ ಹೆಚ್ಚು ಬೆಲೆಯ ಸಿದ್ಧಪಡಿಸಿದ ಉಡುಪುಗಳ ಮಾರಾಟ ಮೇಲಣ ತೆರಿಗೆ ದರದಲ್ಲಿ ಏರಿಕೆ. ಇದು ಚೆನ್ನಾಗಿದೆ. ಇವತ್ತು 50 ರೂಪಾಯಿಗೆ ಸಣ್ಣ ಹುಡುಗನಿಗೆ ನಿಕ್ಕರ್, ಚಡ್ಡಿ ಕೂಡ ಬರುವುದಿಲ್ಲ.

ಶ್ರೀ ಕೆ. ಜಿ. ಮಹೇಶ್ವರಪ್ಪ.--ಜುಬ್ಬ ಬರುತ್ತದೆ

ಶ್ರೀ. ಎಸ್. ಬಂಗಾರಪ್ಪ --30 ರೂಪಾಯಿಗಳಿಗೆ ಮಕ್ಕಳ ಚಡ್ಡಿ ಬರುವುದಿಲ್ಲ ಇನ್ನು ಮಕ್ಕಳಿಗೆ ಬೇಕಾದ ಶರಟನ್ನು ಏನು ಮಾಡುವುದು ಉದಾಹರಣೆಗೆ ಹೇಳುವುದಾದರೆ, ಊರುಗಳಲ್ಲಿ ಸಂತೆಯಲ್ಲಿ ಸಿದ್ಧಪಡಿಸಿರತಕ್ಕ ಉಡುಪುಗಳು ಬರುತ್ತವೆ

ಶ್ರೀ ಕೆ. ಎಚ್. ರಂಗನಾಥ್ --ಚಡ್ಡಿ ಬೇಡ ಜುಬ್ಬ ಹೊಲಿಸಿಕೊಳ್ಳಿ ಅಂತ

ಶ್ರೀ ಎಸ್. ಬಂಗಾರಪ್ಪ – ಚಡ್ಡಿ ಬೇಡ ಜುಬ್ಬ ಹಾಕಿಕೊಳ್ಳಿ ಅಂತ ಹೇಳುತ್ತೀರಾ? 50 ರೂಪಾಯಿ ಗಳಿಂದ ಕೆಳಗೆ ಸಿದ್ಧ ಉಡುಪುಗಳನ್ನು ಕೊಂಡುಕೊಂಡವರಿಗೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಆಯವ್ಯಯದಲ್ಲಿ ರಿಯಾಯಿತಿಯನ್ನು ಕೊಟ್ಟಿದ್ದಾರೆ ನಮ್ಮ ತಾಲ್ಲೂಕಿನಲ್ಲೂ ಸಂತೆ ನಡೆಯುತ್ತವೆ. ಅದೇ ರೀತಿ ನಿಮ್ಮ ಕೊರಟಗೆರೆ ತಾಲ್ಲೂಕಿನಲ್ಲೂ ಸಂತೆ ನಡೆಯುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ ಅಲ್ಲೂ ಕೂಡ ಸಿದ್ಧ ಉಡುಪುಗಳನ್ನು ಮಾರಾಟ ಮಾಡುವುದಕ್ಕೆ ತಂದಿರುತ್ತಾರೆ. ಅವುಗಳನ್ನು ತಾವು ನೋಡಿರಬಹುದು

ಶ್ರೀ ಕೆ. ಎಚ್. ರಂಗನಾಥ್ --ಅವರ ತಾಲ್ಲೂಕಿನಲ್ಲಿ ವಿಶೇಷವಾದ ಸಂತೆಯಾಗುತ್ತದೆ. ಕೋಳಿ ವ್ಯಾಪಾರ ಮಾಡುತ್ತಾರೆ. ಲಾರಿ ಲಾರಿ ಕೋಳಿಗಳು ಅಲ್ಲಿಗೆ ಹೋಗುತ್ತವೆ.

ಶ್ರೀ ಎಸ್. ಬಂಗಾರಪ್ಪ --ಈ ರಿಯಾಯಿತಿ ಏನಿದೆ ಇದರಿಂದ ಬಡವರಿಗೆ ಯಾವ ಲಾಭವಾಗುವು ದಿಲ್ಲ. ಅದೇ ರೀತಿ ವಾಚುಗಳ ಮೇಲೆ ಇದ್ದಂತಹ ಶೇಕಡ 12 ಪರ್ಸೆಂಟ್ ಟ್ಯಾಕ್ಸನ್ನು 15 ಪರ್ಸೆಂಟ್‌ಗೆ ಏರಿಸಿದ್ದೀರಿ. ಇದರಿಂದ ಬಡವರು ಯಾರು ವಾಚು ಕಟ್ಟಬಾರದು ಅಂತ ನಿಮ್ಮ ತೀರ್ಮಾನವೇ ? ಎಲ್ಲಾ ಶಕ್ತಿವಂತರೇ ವಾಚನ್ನು ಕಟ್ಟಬೇಕೋ ? ನೀವು ಮಂಡ್ಯ ಜಿಲ್ಲೆಗೆ ಹೋಗಿ ನೋಡಿರಬಹುದು ಅಲ್ಲಿ ಹೊಲವನ್ನು ಊಳುವುದಕ್ಕೆ ಹೋಗುವಂತಹವರೂ ಕೂಡ ವಾಚನ್ನು ಕಟ್ಟಿ ಕೊಂಡು ಹೋಗುತ್ತಾನೆ. ಅವುಗಳು ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗುತ್ತಿವೆ. ಈಗ ತಾವು ಏನು ಶೇಕಡ 12 ರಿಂದ 15 ಪರ್ಸೆಂಟ್‌ವರೆಗೆ ಮಾರಾಟ ತೆರಿಗೆಯನ್ನು ಹೆಚ್ಚು ಮಾಡಿದ್ದೀರಿ. ಇದರಿಂದ ವಾಚಿನ ಬೆಲೆ ಕೂಡ ಜಾಸ್ತಿಯಾಗುತ್ತದೆ.

ನಂತರ ಕಾಸ್ಮೆಟಿಕ್ಸ್ ಮೇಲಿನ ತೆರಿಗೆಯನ್ನೂ ಕೂಡ ಜಾಸ್ತಿ ಮಾಡಿದ್ದಾರೆ. ಅಂದರೆ ಹಣ ವಂತರು ಮಾತ್ರ ಪೌಡರ್ ಹಾಗೂ ವಾಸನೆ ಎಣ್ಣೆಯನ್ನು ಹಚ್ಚಿಕೊಳ್ಳಬೇಕು. ಸಾಮಾನ್ಯ ಜನ ಹಚ್ಚ ಬಾರದಾ ?

ಶ್ರೀ ಪಿ. ರಾಮದೇವ್.--ಗ್ರಾಮಾಂತರ ಪ್ರದೇಶದ ಜನರೂ ವಾಸನೆ ಎಣ್ಣೆ ಹಾಗೂ ಪೌಡರ್ ಹಚ್ಚಿಕೊಳ್ಳಬೇಕು ಅಂತ ಹೇಳುತ್ತಿದ್ದೀರಾ ; ಏಕೆಂದರೆ ಲಿಫ್‌ಸ್ಟಿಕ್ ಸಂಸ್ಕೃತಿ ಕೇವಲ ಪಟ್ಟಣಗಳಲ್ಲಿ ಮಾತ್ರ ಇದೆ. ಅದು ಗ್ರಾಮಾಂತರ ಪ್ರದೇಶಗಳ ಸಂಸ್ಕೃತಿಯೂ ಆಗಬೇಕೆಂಬುದು ನಿಮ್ಮ ವಾದವೇ ?

ಶ್ರೀ ಎಸ್. ಬಂಗಾರಪ್ಪ --ಹಳ್ಳಿಗಳವರೂ ಪೌಡರನ್ನು ಹಾಕಿಕೊಳ್ಳಬೇಕೋ ಬೇಡವೋ ಪೇಟೆಯವರೇ ಏಕೆ ಹಾಕಿಕೊಳ್ಳಬೇಕು ?

ಶ್ರೀ ಬಿ ಸೋಮಶೇಖರ್.--ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲದಿದ್ದರೂ ಸ್ನೋ-ಪೌಡರ್ ಹಾಕಿಕೊಳ್ಳಬೇಕು, ವಾಚುಗಳು ಬೇಕು ಎನ್ನತಕ್ಕಂತಹದು ನಿಮ್ಮ ವಾದವೇ ?

ಶ್ರೀ ಎಸ್. ಬಂಗಾರಪ್ಪ.—ಆಯವ್ಯಯದಲ್ಲಿ ಪೌಡರ್ ವಿಚಾರ ಹೇಳಿದ್ದಾರೆ. ಅದಕ್ಕಾಗಿ ಭಾಷಣ ಮಾಡಿದೆ ಅಷ್ಟೆ. ನೀವು ಪೌಡರ್ ಬೆಲೆಯನ್ನು ಜಾಸ್ತಿ ಮಾಡಿದ್ದೀರಿ ಜನಗಳು ಬೇರೆ ಪೌಡರನ್ನು ನಿಮಗೆ ಹಚ್ಚಿ ಕಳುಹಿಸುತ್ತಾರೆ ಚುನಾವಣೆಯ ಸಮಯದಲ್ಲಿ. ಅದೇ ರೀತಿ ಪೆಟ್ರೋಲ್ ಬೆಲೆ ಜಾಸ್ತಿ ಮಾಡಿದ್ದಾರೆ. ಪೆಟ್ರೋಲ್ ಮೇಲಿನ ತೆರಿಗೆಯನ್ನು 12 5 ಪರ್ಸೆಂಟಿನಿಂದ 15 ಪರ್ಸೆಂಟ್‌ಗೆ ಹೆಚ್ಚು ಮಾಡಿದ್ದಾರೆ. ಅದೇರೀತಿ ಸಿಹಿ ತಿಂಡಿಗಳು ಹಾಗೂ ಬಿಸ್ಕತ್ತುಗಳ ಮೇಲಿನ ತೆರಿಗೆಯನ್ನು ಜಾಸ್ತಿ ಮಾಡಿದ್ದೀರಿ. ಸಾಮಾನ್ಯ ಜನ ಬಸ್ ಸ್ಟ್ಯಾಂಡಿನಲ್ಲಿ ಬಿಸ್ಕತ್ ಪ್ಯಾಕೆಟ್‌ಗಳನ್ನು ಮಕ್ಕಳಿಗಾಗಿ ತೆಗೆದುಕೊಳ್ಳುತ್ತಾರೆ. ಅದರೆ ಅದರ ಮೇಲಿನ ತೆರಿಗೆಯನ್ನೂ ಕೂಡ 8 ರಿಂದ 10ಕ್ಕೆ ಹೆಚ್ಚು ಮಾಡಿದ್ದಾರೆ. ಆದೇ ರೀತಿ ಪಿಂಗಾಣಿ ಸಾಮಾನುಗಳ ಮೇಲಿನ ತೆರಿಗೆಯನ್ನು ಹೆಚ್ಚು ಮಾಡಿದ್ದಾರೆ. ಯಾರಾದರೂ ಪೇಟೆಗೆ ಬಂದರೆ ಲೋಟ ಇನ್ನಿತರೆ ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು, ಇವತ್ತು ಅದರ ಮೇಲಿನ ತೆರಿಗೆಯನ್ನೂ ಕೂಡ ಜಾಸ್ತಿ ಮಾಡಿದ್ದಾರೆ. ಅದೇ ರೀತಿ ಪಾದರಕ್ಷೆಗಳ ಮೇಲಿನ ತೆರಿಗೆಯನ್ನು 30 ರೂ. ಗಳಿಗಿಂತ ಹೆಚ್ಚಿನ ಬೆಲೆಯ ಪಾದರಕ್ಷೆಗಳ ಮಾರಾಟದ ಮೇಲಿನ ತೆರಿಗೆಯನ್ನು 6 ರಿಂದ 8 ಪರ್ಸೆಂಟ್‌ಗೆ ಹೆಚ್ಚು ಮಾಡಿದ್ದಾರೆ. ಹಗಾದರೆ 30 ರೂಪಾಯಿಗಳಿಗಿಂತ ಕಡಿಮೆ ದರದಲ್ಲಿ ಚಪ್ಪಲಿಗಳನ್ನು ಕೊಡಿಸುತ್ತೀರಾ ?

ಶ್ರೀ ಹನುಮಂತರಾವ್ ದೇಸಾಯಿ.—20 ರಿಂದ 25 ರೂಪಾಯಿಗಳಿಗೂ ಪಾದರಕ್ಷೆಗಳು ಸಿಕ್ಕುತ್ತವೆ. ಆದರೆ ತಾವು ಮೆಡುವಂತಹವುಗಳು ಸಿಕ್ಕುವುದಿಲ್ಲ.

ಶ್ರೀ ಎಸ್ ಬಂಗಾರಪ್ಪ.--ಜನಸಾಮಾನ್ಯರು ಉಪಯೋಗ ಮಾಡತಕ್ಕ ಪಾದರಕ್ಷೆಗಳ ಮೇಲಿನ ಮಾರಾಟ ತೆರಿಗೆಯನ್ನು 6 ರಿಂದ 8 ಪರ್ಸೆಂಟಿಗೆ ಹೆಚ್ಚು ಮಾಡಿದ್ದೀರಾ ಇಂತಹ ವಸ್ತುಗಳ ಮೇಲೂ ಇರತಕ್ಕಂತಹ ಮಾರಾಟ ತೆರಿಗೆಯನ್ನು ಹೆಚ್ಚು ಮಾಡಿರುವುದನ್ನು ದಯಮಾಡಿ ತೆಗೆದು ಹಾಕುವುದು ಒಳ್ಳೆಯದೆಂಬುದು ನನ್ನ ಅಭಿಪ್ರಾಯ ಇಷ್ಟು ಮಾತ್ರ ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಿ ಕೊನೆಗೆ ಒಂದು ಮಾತನ್ನು ಹೇಳಬೇಕೆಂದಿದ್ದೇನೆ.

ಸೈಟುಗಳು ಹಾಗೂ ಮನೆಗಳನ್ನು ಕೊಡತಕ್ಕಂತಹ ವಿಚಾರದಲ್ಲಿ ಒಂದು ವಿಚಾರವನ್ನು ಹೇಳಬೇಕಾಗಿದೆ. ಬೆಂಗಳೂರು ಜಿಲ್ಲೆಯ ಬನ್ನೇರು ಘಟ್ಟದ ಹತ್ತಿರ ಇರುವ ಬ್ಯಾರಕನಹಳ್ಳಿ ಎಂಬುದಲ್ಲಿ ಹರಿಜನ-ಗಿರಿಜನರು ಮನೆ ಕಟ್ಟಿಕೊಂಡು ಅನೇಕ ವರ್ಷಗಳಿಂದ ವಾಸ ಮಾಡಿಕೊಂಡಿದ್ದಾರೆ. 1978ನೇ ಇಸವಿಯಿಂದಲೂ ಅಲ್ಲಿ ಇದ್ದೇವೆಂದು ಅವರು ತಿಳಿಸಿದ್ದಾರೆ. ಆ ನಿವೇಶನಗಳಿಗೆ ಹಕ್ಕುಪತ್ರಗಳನ್ನೂ ಕೊಡ ಕೆಲವರಿಗೆ ಕೊಟ್ಟಿದ್ದಾರೆ. ಕೆಲವರಿಗೆ ಕೊಟ್ಟಿಲ್ಲ. ಆದರೆ ಈ ಮಧ್ಯೆ ಅಲ್ಲಿಯ ಕೆಲವು ಶಕ್ತಿವಂತ ಜನ ಅವರಿಗೆ ತೊಂದರೆಯನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಆ ಜಾಗ ಆವರ ಸ್ವಂತದ್ದೆಂದು ಬೇರೆಯವರಿಗೆ ಮಾರಾಟ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಹೈಕೋರ್ಟಿಗೆ ರಿಟ್ ಹಾಕಿದ್ದರು. ಆ ರಿಟ್ ಡಿಸ್‌ಮಿಸ್ ಆಗಿದೆ. ಹಕ್ಕುಪತ್ರ ಕೊಡದೇ ಇರುವವರಿಗೆ ಇಷ್ಟರವರೆಗೆ ಕೊಟ್ಟುಬಿಟ್ಟಿದ್ದಿದ್ದರೆ ಕೆಲಸ ಮುಗಿದು ಹೋಗುತ್ತಿತ್ತು. ಇದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇನೆ ಇದನ್ನು ಮುಂದುವರಿಯುವುದಕ್ಕೆ ಬಿಡಬೇಡಿ: ಬಡವರು ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರು ಸತ್ಯಾಗ್ರಹ ಮಾಡುತ್ತಿದ್ದು 2 ತಿಂಗಳ ಮೇಲಾಗಿದೆ. ಹರಿಜನ-ಗಿರಿಜನರೇ ಹೆಚ್ಚಿಗೆ ಇರುವ ಇವರಿಗೆ ಮೊದಲು ಪರಿಹಾರವನ್ನು ಕೊಡತಕ್ಕಂಹದ್ದು. ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಎ. ಮುನಿಯಪ್ಪ.--ತಾವು ಎಲ್ಲ ವಿಚಾರವನ್ನೂ ಹೇಳಿದಿರಿ. ಆದರೆ ಸರ್ಕಾರಿ ನೌಕರರ ನಿವೃತ್ತಿ ವಯಸ್ಸಿನ ಬಗ್ಗೆ ಯಾವ ವಿಚಾರವನ್ನೂ ತಾವು ಹೇಳಲಿಲ್ಲ.

ಶ್ರೀ ಎಸ್. ಬಂಗಾರಪ್ಪ.--ಮಾನ್ಯ ಸದಸ್ಯರು ನನಗೆ ಒಂದು ಮಾತನ್ನು ಕೇಳಿದ್ದಾರೆ. ಸರ್ಕಾರಿ ನೌಕರರ ವಿಚಾರದಲ್ಲಿ ತೀರ್ಮಾನ ಮಾಡುವುದಕ್ಕೆ ನಮಗೆ ಏಕೆ ಬಿಟ್ಟಿದ್ದೀರಿ ? ಇದರಲ್ಲಿ ಬರೀ ರಾಜಕೀಯ

ಇರತಕ್ಕಂತಹದು. ಸರ್ಕಾರದವರು ನಮ್ಮ ನೀತಿ ಏನು ಈ ಬಗ್ಗೆ ಎಂಬುದನ್ನು ಸದನದ ಮುಂದೆ ಇಡಿ ಧೈರ್ಯ ಇದ್ದರೆ. ನೀವು ಮೊದಲು ಅದನ್ನು ಇಡಬೇಕು. 55 ವರ್ಷದಿಂದ 58 ವರ್ಷಕ್ಕೆ ನಿವೃತ್ತಿ ವಯಸ್ಸನ್ನು ಏರಿಸುವ ಬಗ್ಗೆ. ನಿಮ್ಮ ನಿಲುವು ಏನು ಎಂಬುದನ್ನು ಮೊದಲು ಸದನದಲ್ಲಿ ಇಡಿ. ಅದನ್ನು ಬಿಟ್ಟು ಅದರ ಬಗ್ಗೆ ತೀರ್ಮಾನ ಮಾಡುವುದಕ್ಕೆ ಸದನಕ್ಕೆ ಬಿಟ್ಟರೆ ಹೇಗೆ? ಇದನ್ನು ತೀರ್ಮಾನ ಮಾಡುವಂತಹ ಧೈರ್ಯ ನಿಮಗಿಲ್ಲ. ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 55 ರಿಂದ 58ಕ್ಕೆ ಏರಿಸ ಬೇಕೋ, ಅಥವಾ 55 ವರ್ಷಕ್ಕೇ ಅಂಟಿಕೊಂಡು ಇರುತ್ತಾರೋ ಎಂಬುದನ್ನು ಅವರು ತೀರ್ಮಾನ ಮಾಡಬೇಕು ಅದನ್ನು ನಮ್ಮ ನಿಮ್ಮ ತಲೆಯ ಮೇಲೆ ಏಕೆ ಹಾಕುತ್ತಾರೆ? ಇದು ಒಳ್ಳೆಯದಲ್ಲ ಶ್ರೀಮಾನ್ ಬೊಮ್ಮಾಯಿಯವರೇ, ನಿಮ್ಮ ಮುಖ್ಯ ಮಂತ್ರಿಗಳಿಗೆ ಹೇಳಿ ಈ ರೀತಿಯ ರಾಜಕೀಯವನ್ನು ಕೈ ಬಿಡಬೇಕು. ಇದರ ಬಗ್ಗೆ ಬಹಳ ಎಚ್ಚರಿಕೆಯಿಂದ ಇರಬೇಕು ಎಂದು. ಆಮೇಲೆ ಇದರ ಬಗ್ಗೆ ಮಾತ ನಾಡೋಣ.

ಶ್ರೀ ಎ. ಮುನಿಯಪ್ಪ.--ನಾವೇನೋ ಎಚ್ಚರಿಕೆಯಿಂದ ಇದ್ದೇವೆ. ನೀವೂ ಸ್ವಲ್ಪ ಎಚ್ಚರಿಕೆಯಿಂದ ಇರಿ.

† ಶ್ರೀ ಕೆ. ಬಿ. ಮಲ್ಲಪ್ಪ (ಅರಕಲಗೂಡು).--ಸನ್ಮಾನ್ಯ ಅಧ್ಯಕ್ಷರೆ, 1984-85ನೇ ವರ್ಷದ ಆಯವ್ಯಯವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ನನಗೆ ತಿಳಿದಂತಹ ಕೆಲವು ಅನಿಸಿಕೆಗಳನ್ನು ಇದರ ಬಗ್ಗೆ 2 ಮಾತುಗಳನ್ನು ಹೇಳಬೇಕೆಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇನೆ. ಶ್ರೀಮಾನ್ ಬಂಗಾರಪ್ಪನವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ ಅದೇ ರೀತಿ ಶ್ರೀಮಾನ್ ವೀರಪ್ಪ ಮೊಯ್ಲಿಯ ವರೂ ಕೂಡ ಈ ಬಗ್ಗೆ ಭಾಷಣವನ್ನು ಮಾಡುವ ಸಂದರ್ಭದಲ್ಲೂ ಕೂಡ ನಾನು ಹಾಜರಿದ್ದೆ ಏನು ಆಯ-ವ್ಯಯ ಬಂದಿದೆ ಅದರ ಬಗ್ಗೆ ಏನು ಒಳ್ಳೆಯ ಕೆಲಸಗಳಾಗಿವೆ, ಕಳೆದ ಒಂದು ವರ್ಷದಲ್ಲಿ ಸರ್ಕಾರ ಏನು ಒಳ್ಳೆಯ ಕೆಲಸಗಳನ್ನು ಮಾಡಿದೆ ಅದರ ಬಗ್ಗೆ ಹೇಳುವುದಕ್ಕಿಂತ ಹೆಚ್ಚಿನದಾಗಿ, ಅದರ ಮೇಲೆ ಟೀಕೆಯನ್ನು ಮಾಡಬೇಕೆಂದು ಬಹಳವಾಗಿ ಶ್ರಮ ಪಟ್ಟರು. ಕೆಲವು ಸಂದರ್ಭದಲ್ಲಿ ಮಾತನಾಡುವಾಗ ಇವರು ಬಜೆಟ್ ಬಗ್ಗೆ ಏನು ಮಾತನಾಡಬೇಕೆಂಬ ವಿಚಾರವನ್ನು ಸರಿಯಾಗಿ ತಿಳಿದುಕೊಳ್ಳದೆ ತಡವರಿಸಿ ದ್ದನ್ನು ನಾನು ಹಾಗೇ ಗಮನವಿಟ್ಟು ನೋಡಿದ್ದೇನೆ. ಆದರೆ ಅವರು ಮಾತನಾಡತಕ್ಕ ಸಂದರ್ಭದಲ್ಲಿ ವಿರೋಧಪಕ್ಷದಲ್ಲಿದ್ದು ಆಡಳಿತ ಪಕ್ಷದವರು ಆಯವ್ಯಯವನ್ನು ಮಂಡಿಸಿದಾಗ ಅದರ ಬಗ್ಗೆ ಸಲಹೆ ಕೊಡತಕ್ಕಂತಹ ವಿಚಾರ ಒಂದು ಕಡೆ ಇದ್ದರೂ ಕೂಡ ಅದರಲ್ಲಿ ಮೆಚ್ಚತಕ್ಕ ವಿಚಾರಗಳನ್ನು ಕೂಡ ಅವರು ಹೇಳಬೇಕಾಗಿತ್ತು. ಆದರೆ ಟೀಕೆಗೋಸ್ಕರ ಮಾಡಿರತಕ್ಕಂತಹದ್ದನ್ನು ನೋಡಿ ನನಗೆ ಇವತ್ತು ಬಹಳ ವ್ಯಥೆಯಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.--ಎಷ್ಟೋ ಸಾರಿ ವ್ಯಥೆ ಪಟ್ಟಿದ್ದೀರಿ ;

ಶ್ರೀ ಕೆ. ಬಿ. ಮಲ್ಲಪ್ಪ.--ನಾನು ಏತಕ್ಕಾಗಿ ವ್ಯಥೆಪಡಬೇಕು? ವ್ಯಥೆ ಪಡಬೇಕಾದುದು ಅನಾ ವಶ್ಯಕ. ಏನಾದರೂ ವ್ಯಥೆ ಬಂದಿದೆ ಎಂದರೆ ಪಾಪಾ ಅದು ಬಂಗಾರಪ್ಪನವರಿಗೆ. ಆ ಕಡೆ ಕುಳಿ ತಿರುವರ ಬಗ್ಗೆ ಸ್ವಲ್ಪ ವ್ಯಥೆಯಾಗಿರಬಹುದು. ಏಕೆಂದರೆ ಅಧಿಕಾರವನ್ನು ಕಳೆದುಕೊಂಡು ಆ ಕಡೆ ಕುಳಿತಿ ದ್ದಾರೆ ಅಧಿಕಾರಕ್ಕಾಗಿ ತಳಮಳ ಪಡುತ್ತಿದ್ದಾರೆ. ಅವರಿಗೆ ಯಾವ ರೀತಿ ಆಗಿದೆ ಎಂದರೆ ನೀರಿನ ಲ್ಲಿದ್ದಂತಹ ಮೀನನ್ನು ಹೊರಗೆ ಹಾಕಿದರೆ ಅದು ಹೇಗೆ ಒದ್ದಾಡುತ್ತದೋ, ಆ ರೀತಿ ಒದ್ದಾಡುತ್ತಿದ್ದಾ ಅದಕ್ಕೆ ನಾನು ಹೇಳುವುದೇನೆಂದರೆ. ಶ್ರೀಮಾನ್ ಹೆಗಡೆಯವರು ತಮ್ಮ ಆಯವ್ಯಯ ಭಾಷಣದ 3ನೇ ಕಲಂನಲ್ಲಿ ಒಂದು ವಿಚಾರವನ್ನು ಹೇಳಿದ್ದಾರೆ. ಅದೇನೆಂದರೇ.

> ದುರ್ಬಲ ವರ್ಗಗಳಿಂದ ಅಪಾರ ಪ್ರಮಾಣದಲ್ಲಿ ದೊರೆತ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಎಂದು.

## 3-30 P. M.

ಆ ರೀತಿ ಹೇಳುವುದಕ್ಕೆ ಅವರಿಗೆ ಯಾವ ರೀತಿಯ ನೈತಿಕ ಬಲವೂ ಇಲ್ಲವೆಂಬ ಮಾತನ್ನು ಆ ಕಡೆಯ ಸದ ಸ್ಯರು ಹೇಳಿದರು. ಅದನ್ನು ಅವರು ಯಾವ ಆಧಾರದ ಮೇಲೆ ಹೇಳಿದರು ಎಂದು ಅರ್ಥವಾಗುವುದಿಲ್ಲ. ಮುಖ್ಯ ಮಂತ್ರಿಗಳು ಅಧಿಕಾರ ವಹಿಸಿಕೊಂಡ ಮೇಲೆ ಈ ಸದನದಲ್ಲಿ ಹೆಚ್ಚಾಗಿ ಕುಳಿತಿಲ್ಲ; ಅಥವಾ ಅವರು ತಮ್ಮ ಕಛೇರಿಯಲ್ಲಿ ಕುಳಿತು ಕೆಲಸ ಮಾಡಿಲ್ಲ ರಾಜ್ಯದ ಎಲ್ಲೆಡೆಗಳಲ್ಲಿ ತಿರುಗಾಡಿದ್ದಾರೆ. ಎಲ್ಲಾ ಜಿಲ್ಲೆಗಳಿಗೆ, ತಾಲ್ಲೂಕುಗಳಿಗೆ ಭೇಟಿ ಕೊಟ್ಟಿದ್ದಾರೆ. ಅವರಿಗೆ ಭವ್ಯ ಸ್ವಾಗತ ದೊರೆತಿದೆ; ಆ ಭವ್ಯ ಸ್ವಾಗತವನ್ನು ಬಡಜನರು ಕೊಟ್ಟಿದ್ದಾರೆ. ಅವರ ಮಾತನ್ನು ಕೇಳಿದ್ದಾರೆ. ಯಾರೂ ಕೂಡ ಹಿಂದೆ ಮಾಡು ತ್ತಿದ್ದ ಹಾಗೆ ಲಾರಿಗಳಲ್ಲಿ ಜನರನ್ನು ತುಂಬಿಕೊಂಡು ಬಂದು ಹತ್ತತ್ತು ರೂಪಾಯಿಗಳನ್ನು ಕೊಟ್ಟು ಕಡೆಗೆ

ವಾಪಸ್ಸು ಕಳುಹಿಸಲಾರದೆ ಊಟ ತಿಂಡಿ ಇಲ್ಲದೆ ಹೋಗುತ್ತಿದ್ದರು. ಆ ಸಂದರ್ಭದಲ್ಲಿ, ಇವರು ಹೆಲಿಕ್ಯಾಪ್ಟರಿನಲ್ಲಿ ಕುಳಿತುಕೊಂಡು ಹೋಗುತ್ತಿದ್ದುದು ಈ ಪಕಕ್ಕೆ ಬರುತ್ತದೆ. ಆದರೆ ನಮ್ಮ ನಾಯಕರು ಆ ರೀತಿ ಎಂದೂ ಮಾಡಿಲ್ಲ. ಬಡಜನರ ಕಷ್ಟ ಸುಖ ಏನು ಎಂಬುದನ್ನು ತಿಳಿಯುವುದಕ್ಕೆ ಪ್ರತಿ ಜಿಲ್ಲೆಗೆ ಪ್ರತಿ ತಾಲ್ಲೂಕಿಗೆ ಪ್ರವಾಸ ಮಾಡಿ ಅವರ ಕಷ್ಟ ಸುಖಗಳನ್ನು ಕೇಳಿದ್ದಾರೆ. ಮೊನ್ನೆ ನಿಮ್ಮ ಕ್ಷೇತ್ರಕ್ಕೆ ನಮ್ಮ ಜಿಲ್ಲೆಗೆ ಎಲ್ಲ ಬಂದಿದ್ದರು. ಸಾಲು ಸಾಲಾಗಿ ಜನ ನಿಂತದ್ದನ್ನು ಕಂಡರು. ನಾನೂ ಕೂಡ ಕಾರಿನಲ್ಲಿ ಕುಳಿತಿದ್ದೆ. ಯಾರೂ ಗದ್ದಲ ಮಾಡಬೇಡಿ ಎಂದು ಹೇಳಿ ಅವರನ್ನು ಭೇಟಿಯಾಗಿ ಅವರ ಕಷ್ಟ ಸುಖಗಳನ್ನು ಕೇಳಿದ್ದು ನಮಗೆ ಮನವರಿಕೆಯಾಗಿದೆ. ಇಂಥ ಸಂದರ್ಭದಲ್ಲಿ ಕೂಡ ವಿರೋಧ ಪಕ್ಷದ ನಾಯಕರಾದ ಬಂಗಾರಪ್ಪನವರು, ಮೊಯಿಲಿಯವರು ಮತ್ತಿತರರು ಏತಕ್ಕೆ ದುರ್ಬಲ ವರ್ಗದವರು ನಮ್ಮನ್ನು ಕೃತಜ್ಞತೆಯಿಂದ ನೆನೆಯುತ್ತಾರೆಂದು ಹೇಳಿದರು ಎಂದು ಗೊತ್ತಾಗಲಿಲ್ಲ. ದುರ್ಬಲ ವರ್ಗದವರ ಬಗ್ಗೆ ಇನ್ನೊಂದು ವಿಚಾರವನ್ನು ಹೇಳಿದರು. ಅವರು ಇದನ್ನು ವಿಶ್ಲೇಷಣೆ ಮಾಡಿ ನೋಡಬೇಕು ಹುಡ್ಕೋ ಮನೆಗಳನ್ನು ಉದಾಹರಣೆಗೆ ತೆಗೆದುಕೊಂಡರೆ ನೀವು ಏನು ಮಾಡಿದ್ದೀರಿ ಎಂದರು ಬಂಗಾರಪ್ಪನವರು 1983ರ ಜನವರಿಯಿಂದ ಹಿಂದಕ್ಕೆ ನಮ್ಮ ಜೊತೆಯಲ್ಲಿ ಇದ್ದರು ಅವರೂ ಆ ಕಡೆ ಕೂರುತ್ತಿದ್ದರು ಮತ್ತು ನಾವೂ ಆ ಕಡೆ ಕೂರುತ್ತಿದ್ದೆವು. ಅವರಿಗೆ ಏತಕ್ಕೆ ಈ ಕಷ್ಟ ಬಂತು ಎಂಬುದು ಗೊತ್ತು. ಏತಕ್ಕೆ ಈ ಕಷ್ಟ ಬಂತು ಎಂಬುದು ಅವರಿಗೆ ಗೊತ್ತು. ಚುನಾವಣೆಗೆ ಮೊದಲು ಚುನಾವಣೆ ಬರುತ್ತದೆಂದು ತಿಳಿದುಕೊಂಡು ಆವತ್ತಿನ ದಿವಸ ಅಧಿಕಾರದಲ್ಲಿದ್ದ ಪಕ್ಷದವರು ಒಂದು ಲಕ್ಷದ ಎರಡು ಸಾವಿರ ಮನೆಗಳನ್ನು ಮಂಜೂರು ಮಾಡಿದರು. ಮತ್ತು ಅದನ್ನು ಎಲ್ಲಾ ತಾಲ್ಲೂಕುಗಳಿಗೂ ತಿಳಿಸಿದರು. ನಾವೂ ಕೂಡ ತಾಲ್ಲೂಕಿನ 20 ಅಂಶಗಳ ಮೀಟಿಂಗ್‌ನಲ್ಲಿ ಒಂದು ಸಾವಿರ ಮನೆಗಳನ್ನು ಕೊಡುತ್ತೇವೆಂದು ಹೇಳಿದೆವು. ಆದರೆ ಎಲ್ಲ ಮನೆಗಳನ್ನು ಅರ್ಧಂಬರ್ಧ ಮಾಡಿದರು ; ಅದನ್ನು ಪೂರ್ಣ ಮಾಡುವುದಕ್ಕೆ ಆ ಸರ್ಕಾರದವರು ನಮಗೆ ದುಡ್ಡು ಕೊಡಲಿಲ್ಲ. ಆಮೇಲೆ ಜನವರಿಯಲ್ಲಿ ಚುನಾವಣೆ ನಡೆಯಿತು, ನಮ್ಮ ಪಕ್ಷ ಅಧಿಕಾರಕ್ಕೆ ಬಂತು. ಈಗ ಒಂದು ಲಕ್ಷದ 2 ಸಾವಿರದ ಮನೆಗಳಿಗೆ ದುಡ್ಡು ಕೊಡುವವರು ಯಾರು ? ನಾವು ಈಗ ಆ ಎಲ್ಲ ಮನೆಗಳಿಗೂ ದುಡ್ಡು ಕೊಡಬೇಕಾಗಿ ಬಂತು. ಅದನ್ನು ಕೊಟ್ಟೂ ಕೂಡ ನಮ್ಮ ಸರ್ಕಾರದವರು 58 ಸಾವಿರ ಮನೆಗಳನ್ನು ಕಟ್ಟುವುದಕೋಸ್ಕರ 7 ಕೋಟಿ 86 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದು ಏನು ಕಡಿಮೆಯೇ ? ಇದನ್ನೆಲ್ಲ ಕೂಲಂಕುಷವಾಗಿ ನೋಡದೆ ಜನತಾ ಮನೆ ಕೊಡಲಿಲ್ಲ, ಬಡವರ ಪರ ಇಲ್ಲ, ದಲಿತರು ಇದಕ್ಕೆ ವಿರೋಧವಾಗಿದ್ದಾರೆ ; ಮುಂದೆ ಚುನಾವಣೆಗೆ ಹೋದಾಗ ಅವರೆಲ್ಲ ಸೀರಿ ಪೌಡರ್ ಹಾಕುತ್ತಾರೆಂಬ ಮಾತನ್ನು ಹೇಳುವುದಾದರೆ ಇದು ಸಮಂಜಸವಲ್ಲ. ಇದನ್ನು ಬಂಗಾರಪ್ಪನವರು ತಿಳಿದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

1982-83ರಲ್ಲಿ ಬಹಳ ಬರಗಾಲ ಬಂತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ಸುಮಾರು 16 ಜಿಲ್ಲೆಗಳಲ್ಲಿ ಕ್ಷಾಮ ಪರಿಸ್ಥಿತಿ ತಲೆದೋರಿತು. ಯಾವ ಬಾವಿಯಲ್ಲೂ ಕುಡಿಯುವುದಕ್ಕೆ ನೀರು ಸಿಗುತ್ತಿರಲಿಲ್ಲ, ಹಾಹಾಕಾರ ಪ್ರಾರಂಭವಾಯಿತು. ಇದನ್ನು ನಮ್ಮ ಸರ್ಕಾರದವರು ಮನಗಂಡು 10-15 ವರ್ಷಗಳಿಂದ ಮಾಡದೆ ಇರತಕ್ಕ ಕೆಲಸಗಳನ್ನು ತೆಗೆದುಕೊಂಡು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದಾರೆಂದರೆ ತಪ್ಪಾಗಲಾರದು. ಒಡೆಯರಾಜ್ ಅವರಿಗೆ ಈ ವಿಷಯವೆಲ್ಲ ಗೊತ್ತು. ಆದರೆ ಅವರು ವಿರೋಧ ಮಾಡಬೇಕೆಂದು ಭಾಷಣ ಮಾಡಿದರೆ ಆ ಮಾತು ಬೇರೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾನು ಇನ್ನೂ ಭಾಷಣ ಮಾಡಿಯೇ ಇಲ್ಲ.

ಶ್ರೀ ಕೆ. ಬಿ. ಮಲ್ಲಪ್ಪ.—ನೀವು ನಕ್ಕಿದ್ದಕೋಸ್ಕರ ಹೇಳಿದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಏತಕ್ಕೆ ನಕ್ಕೆ ಎಂದರೆ, 'ನಮ್ಮ ಸರ್ಕಾರ ಬಂದ ಮೇಲೆ 16 ಜಿಲ್ಲೆಗಳಿಗೆ ಕ್ಷಾಮ ಬಂತು' ಅಂದ್ರಲ್ಲ ಅದಕ್ಕೆ ನೀವು ಬಂದ ತಕ್ಷಣ ಕ್ಷಾಮ ಬಂತಲ್ಲ ಎಂದು ನಗೆ ಬಂತು.

ಶ್ರೀ ಕೆ. ಬಿ. ಮಲ್ಲಪ್ಪ.—ಅದು ನಿಮ್ಮ ಬಳುವಳಿ. ನೀವು ಕೊಟ್ಟ ಪ್ರಸಾದ ಅದು. ನೀವು ಈ ಸರ್ಕಾರಕ್ಕೆ ಏನೇನು ಕೊಟ್ಟಿದ್ದೀರಿ ಎಂದರೆ ಸ್ಟೈಪಂಡರಿ ಪದವೀಧರರ ಬಗ್ಗೆ ನೀವೇ ತೀರ್ಮಾನ ಮಾಡಿ ಎಂದು ಕೊಟ್ಟಿದ್ದೀರಿ. ಅವರಿಗೆ ನಾವು ಈಗ 350 ರೂಪಾಯಿಗಳನ್ನು ಕೊಡಬೇಕಾಯಿತು. ರೈತರಿಗೆ ಬಳುವಳಿ ಮಾಡಿ ಎಂದು ಹೇಳಿದಿರಿ ನಾವು ಅವರಿಗೆಲ್ಲ ಸಮಾಧಾನ ಮಾಡಬೇಕಾಯಿತು. ನೀವು ಬಳುವಳಿಯಾಗಿ ಎಲ್ಲವನ್ನು ನಮ್ಮ ತಲೆ ಮೇಲೆ ಹೊರಿಸಿ ಹೋದಿರಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ಟೈಪೆಂಡರಿ ಸ್ಕೀಮನ್ನು ಬೇಡದಿದ್ದರೆ ತೆಗೆಯಿರಿ. ಸರ್ಕಾರ ಅಂದ ಮೇಲೆ ಎಲ್ಲವನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿರಬೇಕು.

ಶ್ರೀ ಕೆ. ಬಿ. ಮಲ್ಲಪ್ಪ.—ನಾವು ಹೊಸದಾಗಿ ಕೆಲಸ ಮಾಡುತ್ತಿದ್ದೇವೆ. ನೀವು 36 ವರ್ಷಗಳ ಕಾಲ-

ಸರ್ಕಾರ ನಡೆಸಿದ್ದೀರಿ.

ಶ್ರೀ ಗೋವಿಂದ ಪಿ. ಒಡೆಯರಾಜ್ ಮುಖ್ಯಮಂತ್ರಿಗಳು 14–15 ವರ್ಷಗಳ ಕಾಲ ಕಾಂಗ್ರೆಸ್ಸಿನಲ್ಲಿ ಇದ್ದರು. ಅವರೂ ಅಷ್ಟೇ ಜವಾಬ್ದಾರರು. 36 ವರ್ಷಗಳಲ್ಲಿ ಆಡಳಿತ ನಡೆಸಿದ ಅನೇಕರು ನಿಮ್ಮ ಕಡೆ ಇದ್ದಾರೆ.

ಶ್ರೀ ಕೆ. ಬಿ. ಮಲ್ಲಪ್ಪ.---1969ರಿಂದೀಚೆಗಿನ ಕಾಂಗ್ರೆಸ ಬೇರೆ

ಶ್ರೀ ಗೋವಿಂಡ ಪಿ ಒಡೆಯರಾಜ್.---ನಾನು ಎಷ್ಟೇ ವರ್ಷ ಇದ್ದರೂ ಅಷ್ಟೇ ಜವಾಬ್ದಾರಿ ಇದೆ. ಆದರೆ ನೀವು ಇಲ್ಲವೆಂದು ಹೇಳುತ್ತೀರಲ್ಲ, ಅದಕ್ಕೆ ಆಶ್ಚರ್ಯವಾಗುತ್ತದೆ.

ಶ್ರೀ ಕೆ ಬಿ. ಮಲ್ಲಪ್ಪ.---ನಮ್ಮ ನಾಯಕರು ಅಧಿಕಾರಕ್ಕೆ ಬಂದ ಮೇಲೆ ಸಾಧ್ಯವಾದ ಮಟ್ಟಿಗೆ ಬಡವರ ಬಗ್ಗೆ, ದಲಿತರ ಬಗ್ಗೆ ಮತ್ತು ಹಿಂದುಳಿದ ವರ್ಗದವರ ಬಗ್ಗೆ ಬಹಳ ಕಳಕಳಿಯಿಂದ ಕೆಲಸ ಮಾಡತಕ್ಕದು ಎಲ್ಲರಿಗೂ ಗೊತ್ತಿದೆ. ಅದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ ಯಾವುದೇ ಸಂದರ್ಭದಲ್ಲಿ ಕಳೆದ 35 ವರ್ಷಗಳಿಂದ ಆಗದೆ ಇರತಕ್ಕ ಯೋಜನೆಗಳನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ. ಹಳ್ಳಿಯ ಹೆದ್ದಾರಿ ಯೋಜನೆ ಬಹಳ ಮುಖ್ಯವಾದುದು. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಸಂಪರ್ಕ ಇಲ್ಲದ ಹಳ್ಳಿಗಳು ಎಷ್ಟಿವೆ ಎಂಬುದನ್ನು ನೋಡಬಹುದು. ಹಿಂದೆ ಇದ್ದ ಸರ್ಕಾರ ಅದರ ಬಗ್ಗೆ ಯೋಚನೆ ಮಾಡಿತ್ತೆ ? ನಾವೂ ಅಷ್ಟು ದುಡ್ಡು ಕೊಟ್ಟಿದ್ದೇವು ಎಂದು ಭಾಷಣ ಬೇಕಾದರೆ ಮಾಡಬಹುದು ಆದರೆ ಕಾರ್ಯ ಏನು ನಡೆದಿದೆ ? ಹಳ್ಳಿಗಾಡಿನ ಬಗ್ಗೆ ಏನು ಯೋಚನೆ ಮಾಡಿದ್ದರು ? ಹಳ್ಳಿಗಾಡಿನ ಜನರ ಬಗ್ಗೆ ಏನು ಯೋಜನೆ ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗುವುದಕ್ಕೆ ರಸ್ತೆ ಇಲ್ಲದೇ ಇರುವ ಕಡೆ ರಸ್ತೆ ಮಾಡಿಸುವುದಕ್ಕೆ ಎರಡು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿರುವುದು ಶ್ಲಾಘನೀಯವಾದುದಲ್ಲವೆ ? ಗಂಗಾಕಲ್ಯಾಣದ ಬಗ್ಗೆ ಮಾನ್ಯ ವಿರೋಧ ಪಕ್ಷದ ಸದಸ್ಯರು ಮಾತನಾಡುತ್ತಾ ಗಂಗೆ ಎಲ್ಲಿ ಕಲ್ಯಾಣ ಎಲ್ಲಿ ಎಂದು ಕೇಳಿದರು ಬಹಳ ಹಿಂದುಳಿದಿರತಕ್ಕ ಜನರು, ಹರಿಜನಗಿರಿಜನರು ವಾಸ ಮಾಡತಕ್ಕ ಹಳ್ಳಿಗಳಲ್ಲಿ ಸಾಮಾಜಿಕ ಬಾವಿ ತೆಗೆದು ನೀರನ್ನು ಒದಗಿಸುವುದು, ಮತ್ತು ಜಮೀನಿನಲ್ಲಿ ಒಳ್ಳೆಯ ಬೆಳೆ ಬರುವಂತೆ ಮಾಡುವುದು, ಬಡತನದ ರೇಖೆಯಿಂದ ಮೇಲೆತ್ತುವುದಕ್ಕೆ ಪ್ರಯತ್ನ ಮಾಡುವುದು ತಪ್ಪೆ ?

ಶ್ರೀ ಪಿ. ಗೋವಿಂದ ಪಿ. ಒಡೆಯರಾಜ್.—ಅಂತ್ಯೋದಯ ಯೋಜನೆಗೆ ಎಷ್ಟು ಹಣ ಇಟ್ಟಿದ್ದಾರೆ?

ಶ್ರೀ ಕೆ ಬಿ ಮಲ್ಲಪ್ಪ.—ನಿಮಗೆ ಅವಸರ ಏತಕ್ಕೆ ? ಹೇಳುತ್ತೇನೆ. ಸೇತು ಬಂಧನ ಎಂದರೆ ಏನತಿ ಎಂದು ಕೇಳಿದರು ಒಂದು ಹಳ್ಳ ಹರಿಯುತ್ತಿದ್ದು ಆ ಕಡೆಯಿಂದ ಈ ಕಡೆಗೆ ಬರುವುದಕ್ಕೆ ಸಾಧ್ಯವಿಲ್ಲದೇ ಇದ್ದಾಗ ಅಲ್ಲಿ ಸಂಪರ್ಕ ವ್ಯವಸ್ಥೆ ಮಾಡುವುದಕ್ಕೆ ............

ಶ್ರೀ ಗೋವಿಂದ ಪಿ. ಒಡೆಯರಾಜ್.—ತಾವು ಒಂದು ನಿಮಿಷ ಈಲ್ ಆದರೆ ತಮಗೆ ಸಹಾಯಕವಾಗುವಂತೆ ಒಂದು ಮಾತನ್ನು ಹೇಳುತ್ತೇನೆ. ಹಳ್ಳಿ ಹೆದ್ದಾರಿ ಮತ್ತು ಸೇತು ಬಂಧನದ ಬಗ್ಗೆ ಹೇಳುತ್ತಿದ್ದೀರಿ. ಇಂಗ್ಲೀಷಿನಲ್ಲಿ ಅದಕ್ಕೆ ಏನು ಹೆಸರಿದೆ ಎಂಬುದು ಗೊತ್ತೆ ? ಇಂಗ್ಲೀಷಿನಲ್ಲಿ ಅದಕ್ಕೆ cross drainage works ಎಂದು ಹೇಳುತ್ತಾರೆ. ಸಿ ಡಿ. ವರ್ಕ್ಸ್ ಎಂದು ಹಿಂದೆಯೂ ಇತ್ತು. ಅದೇ ಈಗ ಸೇತು ಬಂಧನ ಆಗಿದೆ. ಹಳ್ಳಿ ಹೆದ್ದಾರಿ ಎಂದು ಹೇಳುತ್ತೀರಿ. ಹಳ್ಳಿಯಲ್ಲಿ ಹೆದ್ದಾರಿ ಇರುವುದಕ್ಕೆ ಸಾಧ್ಯವೆ ? ಲೋಕೋಪಯೋಗಿ ಇಲಾಖೆ ಬೇಡಿಕೆ ಬಂದಾಗ ಬೇಕಾದರೆ ಈ ಬಗ್ಗೆ ಮಾತನಾಡೋಣ.

ಶ್ರೀ ಕೆ. ಬಿ ಮಲ್ಲಪ್ಪ --ಹಿಂದೆ culverts on non-PWD Roads ಎಂದು ಇತ್ತು. ಈ ಸರ್ಕಾರದವರು ಅದನ್ನು ತೆಗೆದು ಹಾಕಿದರು ಮೊದಲು ರೋಡ್‌ಗೆ ಕಲ್ವರ್ಟ್ ಮಾಡಬೇಕಾದರೆ ಪಿ ಡಬ್ಲ್ಯು ಡಿ.ಗೆ ಸೇರಿಸಿ ನಂತರ ಮಾಡಬೇಕಾಗಿತ್ತು. ಅದಕ್ಕೆ ಸರ್ಕಾರಕ್ಕೆ ಬಂದು ಸರ್ಕಾರದ ಆಜ್ಞೆಯಾಗಬೇಕಾಗಿತ್ತು. ಈಗ ಆ ರೀತಿ ಇಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.---ಈಗ ಲೋಕೋಪಯೋಗಿ ಇಲಾಖೆಯವರು ಮಾಡುವುದಿಲ್ಲವೆ ?

ಶ್ರೀ ಕೆ ಬಿ ಮಲ್ಲಪ್ಪ.---ಮಾಡುತ್ತಾರೆ. ನಾನು ಹೇಳುತ್ತೇನೆ, ಕೇಳಿ. ಆ ತೊಂದರೆ ತಪ್ಪಿಸುವುದಕ್ಕೆ ಸರ್ಕಾರದವರು ಏನು ಮಾಡಿದ್ದಾರೆ ಎಂಬುದನ್ನು ಹೇಳುತ್ತೇನೆ ಯಾವ ರಸ್ತೆಯಲ್ಲಿ ಗಾಡಿ ಮುಂತಾದ ವಾಹನಗಳು ಓಡಾಡುತ್ತವೋ ಅಂಥ ಕಡೆ ಹಳ್ಳ ಇದ್ದರೆ ಅಲ್ಲಿ ಸಂಪರ್ಕ ಏರ್ಪಡಿಸುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಸೇತು ಬಂಧನ ಮಾಡಿದ್ದಾರೆ.

ಶ್ರೀ ಎಂ. ಎಸ್. ಪಾಟೀಲ್.---ಸೇತು ಬಂಧನವೋ ಯಾವ ಬಂಧನವೋ ಗೊತ್ತಿಲ್ಲ ಮಾನ್ಯ

ಮುತ್ತು ಮಂತ್ರಿಗಳ ಹೆಸರು ರಾಮಕೃಷ್ಣ ಹೆಗಡೆ. ತೆನಾಲಿ ರಾಮಕೃಷ್ಣ ಹಿಂದೆ ತಿಲಾಕಾಷ್ಟ ಮಹಿಷ ಬಂಧನ್ ಎಂದು ಮಾಡಿದ. ಆ ತರಹ ಈ ರಾಮಕೃಷ್ಣ ಅವರು ಸೇತುಬಂಧನ.

ಶ್ರೀ ಕೆ. ಬಿ. ಮಲ್ಲಪ್ಪ.—ಇದರ ಬಗ್ಗೆ ಅವರು ಯಾವ ರೀತಿ ಯೋಚನೆ ಮಾಡುತ್ತಾರೋ ಆ ರೀತಿ ಅರ್ಥವಾಗುತ್ತದೆ. ತೆನಾಲಿ ರಾಮಕೃಷ್ಣನ ತರಹವೋ ಯಾರ ತರಹವೋ ಅದು ನನಗೆ ಗೊತ್ತಿಲ್ಲ ಅದರ ಬಗ್ಗೆ ನಾನು ಹೇಳುವುದಿಲ್ಲ. ಎನ್. ಆರ್. ಇ. ಪಿ ಸ್ಕೀಮನ್ನೇ ಅಂತ್ಯೋದಯ ಕಾರ್ಯಕ್ರಮ ಎಂದು ಹೇಳುತ್ತಾರೆ ಎಂದು ಅವರು ಹೇಳಿದರು. ಹಾಗಾದರೆ ಅಂತ್ಯೋದಯಕ್ಕೂ ಎನ್. ಆರ್. ಇ. ಪಿ. ಗೂ ವ್ಯತ್ಯಾಸ ಇಲ್ಲವೆ? ಎನ್. ಆರ್. ಇ. ಪಿ. ಯಲ್ಲಿ ಸಾಮೂಹಿಕವಾಗಿ ಕೆಲಸ ನಡೆಯುತ್ತದೆ ಇದರಲ್ಲಿ ಹಳ್ಳಿಯಲ್ಲಿರುವ ಬಡವರನ್ನು ಗುರುತಿಸಿ ಅವರಿಗೆ ಸವಲತ್ತುಗಳನ್ನು ಒದಗಿಸಿ ಬಡತನ ರೇಖೆಯಿಂದ ಮೇಲೆತ್ತುವುದಕ್ಕೆ ಅವಕಾಶ ಮಾಡಿದ್ದಾರೆ. ಇದು ಒಳ್ಳೆಯ ಯೋಜನೆ ಅಲ್ಲವೆ ?

ಶ್ರೀ ಕಾಳಮರಿಗೌಡ.—ಇದಕ್ಕೆ ಡಿ. ಆರ್. ಡಿ. ಎಸ್. ಇಲ್ಲವೆ ? ಐ. ಆರ್. ಡಿ. ಪಿ. ಇಲ್ಲವೆ ?

ಶ್ರೀ ಕೆ. ಬಿ. ಮಲ್ಲಪ್ಪ.—ಡಿ. ಆರ್. ಡಿ. ಎಸ್. ನಲ್ಲಿ ಕೊಟ್ಟಿದ್ದ ಎಮ್ಮೆ, ಕುರಿ ಯಾವ ರೀತಿ ಇತ್ತು ಎಂಬುದನ್ನು ನೋಡಿದ್ದೇವೆ.

ಶ್ರೀ ಎಚ್. ಡಿ. ಚೌಡಯ್ಯ.—ಅಂತ್ಯೋದಯದಲ್ಲಿ 45-46 ತಾಲ್ಲೂಕುಗಳಲ್ಲಿ ಕೆಲಸ ಮಾಡ ಬೇಕೆಂದು ಆಯ್ಕೆ ಮಾಡಿದ್ದಾರೆ. 1983-84ನೇ ಸಾಲಿನಲ್ಲಿ 11 ತಿಂಗಳು ಮುಗಿಯುತ್ತಾ ಬಂದಿದೆ. ನಮ್ಮ ಜಿಲ್ಲೆಯಲ್ಲಿ ಎರಡು ತಾಲ್ಲೂಕುಗಳು ಆಯ್ಕೆಯಾಗಿವೆ. 11 ತಿಂಗಳುಗಳಲ್ಲಿ ಏನು ಪ್ರೋಗ್ರೆಸ್ ಆಗಿದೆ ಎಂಬುದನ್ನು ಹೇಳಿ. ಎಷ್ಟು ಹಣ ಖರ್ಚಾಗಿದೆ. ಫಿಸಿಕಲಿ ಎಷ್ಟಾಗಿದೆ ? ಫೈನಾನ್ಷಿಯಲಿ ಎಷ್ಟಾಗಿದೆ ?.

ಶ್ರೀ ಕೆ. ಮಲ್ಲಪ್ಪ.—ಫಿಸಿಕಲಿ, ಫೈನಾನ್ಷಿಯಲಿ ಏನು ಮಾಡಿದ್ದಾರೆಂಬುದು ಪ್ರಶ್ನೆಯಲ್ಲ. ನಾನು ಹೇಳುವ ಮಾತನ್ನು ಸ್ವಲ್ಪ ಕೇಳಿ.

ಶ್ರೀ ಎಚ್. ಚೌಡಯ್ಯ.—ದೊಡ್ಡ ಬೋರೆಗೌಡರಿಗೆ ಗೊತ್ತು. ಡಿ. ಡಿ. ಸಿ. ಯಲ್ಲಿ ಹೋದ ವರ್ಷ ಎರಡು ತಾಲ್ಲೂಕುಗಳನ್ನು ಈ ಯೋಜನೆಗೆ ಆಯ್ಕೆ ಮಾಡಿದ್ದಾರೆ. ಏನು ಪ್ರಯೋಜನ ಆಗಿದೆ.

ಶ್ರೀ ದೊಡ್ಡ ಬೋರೇಗೌಡ.—ನಾನು ಸವಿಸ್ತಾರವಾಗಿ ಹೇಳುತ್ತೇನೆ, ನನಗೆ ಅವಕಾಶ ಬಂದಾಗ.

ಶ್ರೀ ಕೆ. ಬಿ. ಮಲ್ಲಪ್ಪ.—ನಾನು ಹೇಳುತ್ತೇನೆ ಕೇಳಿ.

ಉಪಾಧ್ಯಕ್ಷರು.—ಅಂತ್ಯೋದಯ ಸ್ಕೀಮಿಗೆ ಹಳ್ಳಿಯಲ್ಲಿ ಐದೈದು ಸಂಸಾರಗಳನ್ನು ಕಂಡುಹಿಡಿಯ ಬೇಕಾದರೆ ಕಾಲ ಬೇಕಾಗುತ್ತದೆ ಎಂದು ಹೇಳಿ.

ಶ್ರೀ ಎಚ್. ಡಿ. ಚೌಡಯ್ಯ.—ಮಾನ್ಯ ಮಲ್ಲಪ್ಪನವರು ಆಡಳಿತ ಪಕ್ಷದಲ್ಲಿದ್ದಾರೆ. ಸರ್ಕಾರವನ್ನು ಡಿಫೆಂಡ್ ಮಾಡಿಕೊಳ್ಳುವುದಾದರೆ ದಯವಿಟ್ಟು ಅಂಕಿ ಅಂಶದ ಸಮೇತ ಕನ್‌ವಿನ್ಸ್ ಮಾಡಿ. ಇಲ್ಲ ದಿದ್ದರೆ ನಮ್ಮ ಹಾಗೆ ಸಾಮಾನ್ಯ ಸದಸ್ಯರಾಗಿ ಸಲಹೆಗಳನ್ನು ಕೊಡಿ. ಅಂತ್ಯೋದಯ, ಸೇತುಬಂಧನ, ಇವುಗಳ ಬಗ್ಗೆ ಅಂಕಿಅಂಶಗಳ ಸಮೇತ ಹೇಳುವಹಾಗಿದ್ದರೆ ಹೇಳಿ. 24 ಗಂಟೆಗ ಜನಗಳ ಮಧ್ಯೆ ಇರುವ ವರು ನಾವು. ನಮಗೆ ಗೊತ್ತಿದೆ ಏನೇನು ನಡೆಯುತ್ತಿದೆ ಎಂಬುದು.

ಶ್ರೀ ಕೆ. ಬಿ. ಮಲ್ಲಪ್ಪ.—ಚೌಡಯ್ಯನವರೇ, ನಾನು ಒಂದು ವಿಚಾರ ಹೇಳುತ್ತೇನೆ ಕೇಳಿ.

ಶ್ರೀ ಎಚ್. ಡಿ. ಚೌಡಯ್ಯ.—11 ತಿಂಗಳಲ್ಲಿ ಏನು ಸಾಧನೆಯಾಗಿದೆ ಹೇಳಿ.

ಶ್ರೀ ಕೆ. ಬಿ. ಮಲ್ಲಪ್ಪ—ಸೇತುಬಂಧನ ಕಾರ್ಯಕ್ರಮದಲ್ಲಿ.........

ಶ್ರೀ ಎಚ್. ಡಿ. ಚೌಡಯ್ಯ.—ಅಂತ್ಯೋದಯದಲ್ಲಿ ತೀರ ಕಡುಬಡವರನ್ನು ಗುರುತಿಸಿ ಅವರಿಗೆ ಸಹಾಯ ಮಾಡಬೇಕೆಂದಿದೆ. ಈ ಕೆಲಸದಲ್ಲಿ 11 ತಿಂಗಳಲ್ಲಿ ಎಷ್ಟು ಪ್ರಗತಿಯಾಗಿದೆ ಎಂಬುದನ್ನು ಹೇಳಿ. ಬರೀ ಕಾಗದದಲ್ಲಿ ಮಾತ್ರ ಇದೆ. ಕೆಲಸ ಆಗಿಲ್ಲ. ಭಾಷಣ ಮಾತ್ರ ಮಾಡಬೇಕು.

ಶ್ರೀ ಕೆ. ಬಿ. ಮಲ್ಲಪ್ಪ.—ಭಾಷಣ ಮಾಡುವ ಪ್ರಶ್ನೆಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅಂತ್ಯೋದಯ ಎಂದರೆ, ಅಂತ್ಯ ಈಗ ತಾನೇ ಉದಯ ಆಗಿದೆ ಎಂದು ಅರ್ಥ. ಆಮೇಲೆ ನೋಡಬೇಕು, ಏನಾಗುತ್ತದೆಂದು.

ಉಪಾಧ್ಯಕ್ಷರು.—ಮಲ್ಲಪ್ಪನವರೇ ತಾವು ಮಾತನಾಡಿ.

ಶ್ರೀ ಕೆ. ಬಿ. ಮಲ್ಲಪ್ಪ.—ಅಂತ್ಯೋದಯ ಎಂದ ತಕ್ಷಣ ಇವರೆಲ್ಲಾ ಏಕೆ ಇಷ್ಟೊಂದು ಮಾತನಾಡು ತ್ತಾರೆ ? ಏಕೆ ಅದನ್ನು ತರಬೇಡವೇ ? ನಾವು ಬಡವರನ್ನು ಗುರುತಿಸಬಾರದೇ ? ಇವರನ್ನು ನಾವು ಗುರುತಿಸು ವುದು ಬೇಡವೇ ?

ಶ್ರೀ ಎಸ್. ಡಿ. ಚೌಡಯ್ಯ.--ಮಾನ್ಯ ದೊಡ್ಡಬೋರೇಗೌಡರಿಗೆ ವಿಷಯ ಗೊತ್ತಿದೆ. ಕಳೆದ ಚುನಾವಣೆಯಲ್ಲಿ ಮತ ಕೊಟ್ಟವರೆಲ್ಲಾ ಬರೀ ಬಡವರೇ. ಮಾನ್ಯ ದೊಡ್ಡಬೋರೇಗೌಡರಿಗೆ ಎಲ್ಲ ದೊಡ್ಡ ದೊಡ್ಡ ರೈತರೇ ಓಟು ಮಾಡಿದ್ದಾರೆ.

ಶ್ರೀ ಕೆ. ಬಿ. ಮಲ್ಲಪ್ಪ.--ಅವರಿಗೂ ಬಡವರು ಓಟು ಮಾಡಿದ್ದಾರೆ. ನಿಮಗೂ ಸಹಾ ದೊಡ್ಡ ರೈತರು ಓಟು ಮಾಡಿದ್ದಾರೆ. ನಿಮ್ಮಿಬ್ಬರಿಗೂ ಬಡವರು ಹಾಗೂ ದೊಡ್ಡ ರೈತರು ಇಬ್ಬರೂ ಓಟು ಮಾಡಿರುವುದರಿಂದ ನೀವುಗಳು ಆರಿಸಿ ಬಂದಿದ್ದೀರಿ. ಅಂತ್ಯೋದಯ ಸ್ಕೀಮನ್ನು ಯಾರೇ ತಂದಿದ್ದರೂ ಅದನ್ನು ನಾವು ಸ್ವಾಗತ ಮಾಡಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.--ಅಂತ್ಯೋದಯ ಎಂದರೆ ಕಾಂಗ್ರೆಸ್ (ಐ) ಪಕ್ಷದವರಿಗೆ ಅಲರ್ಜಿ.

ಶ್ರೀ ಕೆ. ಎನ್. ಕಾಳಮರಿಗೌಡ.--ಅಲರ್ಜಿ ಏಕೆ ಸ್ವಾಮಿ? ನಮ್ಮ ಜಿಲ್ಲೆಯಲ್ಲಿ ಏನೂ ಮಾಡಿಲ್ಲ. ಹಾಸನ ಜಿಲ್ಲೆಯಲ್ಲಿ ಏನು ಮಾಡಿದ್ದಾರೆಂದು ಹೇಳಲಿ,

ಉಪಾಧ್ಯಕ್ಷರು.--ನಿಮ್ಮ ಪ್ರಶ್ನೆಗಳಿಗೆಲ್ಲಾ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಅವರು ಉತ್ತರ ಕೊಡಲು ಆಗುವುದಿಲ್ಲ.

ಶ್ರೀ ಕೆ. ಬಿ. ಕಾಳಮರಿಗೌಡ.--ಮತ್ತೆ ಅಂತ್ಯೋದಯ ಎಂದು ಏಕೆ ತಮಟೆ ಹೊಡೆಯುತ್ತಿದ್ದಾರೆ?

ಶ್ರೀ ಕೆ. ಬಿ. ಮಲ್ಲಪ್ಪ.--ಆ ಬಗ್ಗೆ ತಮಗೆ ಏಕೆ ಅಲರ್ಜಿ?

ಶ್ರೀ ಎಚ್. ಡಿ. ಚೌಡಯ್ಯ.--ಅಧ್ಯಕ್ಷರೇ ಇವರು ಬರೀ ಕೈಯ್ಯಲ್ಲಿ ಮೊಳ ಹಾಕುತ್ತಿದ್ದಾರೆ. ಇದರಲ್ಲಿ ಏನೂ ಇಲ್ಲ ಸ್ವಾಮಿ.

ಶ್ರೀ ಕೆ. ಬಿ. ಮಲ್ಲಪ್ಪ.--ಅಂತ್ಯೋದಯದ ಸ್ಕೀಮ್ ಬಗ್ಗೆ ನಾವು ಹೇಳಲೇ ಬಾರದೇ? ನಾವು ಬಡವರನ್ನು ಗುರುತಿಸುವುದು ಬೇಡವೇ? ಬೇಡ ಎಂದು ಹೇಳಿ ನೀವು. ಸ್ವಲ್ಪ ನೀವು ಸುಮ್ಮನೆ ಇರಿ ಸ್ವಾಮಿ.

ಶ್ರೀ ಕೆ. ಎನ್. ಕಾಳಮರಿಗೌಡ.--ಬರೀ ಸುಳ್ಳು ಸುಳ್ಳು ಏಕೆ ಹೇಳುತ್ತಿದ್ದಾರೆ?

ಶ್ರೀ ಕೆ. ಬಿ. ಮಲ್ಲಪ್ಪ.--ನೀವು ಸುಳ್ಳು ಎಂದು ಹೇಳಬೇಡಿ. ಈ ರೀತಿಯ ಒಳ್ಳೆ ಒಳ್ಳೆಯ ಕಾರ್ಯಕ್ರಮಗಳನ್ನು ನಾವು ಮಾಡಿದಾಗ ಮುಂದಿನ ಚುನಾವಣೆಯಲ್ಲಿ ರೈತರು ಅವರ ಕೈ ಬಿಡುತ್ತಾರೆಂಬ ಹೆದರಿಕೆ ಆ ಬಗ್ಗೆ ನಾವು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಎಚ್. ಡಿ. ಚೌಡಯ್ಯ.--ಅಂತ್ಯೋದಯ ಯೋಜನೆಯನ್ನು 1983-84ರಲ್ಲಿ ಪ್ರಾರಂಭ ಮಾಡಿದಾಗ ಕೆಲವು ತಾಲ್ಲೂಕುಗಳನ್ನು ಆಯ್ಕೆ ಮಾಡಿದ್ದಾರೆ. ಆದರೆ 11 ತಿಂಗಳಾಗಿದ್ದರೂ ಸಹ ಈ ಬಗ್ಗೆ ಒಂದು ನಯಾ ಪೈಸೆಯಷ್ಟು ಕೆಲಸ ಆಗಿಲ್ಲ. ಪ್ರೋಗ್ರೆಸ್ ಆಗಿಲ್ಲ. ಇದು ರಾಜ್ಯದ ಜನತೆಗೆ ಗೊತ್ತಾಗಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ. ಬಿ. ಮಲ್ಲಪ್ಪ.--ಆಯಾ ಕ್ಷೇತ್ರದಲ್ಲಿ ಎಷ್ಟೆಷ್ಟು ಕೆಲಸ ಆಗಿದೆ ಎನ್ನುವ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಾಗ ಹೇಳುತ್ತಾರೆ. ಆ ಪ್ರಶ್ನೆ ಬಿಡಿ. ಅಂತ್ಯೋದಯ ಕಾರ್ಯಕ್ರಮದನ್ನು ನಮ್ಮ ಜಿಲ್ಲೆಯ ಹಾಸನ ಮತ್ತು ಬೇಲೂರು ತಾಲ್ಲೂಕಿನಲ್ಲಿ ಹಾಕಿಕೊಂಡಿದ್ದಾರೆ. ಆ ಯೋಜನೆಯಲ್ಲಿ ನನ್ನ ತಾಲ್ಲೂಕು ಸೇರಿಲ್ಲ. ಮುಂದೆ ನನ್ನ ತಾಲ್ಲೂಕಿಗೂ ಈ ಯೋಜನೆ ಬರುತ್ತದೆ. ಆ ವಿಷಯ ಬಿಡಿ. ಇನ್ನು ರೈತರಿಗೆ ನೀಡಿರುವ ಪರಿಹಾರದ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗುತ್ತದೆ. ಹತ್ತಾರು ವರ್ಷಗಳ ಹಿಂದೆ ರೈತರು 1 ಸಾವಿರ ರೂಪಾಯಿ ಸಾಲ ತೆಗೆದುಕೊಂಡಿದ್ದರೆ ಅದಕ್ಕೆ ಬಡ್ಡಿ 4 ರಿಂದ 5 ಸಾವಿರ ರೂಪಾಯಿ ವರೆಗೆ ಬೆಳೆದಿತ್ತು. ಅಸಲನ್ನು ಕಟ್ಟಿದರೆ ಬಡ್ಡಿ ಮನ್ನಾ ಮಾಡುತ್ತೇವೆ ಎಂದು ಹೇಳಿದಾಗ ಸುಮಾರು 100 ಕೋಟಿ ರೂಪಾಯಿಗಳಷ್ಟು ಹಣ ವಸೂಲಿ ಆಗಿದೆ. ಇದು ಒಳ್ಳೆಯದು ಅಲ್ಲ ಎಂದು ಹೇಳುತ್ತೀರಾ? ರೈತರಿಗೆ ಏನೂ ಮಾಡಿಲ್ಲ ಎನ್ನುತ್ತೀರಲ್ಲಾ? ಏನೂ ಮಾಡಿಲ್ಲವ?

ಶ್ರೀ ಕೆ. ಎಚ್. ರಂಗನಾಥ್.--ಮಾಡಿದ್ದೇವೆಂದು ಸುಮ್ಮನೆ ಭಾಷಣ ಮಾಡಿ ಸ್ವಾಮಿ. ಯಾರು ಡಿಸ್‌ಪ್ಯೂಟ್ ಮಾಡಿದ್ದಾರೆ?

ಶ್ರೀ ಕೆ. ಬಿ. ಮಲ್ಲಪ್ಪ.--ತಕಾವಿ ಸಾಲದಲ್ಲಿ ಸುಮಾರು 70 ಕೋಟಿ ರೂಪಾಯಿಗಳಷ್ಟು ರಿಯಾಯಿತಿ ಕೊಡಲಾಗಿದೆ.

ಶ್ರೀ ಕೆ. ಎನ್. ಕಾಳಮರಿಗೌಡ.--ಸರಿಯಾಗಿ ಹೇಳಿ ಸ್ವಾಮಿ. ಏನು 70 ಕೋಟಿ ರೂಪಾಯಿಗಳಷ್ಟು ರಿಯಾಯಿತಿಗಳನ್ನು ತಕಾವಿ ಸಾಲದಲ್ಲಿ ಕೊಟ್ಟಿದ್ದೀರಾ?

ಶ್ರೀ ಕೆ. ಬಿ. ಮಲ್ಲಪ್ಪ.--ತಕಾವಿ ಲೋನ್ ಹಾಗೂ ಬಡ್ಡಿ ಎಲ್ಲಾ ಸೇರಿ 70 ಕೋಟಿ ರೂಪಾಯಿ

ಯಾಗುತ್ತದೆ. ಈಗ ಮತ್ತೆ ಮಾರ್ಚಿ ಕೊನೆ ವರೆಗೆ ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಬಡ್ಡಿ ರಿಯಾಯಿತಿ ಕೊಟ್ಟಿರುವುದು ತಮಗೆ ಗೊತ್ತಿಲ್ಲವೇ ? ಇದನ್ನು ಎಲ್ಲರೂ ಸ್ವಾಗತ ಮಾಡಬೇಕೆಂದು ಹೇಳುತ್ತೇನೆ. ಹೀಗೆ ಹಲವಾರು ರಿಯಾಯಿತಿಗಳನ್ನು ಸರ್ಕಾರ ಕೊಟ್ಟಿದೆ ರಾಗಿ ಮೇಲೆ ಶುಲ್ಕವನ್ನು ರದ್ದು ಮಾಡಿದೆ. ಹಾಗೂ ಕೆಲವು ಧಾನ್ಯಗಳ ಮೇಲೆ ಶುಲ್ಕ ರಿಯಾಯಿತಿ ಕೊಟ್ಟಿದೆ. ಕ್ರಿಮಿನಾಶಕ, ಮೂಳೆಗೊಬ್ಬರ, ಒಣ ಮೆಣಸಿನಕಾಯಿ ಮೇಲೆ ತೆರಿಗೆಯನ್ನು ಕಡಿಮೆ ಮಾಡಲಾಗಿದೆ. ಇದನ್ನು ನಾವೆಲ್ಲರೂ ಸ್ವಾಗತ ಮಾಡುವ ವಿಚಾರವಾಗಿದೆ.

ಉಪಾಧ್ಯಕ್ಷರು --ತಮ್ಮ ಭಾಷಣವನ್ನು ಮುಕ್ತಾಯ ಮಾಡಿ, ಅರ್ಧ ಗಂಟೆ ಆಯಿತು.

ಶ್ರೀ ಕೆ. ಬಿ. ಮಲ್ಲಪ್ಪ.--ಇನ್ನು ಕೊನೆಯದಾಗಿ ಒಂದು ವಿಷಯವನ್ನು ಹೇಳುತ್ತೇನೆ. ಮಾನ್ಯ ಬಂಗಾರಪ್ಪನವರು ಹಾಗೂ ಎಸ್. ಆರ್ ಹೆಗ್ಡೆಯವರು ಮಾತನಾಡುವ ಸಮಯದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು 1984-85ರ ಆಯವ್ಯಯದ ಅಂದಾಜು ಪತ್ರ ಮಂಡಿಸುವಾಗ ಈ ರೀತಿ ಹೇಳಿದ್ದಾರೆ.

‚‚ಕರ್ನಾಟಕದ ಪ್ರಥಮ ಜನತಾ ಸರಕಾರ ಒಂದು ವರ್ಷದ ಅಧಿಕಾರಾವಧಿಯನ್ನು ಮುಗಿಸಿದೆ. ಇದನ್ನು ಸಾಧ್ಯವಾಗಿಸಿದ ರಾಜ್ಯದ ಜನತೆಗೂ ನಮ್ಮ ಎಲ್ಲ ಸ್ನೇಹಿತರಿಗೂ ನನ್ನ ಆಳವಾದ, ಪ್ರಾಮಾಣಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ'' ಎಂದು.

5 P M.

ಈ ಒಂದು ವರ್ಷ ನಾನು ಅಧಿಕಾರ ಮುಗಿಸಿದ್ದು ಎಲ್ಲಾ ಜನಗಳ ಅಭಿಮಾನದಿಂದ ಹಾಗೆ ಎಂದು ಅವರು ಬಹಳ ವಿನಯದಿಂದ ಏತಕ್ಕೆ ಹೇಳಬೇಕಾಗಿತ್ತು, ಬಹಳ ಕಷ್ಟದಿಂದ ನಿರ್ವಹಿಸಿದೆ ಎಂದು ಹೇಳಿದ್ದಾರಲ್ಲ ? ನಮ್ಮ ಸರ್ಕಾರ 1983ರ ಜನವರಿ 10ನೇ ತಾರೀಖು ಪ್ರಾರಂಭವಾಯಿತು. ಆ ಕಡೆಯವರು ಹೆಗಡೆಯವರ ಸರ್ಕಾರ 15 ದಿವಸದಲ್ಲಿ ಹೋಗುತ್ತದೆ, ಮತ್ತೆ 20 ದಿವಸದಲ್ಲಿ ಹೋಗುತ್ತದೆ. ಮೂರು ತಿಂಗಳಲ್ಲಿ ಹೋಗುತ್ತದೆ, ಟೆನಾಮೆಂಟ್ ಕಟ್ಟಿದ್ದೇವೆ, ಪಟಾಕಿ ಹಾರಿಸುತ್ತೇವೆ. ಇನ್ನು ಸರ್ಕಾರ ಉಳಿಯುವುದಿಲ್ಲ ಎನ್ನುವ ಸ್ಥಿತಿಯಲ್ಲಿ ಪ್ರಚಾರ ಮಾಡಿದರು ; ಸ್ವಾಮಿ ನಿಮ್ಮ ಕೆಲವು ಸ್ನೇಹಿತರನ್ನು ನೋಡಬೇಕಾಗಿತ್ತು, ಬಹಳ ಸೀಟಾಗಿ ಇದ್ದು ಪಿ ಡಬ್ಲ್ಯು. ಡಿ. ಖಾತೆ ವಹಿಸಿಕೊಳ್ಳಲಿಕ್ಕೆ ರೆಡಿ ಇದ್ದರು. ಆದರಲ್ಲಿ ಮಹದೇವ್ ಒಬ್ಬರು ಆಗಿದ್ದರೆ ಬಹಳ ಸಂತೋಷ. ಅಸೆಂಬ್ಲಿ ಸೇರುವವರೆಗೂ ಕೂಡ ಗುಲ್ಲೋ ಗುಲ್ಲು ಅಲ್ಲಿ ಹೋಯಿತು, ಇಲ್ಲಿ ಹೋಯಿತು, ಅವರು ಹೋದರು, ಇವರು ಹೋದರು ಎಂದು ಹೇಳಿಕೊಂಡು ಈ ಸರ್ಕಾರಕ್ಕೆ ನೆಮ್ಮದಿಯಿಂದ ಕೆಲಸ ಮಾಡಲಿಕ್ಕೆ ಬಿಡಲಿಲ್ಲ. ಮುಖ್ಯಮಂತ್ರಿಗಳು ನೆಮ್ಮದಿಯಾಗಿ ಇರಲಿಕ್ಕೆ ಬಿಡಲಿಲ್ಲ. ಅಧಿಕಾರ ಇವೊತ್ತು ಹೋಗುತ್ತದೋ, ನಾಳೆ ಹೋಗುತ್ತದೋ ಮುಖ್ಯಮಂತ್ರಿಗಳು ಈ ಕಡೆಯವರು ಆಗುತ್ತಾರೋ, ಆ ಕಡೆಯವರು ಆಗುತ್ತಾರೋ, ಫುಡ್ ಮಿನಿಸ್ಟರ್ ನಾನು ಆಗುತ್ತೇನೆಯೋ. ಅವರು ಆಗುತ್ತಾರೆಯೋ, ಇವರು ಆಗುತ್ತಾರೆಯೋ ಎಂದು ಡೋಲಾಯಮಾನ ಕಳೆದ ಒಂದು ವರ್ಷ ಕಾಲದಿಂದ ಇವರು ತಂದರು. ಮುಖ್ಯಮಂತ್ರಿಗಳಿಗೆ ನಾಲ್ಕು ಜನರ ಕಾಂಪಿಟೇಷನ್ ಇತ್ತು. ಒಂದು ವರ್ಷದಲ್ಲಿ ಬಂದಿರತಕ್ಕ ಅನಾಹುತ, ಪ್ರವಾಹಗಳನ್ನು ತಡೆದು ಸಕ್ಸಸ್‌ಫುಲ್ ಆಗಿ ನಡೆಸಿದ್ದೇವೆ, ಅದಕ್ಕೆ ಜನರ ಅಭಿಮಾನ ಇತ್ತು ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರಾದ ಮಹದೇವ್ ಅವರ ಹಾಗೆ ಎದ್ದು, ಎದ್ದು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಒಂದು ಸಾರಿ ಹೇಳಿದರೆ ಕರೆಕ್ಟಾಗಿ ಹೇಳುತ್ತೇವೆ. ಕೊನೆಯದಾಗಿ ಹೇಳಬೇಕೆಂದರೆ, 1983-84ನೇ ಸಾಲಿನಲ್ಲಿ ನೀರಾವರಿ ಬಗ್ಗೆ ಬಹಳ ಹೆಚ್ಚು ಹಣ ಒದಗಿಸಿ ಬಹಳ ಪ್ರೋಗ್ರೆಸ್ ಆಗಿದೆ ಎನ್ನುವುದನ್ನು ನಾವು ಇಲ್ಲಿ ಅಂಕಿಅಂಶಗಳಿಂದ ನೋಡಬಹುದು. ಮತ್ತೆ ಇನ್ನೊಂದು ಮಹತ್ತರವಾದುದು ಏನೆಂದರೆ ಲೋಕೋಪಯೋಗಿ ಇಲಾಖೆಯಲ್ಲಿ ಮಹತ್ತರವಾದ ತೀರ್ಮಾನವನ್ನು ತೆಗೆದುಕೊಂಡರು. ಅದರ ಬಗ್ಗೆ ಶ್ಲಾಘನೀಯ ಮಾಡತಕ್ಕದ್ದಾಗಿದೆ.

ಶ್ರೀ ಕೆ ಎನ್. ಕಾಳಮರಿಗೌಡ —ತಾವು ಬ್ರಿಡ್ಜೆಸ್ ಬಗ್ಗೆ ಕೇಳಿ.

ಶ್ರೀ ಕೆ. ಬಿ. ಮಲ್ಲಪ್ಪ —ಆ ಬ್ರಿಡ್ಜ್ ಆದರೆ ನಿಮಗೆ 5 ಸಾವಿರ ಓಟುಗಳು ಬರುತ್ತವೆ, ಇಲ್ಲದೇ ಹೋದರೆ ಡಮಾರ್. ಒಂದೂ ಓಟು ಬರುವುದಿಲ್ಲ.

ಶ್ರೀ ಕೆ. ಎನ್. ಕಾಳಮರಿಗೌಡ.--ಈಗ ನಾನು ನನ್ನ ಒಪ್ಪಿಗೆ ಕೊಡುತ್ತೇನೆ, ಆ ಪ್ರಾಜೆಕ್ಟ್ ಮಾಡಿಸಿ ಸ್ವಾಮಿ.

ಶ್ರೀ ಕೆ. ಬಿ. ಮಲ್ಲಪ್ಪ --ನೀವು ನಮ್ಮ ಪಕ್ಷದ ಅಭಿಮಾನದಿಂದ ಬಂದರೆ ಇನ್ನು 5 ಸಾವಿರ ಓಟುಗಳು ಜಾಸ್ತಿ. ನೀವು ಈ ಕಡೆ ಬಂದರೆ ತಾಯಿ ಮನೆಗೆ ಬಂದದಾಗೆ ಅದು ಪಕ್ಷಾಂತರ ಅಲ್ಲ.

(ಗೊಂದಲ)

ಅಧ್ಯಕ್ಷರೆ, 1972 ನೇ ಇಸವಿಯಿಂದಲೂ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ ಬಹಳ ದಿವಸದಿಂದ ನೌಕರರು ದಿನಕೂಲಿ ಮೇಲೆ ಕೆಲಸದಲ್ಲಿ ಕೊಳೆಯುತ್ತಿದ್ದರು ದಿನಕೂಲಿ ಕೆಲಸದಲ್ಲಿ 15-20 ವರ್ಷ ಸರ್ವಿಸ್ ಮಾಡಿ ರಿಟೈರ್ ಆಗುವ ಸಂದರ್ಭ ಬಂದಿತ್ತು. ಅಂತಹವರಿಗೆ ತೊಂದರೆಯಾಗುತ್ತಿತ್ತು. ಅಂತಹವರು 23 ಸಾವಿರ ಜನರಿಗೆ ರೆಗ್ಯುಲರೈಸ್ ಮಾಡಿ ಖಾಯಂ ಮಾಡಿದ್ದು ತಪ್ಪು ಎಂದು ಹೇಳುತ್ತೀರಾ ?

ಶ್ರೀ ಕೆ. ಎನ್. ಕಾಳಮರಿಗೌಡ.---ಇನ್ನೂ ಆರ್ಡರ್ ಬಂದಿಲ್ಲ

ಶ್ರೀ ಕೆ ಟಿ. ಮಲ್ಲಪ್ಪ.--ಸುಮಾರು 25-30 ವರ್ಷಗಳಿಂದಲೂ ದಿನಕೂಲಿ ಕೆಲಸದಲ್ಲಿದ್ದ 23 ಸಾವಿರ ಜನರಿಗೆ ಖಾಯಂ ಮಾಡಿ ಒಂದು ನೆಲೆಯನ್ನು ನಮ್ಮ ಸರ್ಕಾರ ಮಾಡಿಕೊಟ್ಟಿದ್ದಕ್ಕೆ ನಾವು ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸಲೇ ಬೇಕಾಗಿದೆ. ನಾನು ಇನ್ನೂ ಮಾತನಾಡುವಂಥ ವಿಷಯಗಳು ಬಹಳ ಇತ್ತು, ಮಾನ್ಯ ಸದಸ್ಯರು ಮಧ್ಯೆ ಮಧ್ಯೆ ತೊಂದರೆ ಮಾಡಿದ್ದರಿಂದ ನಾನು ಹೇಳುವಂತಾದ್ದು ತಪ್ಪಿಹೋಗುತ್ತಿದೆ. ನನಗೆ ಮಾನ್ಯ ಅಧ್ಯಕ್ಷರು ಇನ್ನೂ ಒಂದು ಗಂಟೆ ಕಾಲ ಅವಕಾಶ ಕೊಟ್ಟಿದ್ದರೆ ಮಾತನಾಡುತ್ತಿದ್ದೆ, ನನಗೆ ಮಾತನಾಡಬೇಕೆಂಬ ಇಚ್ಛೆ ಇತ್ತು. ಈಗ ಸಮಯಾವಕಾಶ ಇಲ್ಲದೇ ಇರುವುದರಿಂದ, ನಾನು ಹೆಚ್ಚು ಮಾತನಾಡಲು ಬಯಸುವುದಿಲ್ಲ

ಶ್ರೀ ಕೆ ಎನ್ .ಕಾಳಮರಿಗೌಡ.---ಸರ್ಕಾರಿ ನೌಕರರ ನಿವೃತ್ತಿ ವಯಸ್ಸಿನ ಬಗ್ಗೆ ತಾವು ಏನು ಅಭಿಪ್ರಾಯ ಕೊಡುತ್ತೀರಿ ?

ಶ್ರೀ ಕೆ ಬಿ ಮಲ್ಲಪ್ಪ --ಈ ವಿಚಾರವನ್ನು ಸಭೆಗೇ ಬಿಟ್ಟು ಬಿಟ್ಟಿದ್ದೇವೆ. ಇದರ ಬಗ್ಗೆ ಹೇಳುವುದಾದರೆ, ಈಗ ಏನು ನಿವೃತ್ತಿ ವಯಸ್ಸನ್ನು ನಿಗದಿ ಮಾಡಿದ್ದಾರೆ ಅದೇ ನಡೆದುಕೊಂಡು ಹೋದರೆ ಸಾಕು ಅಂದರೆ 55 ವರ್ಷಕ್ಕಿಂತ ನಿವೃತ್ತಿ ವಯಸ್ಸನ್ನು ಹೆಚ್ಚಿಸಬಾರದೆಂದು ನನ್ನ ಸ್ವಂತ ಅಭಿಪ್ರಾಯ. ಈ ಮಾತನ್ನು ನಾನು ಹಿಂದೆ ಮುಂದೆ ನೋಡಿಕೊಂಡು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರು ಇಷ್ಟು ಮಾತುಗಳನ್ನಾಡಲು ತಾವು ನನಗೆ ಅವಕಾಶವನ್ನು ಕೊಟ್ಟಿದ್ದಕ್ಕೋಸ್ಕರ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಭೀಮಣ್ಣ ಎಸ್. ಖಂಡ್ರೆ (ಭಾಲ್ಕಿ).--ಮಾನ್ಯ ಅಧ್ಯಕ್ಷರೆ, ಜನತಂತ್ರದಲ್ಲಿ ಜನರು ಯಾರನ್ನು ಆರಿಸಿ ಕಳುಹಿಸುತ್ತಾರೆ ಅಂಥ ದೇಶದಲ್ಲಿ ಅವರು ಹೋಗಿ ಆ ಜಾಗದಲ್ಲಿ ಕೂತುಕೊಳ್ಳುತ್ತಾರೆ, ಅದೇರೀತಿ ಇವತ್ತು ನನ್ನನ್ನು ಜನತೆ ಇಲ್ಲಿಗೆ ಆರಿಸಿ ಕಳುಹಿಸಿರುವುದರಿಂದ ನಾನು ಇಲ್ಲಿ ಬಂದು ಕುಳಿತ್ತಿದ್ದೇವೆ. ಜನತೆಯಿಂದ ನಾವು ಓಟನ್ನು ತೆಗೆದುಕೊಂಡು ಬಂದಿರುವುದರಿಂದ ನಾವು ಯಾವ ರೀತಿ ಈ ರಾಷ್ಟ್ರವನ್ನು ಕಟ್ಟಬೇಕು, ಇದು ಮುಂದೆ ಬರಬೇಕಾದರೆ ನಾವು ಯಾವರೀತಿ ಆಡಳಿತವನ್ನು ನಡೆಸಬೇಕು, ಯಾವರೀತಿ ಸಂಘಟನಾ ಶಕ್ತಿಯನ್ನು ಬೆಳೆಸಿಕೊಳ್ಳಬೇಕು, ನ್ಯಾಷನಲ್ ಕ್ಯಾರೆಕ್ಟನ್ನು ಬೆಳೆಸಿಕೊಳ್ಳತಕ್ಕದ್ದು ಯಾವ ರೀತಿ ಜಾತಿ ಜಾತಿಯ ಕಚ್ಚಾಟ ಎಂಬುದು ಹೋಗಿ ದೇಶದಲ್ಲಿ ಶಾಂತಿ ಸ್ಥಾಪನೆಯನ್ನು ಯಾವರೀತಿ ಮಾಡಬೇಕು ಎಂಬುದನ್ನು ನಾವು ಯೋಚನೆ ಮಾಡಬೇಕು. ಈ ಬಗ್ಗೆ ನಮ್ಮ ನಮ್ಮ ಆತ್ಮ ಸಂಶೋಧನೆಯನ್ನು ಮಾಡಿಕೊಳ್ಳಬೇಕು ಅದುಬಿಟ್ಟು ಆ ಕಡೆಯವರಾಗಲಿ, ಈ ಕಡೆಯವರಾಗಲಿ ಕೇವಲ ಟೀಕೆ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ದೃಷ್ಟಿಯಿಂದ ಪವಿತ್ರವಾದ ಈ ಸದನದಲ್ಲಿ ಒಬ್ಬರಿಗೊಬ್ಬರು ಟೀಕೆ ಮಾಡುವ ಬದಲು ನಾವು ಇಲ್ಲಿ ಏತಕ್ಕೆ ಬಂದಿದ್ದೇವೆ? ನಮ್ಮ ಕರ್ತವ್ಯ ಏನು ಎಂಬುದನ್ನು ಯೋಚನೆ ಮಾಡಬೇಕು ಕಳೆದ ವರ್ಷದಿಂದ ಇದುವರೆಗೂ ನಾವು ನೋಡುತ್ತಿದ್ದೇವೆ. ಕಳೆದ ಜನವರಿಯ ನಂತರ ನಾವು ಯಾವ ಪರಿಸ್ಥಿತಿಯಲ್ಲಿ ಈ ಆಯವ್ಯಯವನ್ನು ಚರ್ಚೆ ಮಾಡುತ್ತಿದ್ದೇವೆ, ಎನ್ನುವ ವಿಚಾರವನ್ನು ಅವಲೋಕಿಸಿ ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ವರ್ಷ ಪ್ರಾರಂಭ ಆದಮೇಲೆ ಇಡೀ ರಾಜ್ಯದಲ್ಲಿ ಮೂಕವರ್ಗ ಏನಿದೆ, ಬಾಯಿ ಇದ್ದೂ ಮಾತನಾಡದೇ ಇರುವವರು ಬುದ್ಧಿ ಇದ್ದೂ ಮಾತನಾಡದೇ ಇರುವವರು, ಬುದ್ಧಿ ಇದ್ದೂ ಅದನ್ನು ಉಪಯೋಗಿಸಲು ಸಾಧ್ಯವಿಲ್ಲದೇ ಇರುವವರು ಯಾರಿದ್ದಾರೆ ಇವರ ಸಂಖ್ಯೆ ಶೇಕಡ 80 ರಷ್ಟು ಇದ್ದರೂ ಇವರೆಲ್ಲರೂ ಕೇವಲ ಹಳ್ಳಿಗಾಡಿನಲ್ಲಿ ಹಂಚಿಹೋಗಿರುವ ಕಾರಣ ಅವರಮೇಲೆ ಏನೇನು ಅನ್ಯಾಯಗಳಾಗುತ್ತಿವೆ, ದೌರ್ಜನ್ಯಗಳು ನಡೆಯುತ್ತಿವೆ, ಬಹಳಷ್ಟು ಅತ್ಯಾಚಾರಗಳು ಏನು ನಡೆಯುತ್ತಿವೆ ಇವುಗಳನ್ನೆಲ್ಲಾ ಬೆಳಕಿಗೆ ತರಲು ಸಾಧ್ಯವಾಗುತ್ತಿಲ್ಲ. ಇಂದಥ ಪರಿಸ್ಥಿತಿ ಇರುವುದರಿಂದಲೇ ಈ ವರ್ಷದಲ್ಲಿ ಸುಮಾರು 30-40 ಸಾವಿರ ಜನ ರೈತರು ಜೈಲಿಗೆ ಹೋಗಬೇಕಾದ ಪ್ರಸಂಗ ಬಂತು. ಇದು ಎಲ್ಲರಿಗೂ ಗೊತ್ತಿರುವಂಥಾದ್ದು, ಇಡೀ ಸಮಾಜದಲ್ಲಿ ಅಂದರೆ ಇಡೀ ದೇಶದಲ್ಲಿ ಏನೂ ಅನ್ಯಾಯಗಳಾಗುತ್ತಿವೆ ಇದರ ಬಗ್ಗೆ ರೈತರು ರಸ್ತೆ ರೋಖೋ ಚಳುವಳಿ ಮಾಡಿ ಆ ಅನ್ಯಾಯಗಳನ್ನೆಲ್ಲಾ ದೂರ ಮಾಡಬೇಕೆಂಬ ಕಲ್ಪನೆಯನ್ನು ಸರ್ಕಾರಕ್ಕೆ ತಂದುಕೊಟ್ಟರು. ಇನ್ನೊಂದು ಕಡೆ ಭಾಷೆಯ ವಿಚಾರದಲ್ಲಿ ಹೇಳುವುದಾದರೆ 3 ಮತ್ತು 4ನೇ ದರ್ಜೆಯಲ್ಲಿ ಕನ್ನಡ ಕಡ್ಡಾಯ ಆಗಬೇಕೆಂಬ

ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಮೊದಲನೇ ತೀರ್ಮಾನವನ್ನು ಬದಲಾವಣೆ ಮಾಡಿದುದರಿಂದ ದೇಶದಲ್ಲಿ ಅಶಾಂತಿ ಉಂಟಾಗಿ ಬೆಂಗಳೂರಿನಲ್ಲಿ ರೋಷ ಜಾಸ್ತಿಯಾಗಿ ಕೊನೆಗೆ ಅದು ಸ್ಫೋಟಗೊಂಡಿತು. ಕಳೆದ 35 ವರ್ಷದಿಂದ ಈ ದೇಶದಲ್ಲಿ ನಮ್ಮ ಸಂಸ್ಕೃತಿ ಯಾವ ರೀತಿ ನಡೆದುಕೊಂಡು ಬಂದಿದೆ ಅದರ ಪ್ರಕಾರ ಅವಲೋಕಿಸಿ ನೋಡಿದರೆ ರ್‍ಯಾಗಿಂಗ್ ಜಾಸ್ತಿಯಾಗುತ್ತಿದ್ದು, ಓದುವುದು ಕಡಿಮೆಯಾಗಿ ಎಲ್ಲಿ ನೋಡಿದರೂ ವಿವಿಧ ರೀತಿಯ ಮುಷ್ಕರಗಳು ಜಾಸ್ತಿಯಾಗುತ್ತಿವೆ. ವಿದ್ಯಾರ್ಥಿಗಳು ಏತಕ್ಕೆ ಈ ರೀತಿ ಮಾಡುತ್ತಿದ್ದಾರೆಂಬುದನ್ನು ಯೋಚನೆ ಮಾಡಬೇಕು. ನಮ್ಮನ್ನು ಫೇಲ್ ಮಾಡಬೇಡಿ, ನಮ್ಮನ್ನು ಪಾಸ್ ಮಾಡಿ ಎಂದು ಹೇಳತಕ್ಕ ವಿದ್ಯಾರ್ಥಿಗಳು ಬಹಳ ಜನರಿದ್ದಾರೆ. ಅದೇರೀತಿ ಯಾರಿಗೆ ಕೆಲಸವಿಲ್ಲ ಅಂಥವರು ಹೇಗಾದರೂ ಮಾಡಿ ಜೀವನ ಮಾಡಬೇಕೆಂದು ಸಾವಿರಗಟ್ಟಲೆ ಜನ ಪಟ್ಟಣಗಳಿಂದ ಬರುತ್ತಿದ್ದಾರೆ. ಇದರಿಂದಾಗಿ ಪಟ್ಟಣಗಳಲ್ಲಿ ಅನೇಕ ಕೊಳಚೆ ಪ್ರದೇಶಗಳು ಜಾಸ್ತಿಯಾಗುತ್ತಿವೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಯಾರೂ ಕೂಡ ಬೇಸಾಯ ಮಾಡುವುದಕ್ಕೆ ತಯಾರಿಲ್ಲ. 6–7 ರೂಪಾಯಿ ಕೂಲಿ ಕೊಡುತ್ತೇವೆ ಎಂದರೂ ಯಾರು ಹಳ್ಳಿಯಲ್ಲಿ ಕೂಲಿಗೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಇದೇ ಅಲ್ಲದೆ ವಿವಿಧ ಇಲಾಖೆಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸಮಾಡುತ್ತಿರುವವರು ನಾವು ಅನೇಕ ವರ್ಷದಿಂದ ಕೆಲಸಮಾಡುತ್ತಿದ್ದೇವೆ ನಮ್ಮನ್ನು ಖಾಯಂ ಮಾಡಿ ಎಂದು ಮುಷ್ಕರ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಇವತ್ತು ವಿದ್ಯುತ್ ಕೊರತೆ ಇರುವುದರಿಂದ 4 ಲಕ್ಷ ಪಂಪ್‌ಸೆಟ್‌ಗಳಿಗೆ ಕೆಲಸವಿಲ್ಲದಂತಾಗಿದೆ. ಕೋಟ್ಯಾಂತರ ರೂಪಾಯಿ ಬೆಳೆ ಹಾಳಾಗಿ ಹೋಗುತ್ತಿದೆ. ದಳಪತಿಯ ಹತ್ತಿರ ಹಲವಾರು ವರ್ಷದಿಂದ ನಾವು ದುಡಿಯುತ್ತಿದ್ದೇವೆ. ನಾವು ಈ ರೀತಿ ಮುಷ್ಕರ ಮಾಡಿದರೆ ನಮಗೂ ಏನಾದರೂ ಅನುಕೂಲವಾಗಬಹುದೆಂದು ಬಸ್ಸಿಗೆ ಕಲ್ಲು ಹೊಡೆದಿದ್ದಾರೆ, ಕಾರ್ ಸುಟ್ಟಿದ್ದಾರೆ. 1 2 ಲಕ್ಷ ಜನತಾ ಮನೆಗಳನ್ನು ನಾವು ಕಟ್ಟಿಸಿಕೊಡುತ್ತೇವೆ ಎಂದು ಕಳೆದಸಾರಿ ಹೇಳಿದಿರಿ. ಆದರೆ ಅದರಲ್ಲಿ ಒಂದು ಸಾವಿರ ಮನೆಗಳನ್ನೂ ಕೂಡ ಪೂರ್ತಿ ಮಾಡಿಲ್ಲ. ಇದನ್ನೆಲ್ಲಾ ಪೂರ್ಣವಾಗಿ ಮಾಡಬೇಕಾದರೆ ನಿಮಗೆ ಹೆಚ್ಚಿನ ಹಣ ಬೇಕಾಗಿದೆ. ಇವತ್ತು ನಮ್ಮಲ್ಲಿ ಯಥೇಚ್ಛವಾದ ಸಂಪತ್ತಿದೆ. ಬಹಳ ಬಂಗಾರ ಇದೆ. ಇದೆಲ್ಲಾ ನಮಗೆ ದೊರೆಯಬೇಕಾದರೆ ದೇಶದಲ್ಲಿ ಪ್ರತಿಯೊಬ್ಬರೂ ಕಷ್ಟಪಟ್ಟು ಕೆಲಸಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಆದರೆ ಇವತ್ತು ನಮ್ಮ ಆಡಳಿತ ವ್ಯವಸ್ಥೆ ಕುಸಿದುಬಿದ್ದಿದೆ. ಮನುಷ್ಯರ ಬುದ್ಧಿ ಕೆಟ್ಟುಹೋಗಿದೆ. ಶರಾಬನ್ನು ಕುಡಿದೂ ಕುಡಿದೂ ಗ್ರಾಮಾಂತರ ಪ್ರದೇಶದಲ್ಲಿ, ಪಟ್ಟಣ ಪ್ರದೇಶದಲ್ಲಿ ಬೀದಿಯಲ್ಲಿ ಬಿದ್ದು ಹೊರಳಾಡುತ್ತಿದ್ದಾರೆ. ಇಂಥವರ ಸಂಖ್ಯೆ ಇವತ್ತು ಬಹಳವಾಗಿ ಬೆಳೆದಿದೆ.

ಇನ್ನೊಂದು ಬಹಳ ಮುಖ್ಯವಾದ ವಿಚಾರ ಎಂದರೆ ಭ್ರಷ್ಟಾಚಾರ. ಇದು ಬಹಳ ವ್ಯಾಪಕವಾಗಿ ಬೆಳೆದಿದೆ. ನಮ್ಮ ರಾಜ್ಯದ ಆದಾಯ ಏನಿದೆ ಅದರಲ್ಲಿ ಮೂರನೇ ಒಂದು ಭಾಗ ಹಣ ಸರ್ಕಾರಿ ನೌಕರರ ಸಂಬಳಸಾರಿಗೆಗೆ ಹೋಗುತ್ತಿದೆ. ಇವರಿಗೆ ಇಷ್ಟೊಂದು ದೊಡ್ಡ ಮೊತ್ತದ ಹಣ ಖರ್ಚಾದರೆ ಇನ್ನು ದೇಶದ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನು ಎಲ್ಲಿಂದ ತರಬೇಕು?

ಐದು ಸಾವಿರ ಹತ್ತು ಸಾವಿರ ತೆಗೆದುಕೊಂಡಿದ್ದಾರೆ. ಯಾವುದೇ ಪ್ರಕಾರವಾಗಿ ವ್ಯವಸ್ಥೆ ಇಲ್ಲದೆ ಇರುವುದರಿಂದ ಬ್ಯೂರೋಕ್ರಸಿ ಬೆಳೆದು ಜನತೆ ರೋಸಿಹೋಗಿದ್ದಾರೆ, ನಮ್ಮ ರಾಜ್ಯ ಬ್ಯೂರೋಕ್ರಸಿ ರಾಜ್ಯವಾಗಿದೆ. ಈ ಪ್ರಕಾರವಾಗಿ ಹಳ್ಳಿಗಳಿಂದ ಬೆಂಗಳೂರಿನವರೆಗೆ ಅಶಾಂತಿ ಉದ್ಭವವಾಗಿದೆ. ಇದನ್ನು ದೂರಮಾಡುವ ಸಲುವಾಗಿ ನಾನು ಸರ್ಕಾರಕ್ಕೆ ಹೇಳುತ್ತಿದ್ದೇನೆ. ಯಾರ ಕೈಯಲ್ಲಿ ಅಧಿಕಾರ ಇದೆಯೋ ಅವರು ತಮ್ಮ ಆತ್ಮಶೋಧನೆ ಮಾಡಿಕೊಂಡು ಸರಿಯಾದ ರೀತಿಯಲ್ಲಿ, ಹಾಗೂ ಪ್ರಾಮಾಣಿಕವಾದ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಹೋದರೆ ಮಾತ್ರ ರಾಜ್ಯದ ಅಭಿವೃದ್ಧಿ ಸಾಧನೆಯನ್ನು ಮಾಡಬಹುದೆಂದು ನನಗನ್ನಿಸುತ್ತದೆ. ಇದರಲ್ಲಿ ನಮ್ಮ ಪಾರ್ಟಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ಒಳ್ಳೆಯವರು ಇದ್ದಾರೆ ಹಾಗೂ ಕೆಟ್ಟವರು ಇದ್ದಾರೆ. ಯಾರು ಕೆಟ್ಟವರು ಇದ್ದಾರೆ ಅವರನ್ನು ಪಾರ್ಟಿಯಿಂದ ತೆಗೆಯಬೇಕು ಎಂಬುದಕ್ಕೆ ನಿಮಗೆ ಮನಸ್ಸಿಲ್ಲವೆಂದು ಹೇಳುತ್ತೇನೆ. ಇದಕ್ಕೆ ಕಾರಣ ಯಾರು ಎಂಬುದನ್ನು ಸಹ ಹೇಳುತ್ತೇನೆ. ಈವತ್ತು ಜಾತಿ ಜಾತಿಯಲ್ಲಿ ಕಲಹ, ಭಾಷೆ ಭಾಷೆಯಲ್ಲಿ ಕಲಹ ನಡೆಯುತ್ತಿದ್ದರೆ ಯಾವ ರಾಜ್ಯ ತಾನೆ ಸುಗಮವಾಗಿ ನಡೆಯಲು ಸಾಧ್ಯವಾಗುತ್ತದೆ? ಎಷ್ಟೇ ಹಣ ಬರಲಿ, ನಮ್ಮ ಸರ್ಕಾರವೇ ಆಡಳಿತದಲ್ಲಿರಲಿ, ನಿಮ್ಮ ಸರ್ಕಾರವೇ ಆಡಳಿತದಲ್ಲಿರಲಿ, ಮೂರನೆ ಒಂದು ಭಾಗ ನೌಕರರಿಗೆ ಹೋಗುತ್ತಿದ್ದರೆ, ಮೂರನೇ ಒಂದು ಭಾಗ ಭ್ರಷ್ಟಾಚಾರಕ್ಕೆ ಖರ್ಚಾಗುತ್ತಿದೆ. ಇದು ನನ್ನ ಅನುಭವದಿಂದ ಹೇಳುತ್ತಿದ್ದೇನೆ.

ಸಮಾಜದ ವ್ಯವಸ್ಥೆಗೆ ತೊಡಗಿಸತಕ್ಕಂಥ ಹಣ ಐ ಆರ್. ಡಿ ಸಿ. ಎನ್. ಆರ್. ಇ. ಪಿ. ಗೆ ತೊಡಗಿಸತಕ್ಕಂಥ ಹಣ ಏನಿದೆ ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಹಣ ಭ್ರಷ್ಟಾಚಾರ ಅಧಿಕಾರಿಗಳ ಕಡೆಗೆ ಭಾರಿ ಭಾರಿ ಲೀಡರ್‌ಗಳ ಕಡೆಗೆ ಹಣ ಹೋಗುತ್ತಿದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಆದುದರಿಂದ ಎಲ್ಲಿಯವರೆಗೆ ಕರಪ್ಷನ್ ಇದೆಯೋ ಅಲ್ಲಿಯವರೆಗೆ ಜಗಳ ಇದ್ದೇ ಇರುತ್ತದೆ ಎಂದು ಹೇಳುತ್ತೇನೆ. ನನ್ನ ಅಭಿಪ್ರಾಯ

ದಲ್ಲಿ ನಾವು ಬೇರೆಯವರನ್ನು ನೋಡಿ ಕಲಿತುಕೊಳ್ಳುವ ಬದಲು ನಮ್ಮ ಆತ್ಮ ಸಾಕ್ಷಿಯಾಗಿ ನಾವು ನಡೆದುಕೊಂಡದ್ದೇ ಆದರೆ ನಮ್ಮ ಜೊತೆಯಲ್ಲಿ ಮತ್ತೊಬ್ಬರು ಬರುತ್ತಾರೆ. ಈ ದೃಷ್ಟಿಯಿಂದ ಈವತ್ತು ನಾವುಗಳು ಒಳ್ಳೆಯ ಕೆಲಸಗಳನ್ನು ಮಾಡಲಾರದೆ ಬೇರೆಯವರನ್ನು ಕುರಿತು ಮಾತನಾಡತಕ್ಕಂಥದ್ದು ಸರಿಯಲ್ಲ. ಸೆಂಟ್ರಲ್ ಸ್ಟೇಟ್ ರಿಲೇಷನ್ ಸರಿಯಾಗಿ ಇಲ್ಲವೆ ಇದ್ದರೆ ನಾವು ಮುಂದುವರಿಯಲು ಸಾಧ್ಯವಿಲ್ಲ. ಸರಿಸಮಾನವಾಗಿ ನಡೆದುಕೊಂಡರೆ ಮಾತ್ರ ನಾವು ಏನು ಲಾಭವನ್ನು ಪಡೆಯಲು ಸಾಧ್ಯವೋ ಅದನ್ನು ಪಡೆಯಲು ಸಾಧ್ಯವಾಗುತ್ತದೆ. ಯಾವುದನ್ನೇ ಆಗಲಿ ಹಿಂದಿನ ಗೌವರ್ನ್‌ಮೆಂಟ್, ಈಗಿನ ಗೌವರ್ನ್‌ಮೆಂಟ್ ಎಂದು ಗಣನೆಗೆ ತೆಗೆದುಕೊಳ್ಳಬಾರದು. ಯಾರು ಒಳ್ಳೆಯ ಕೆಲಸ ಮಾಡಿದ್ದರೆ ಅದನ್ನು ಹೇಳಬೇಕು ಮಾನ್ಯ ಅಧ್ಯಕ್ಷರೇ ಅದಕ್ಕಾಗಿ ನಾನು ಮೊದಲನೆಯದಾಗಿ ಹೇಳುವುದೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ರೈತರ ಸ್ಥಿತಿ ಉತ್ತಮವಾಗಿದ್ದರೆ ದೇಶವೂ ಸೌಜನ್ಯವಾಗಿರುತ್ತದೆ. ಹಾಗೂ ದೇಶದಲ್ಲಿ ಶಾಂತಿ ಸಿಕ್ಕುತ್ತದೆ. ಅದಕ್ಕೋಸ್ಕರವಾಗಿ ಸೈದ್ಧಾಂತಿಕವಾಗಿ ಅವರಿಗೆ ಸೌಕರ್ಯಗಳನ್ನು ದೊರಕಿಸಿಕೊಟ್ಟು ಸಾಧ್ಯವಾದಷ್ಟು ಶಾಂತಿಯನ್ನು ಸ್ಥಾಪನೆ ಮಾಡಬೇಕು ಎನ್ನುವುದು ನಮ್ಮ ಇಚ್ಛೆಯಾಗಿದೆ. ಅಗ್ರಿಕಲ್ಚರಿಸ್ಟ್ ಬಗ್ಗೆ ನಾನು ಇಷ್ಟು ಮಾತ್ರ ಹೇಳಬೇಕೆಂದಿದ್ದೇನೆ. ಈವತ್ತು ಅಗ್ರಿಕಲ್ಚರಿಸ್ಟ್ ಬಹಳ ತೊಂದರೆಗೊಳಗಾಗಿದ್ದಾರೆ ಅಗ್ರಿಕಲ್ಚರಿಸ್ಟ್ ಸರಿಯಾದ ರೀತಿಯಲ್ಲಿ ಕೆಲಸಮಾಡಬೇಕಾದರೆ, ಅವರಿಗೆ ಇರತಕ್ಕಂಥ ಅನಾನುಕೂಲತೆಗಳನ್ನು ದೂರಮಾಡಬೇಕು ಹೆಚ್ಚು ಹೆಚ್ಚು ಹಣವನ್ನು ಕೊಟ್ಟು ಅವರಿಗೆ ಸಹಾಯವನ್ನು ಮಾಡಬೇಕು ಈವತ್ತಿನ ದಿವಸ ತಮಗೆ ಹೇಳಬೇಕಾದರೆ 12 ಮಿಲಿಯನ್ಸ್ ಹೆಕ್ಟೇರ್ ಭೂಮಿ ಇದ್ದರೆ 25 ಲಕ್ಷ ಹೆಕ್ಟೇರ್ ಭೂಮಿ ಕಲ್ಟಿವೇಷನ್‌ನಲ್ಲಿ ಇರುತ್ತದೆ. ಸಾಕಷ್ಟು ಕಲ್ಟಿವೇಷನ್‌ಗೆ ಭೂಮಿಯನ್ನು ತರಲು ಸರ್ಕಾರ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಎಷ್ಟೋ ಕೋಟಿ ರೂಪಾಯಿಗಳನ್ನು ಬೇರೆ ರೀತಿಯಲ್ಲಿ ಖರ್ಚುಮಾಡುತ್ತಿದ್ದೇವೆ. ಇಂಡಸ್ಟ್ರಿಗಳನ್ನು ನಡೆಸುವುವವರಿಗೋಸ್ಕರವಾಗಿ 50 ಪರ್ಸೆಂಟ್ ಸಹಾಯ ಮಾಡುತಿದ್ದೀರಿ. ಕೆಲವು ಸಂದರ್ಭಗಳಲ್ಲಿ 50 ಪರ್ಸೆಂಟ್ ಸರ್ಕಾರದವರೇ ಅನೇಕ ಇಂಡಸ್ಟ್ರೀಸ್‌ಗಳನ್ನು ನಡೆಸುತ್ತಿದ್ದಾರೆ. ಅದೇ 50 ಪರ್ಸೆಂಟ್ ಭೂಮಿಗೆ ಖರ್ಚುಮಾಡಿದರೆ, ಹೆಚ್ಚು ಜನ ಇಂಡಸ್ಟ್ರೀಸ್‌ಗಳನ್ನೇ ಅವಲಂಬನೆ ಮಾಡತಕ್ಕಂಥದ್ದು ದೂರವಾಗುತ್ತದೆ.

ಇನ್ನು ಇರಿಗೇಷನ್ ಬಗ್ಗೆ ಮಾತನಾಡುವುದಾದರೆ ಅವರಿಗೆ ಯಾವ ಪ್ರಕಾರವಾಗಿ ಅನ್ಯಾಯವಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳಾದ ದೇವೇಗೌಡರಿಗೆ ಕಳಕಳಿಯಿಂದ ಹೇಳುತ್ತಿದ್ದೇನೆ. ಕಾವೇರಿ ಬೇಸಿನ್ ಬಗ್ಗೆ 65 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇಷ್ಟೆಲ್ಲ ಕೊಟ್ಟಿದ್ದೇವೆ ಎನ್ನುವ ಮಾತನ್ನು ತಮ್ಮ ಸ್ಪೀಚ್‌ನಲ್ಲಿ ಬಂದಿದೆ. ಅಪ್ಪರ್ ಕೃಷ್ಣ ಯೋಜನೆಯಲ್ಲಿ 25 ಲಕ್ಷ ಹೆಕ್ಟಾರ್ಸ್ ಇರಿಗೇಷನ್ ಆಗಬೇಕಾದರೆ ಹಣವನ್ನು ಸರಿಯಾಗಿ ಕೊಡಬೇಕಾಗಿತ್ತು. ಇಂಬ್ಯಾಲೆನ್ಸ್ ದೂರ ಮಾಡಬೇಕೆಂಬ ಕಾರಣದಿಂದ 10 ಲಕ್ಷ ರೂಪಾಯಿ 6 ಲಕ್ಷ ಈ ರೀತಿ ಕೊಟ್ಟಿದ್ದೀರಿ, ಕಾರಂಜಾ ಪ್ರಾಜೆಕ್ಟ್ ಪ್ರಾರಂಭವಾಗಿ 12 ವರ್ಷವಾಯಿತು. ಹೊಸದಾಗಿ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ, ಈ ಸಾರಿ ಕೇವಲ 2 ಕೋಟಿ 20 ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತೀರಿ. ಇದು ಏತಕ್ಕೂ ಸಾಕಾಗುವುದಿಲ್ಲ. ತುಂಬಾ ಬ್ಯಾಕ್‌ವರ್ಡ್ ಪ್ರದೇಶವಾಗಿ ಇರುತ್ತದೆ. ಅಲ್ಲಿ ಬರಗಾಲ ಪರಿಸ್ಥಿತಿ ಇದೆ, ಕುಡಿಯಲಿಕ್ಕೆ ನೀರೇ ಇಲ್ಲ, ಮಳೆಯಿಲ್ಲದೆ ಬೆಳೆಯಾಗುತ್ತಿಲ್ಲ 25 ವರ್ಷಗಳಿಂದ ಯಾರು ಇತ್ತಕಡೆ ಹೆಚ್ಚಿನ ಗಮನವನ್ನು ಹರಿಸುತ್ತಿಲ್ಲ, ತಾವು ಬಂದ ನಂತರ ದೊಡ್ಡ ದೊಡ್ಡ ಸ್ಲೋಗನ್ ಹೇಳಿಕೊಂಡು ಬಂದಿದ್ದೀರಿ. ಇಂಬ್ಯಾಲೆನ್ಸ್ ದೂರಮಾಡುತ್ತೇವೆಂದು ಹೇಳಿ ಹೋದ ವರ್ಷಕ್ಕಿಂತ ಈ ವರ್ಷ ಹೆಚ್ಚು ಹಣವನ್ನು ಕೊಡಲಿಕ್ಕೆ ನಿಮಗೆ ಆಗಲಿಲ್ಲ. ನೀವು ಮನೆಗಳನ್ನು ಕಟ್ಟಲು ಹೆಚ್ಚು ಹಣವನ್ನು ಕೊಡಲು ಸಾಧ್ಯವಾಗಿಲ್ಲ. ನಾಲ್ಕುವರೆ ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿರುತ್ತೀರಿ. ವಾಸ್ತವವಾಗಿ ಹೋದವರ್ಷಕ್ಕಿಂತ ಈ ವರ್ಷ ಹೆಚ್ಚುವ ಹಣವನ್ನು ಕೊಡಬೇಕಾಗಿತ್ತೆಂದು ಹೇಳುತ್ತೇನೆ. ಕಬಿನಿ, ಹಾರಂಗಿ, ಹೇಮಾವತಿ ಕೆ. ಆರ್. ಎಸ್. ಗಳಿಗೆ 65 ಲಕ್ಷ ರೂಪಾಯಿಗಳನ್ನು ಕೊಟ್ಟರೆ, ಅಪ್ಪರ್ ಕೃಷ್ಣ ಮತ್ತು ಘಟಪ್ರಭಾ 24 ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತೀರಿ. ಈ ಪ್ರಕಾರವಾಗಿ ಮಾಡಬಾರದು. ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5-30 P.M.

ಶ್ರೀ ಎಸ್ ಭೀಮಣ್ಣ ಖಂಡ್ರೆ.---ಇನ್ನು ಸೇಲ್ಸ್ ಟ್ಯಾಕ್ಸ್ ಬಗ್ಗೆ ಒಂದೇ ಒಂದು ಮಾತು ಹೇಳುತ್ತೇನೆ. ಇವರು ಯಾವುದರ ಮೇಲಿನ ತೆರಿಗೆಯನ್ನು ಕಡಿಮೆ ಮಾಡಬೇಕಾಗಿತ್ತು ಅದನ್ನು ಮಾಡಿಲ್ಲ. ಅದೇರೀತಿ ಯಾವುದರ ಮೇಲಿನ ತೆರಿಗೆಯನ್ನು ಹೆಚ್ಚು ಮಾಡಬೇಕಾಗಿತ್ತೋ ಅದನ್ನು ಮಾಡಿಲ್ಲ, ಈ ಬಗ್ಗೆ ವಿವರವಾಗಿ ಹೇಳಲು ಈಗ ನನಗೆ ಸಮಯವಿಲ್ಲ. ಆದ್ದರಿಂದ ಮತ್ತೊಂದು ಸಲ ಹೇಳುತ್ತೇನೆ.

ಇನ್ನು ಅಂತ್ಯೋದಯದ ಬಗ್ಗೆ ಇದರಲ್ಲಿ ಹೇಳಿದ್ದಾರೆ. ಕಳೆದ ಸಲ ಇದೇ ಯೋಜನೆಗೆ ಇಟ್ಟಿದ್ದು 150 ಲಕ್ಷ ರೂಪಾಯಿಗಳಾದರೆ, ಇವರು ಖರ್ಚು ಮಾಡಿದ್ದು, 6 ಲಕ್ಷ ರೂಪಾಯಿಗಳು ಮಾತ್ರ. ಈ ರೀತಿಯಾದರೆ ಈ ಯೋಜನೆ ಯಾವ ರೀತಿ ಯಶಸ್ವಿಯಾಗುತ್ತದೆ ? ಈ ಯೋಜನೆಯನ್ನು ಕೈಗೊಳ್ಳುವಾಗ ತಾವು ಜಾತಿ ಭೇಧ ಮಾಡುವುದಾದರೆ ರಾಷ್ಟ್ರೀಯ ಐಕ್ಯತೆಯನ್ನು ಯಾವ ರೀತಿ ಕಾಪಾಡುತ್ತೀರಿ ? ಬಡವರು ಯಾವ ಜಾತಿಯಲ್ಲಿದ್ದರೂ ಸಹ ಬಡವರೇ ಆಗಿರುತ್ತಾರೆ. ಅದೇರೀತಿ ಸಾವುಕಾರರು ಯಾವ ಜಾತಿಯಲ್ಲಿದ್ದರೂ ಸಹ ಅವರು ಸಾವುಕಾರರೇ ಆಗಿರುತ್ತಾರೆ. ಆದ್ದರಿಂದ ಮಾನ್ಯ ಶ್ರೀ ವಿ. ಎಲ್. ಪಾಟೀಲ್ ಅವರು ತಮ್ಮ ಘೋಷಣೆಯನ್ನು ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕು. ಇಂತಹ ಕೆಲಸಗಳನ್ನು ಮಾಡುವಾಗ ಜಾತಿ ನೋಡಬಾರದು ನಿಜವಾಗಿಯೂ ಯಾರು ಬಡವರಿದ್ದಾರೆ. ಯಾರು ಗರೀಬರಿದ್ದಾರೆ. ಅಂತಹವರಿಗೆ ಜಾತಿ ನೋಡದೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಆರ್ಥಿಕ ಸಮೀಕ್ಷೆಯಲ್ಲಿ ಇವರೇ ಹೇಳಿರುವ ಪ್ರಕಾರ ಮುಸ್ನಡೆ ಹಾಗೂ ಸಾಗರದೀಪ ಯೋಜನೆಗೆ ಇವರು ಹಣವನ್ನೇ ಖರ್ಚು ಮಾಡಿಲ್ಲ. ಅದೇರೀತಿ ಚೈತನ್ಯ ಯೋಜನೆಗೆ 1983-84 ನೇ ಸಾಲಿನಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಇಟ್ಟಿದ್ದರೂ ಸಹ ಹಣವನ್ನು ಖರ್ಚು ಮಾಡಲಿಲ್ಲ ಹೀಗೆ ಎಲ್ಲ ಯೋಜನೆಗಳಿಗೂ ಇವರು ಹಣವನ್ನು ಕಟ್ ಮಾಡಿದ್ದಾರೆ. ಇಲ್ಲಿ ಕೆಲವು ಯೋಜನೆಗಳು ಇವೆಯೋ ಹೊರತು, ಹಣ ಮಾತ್ರ ಖರ್ಚಾಗಲಿಲ್ಲ. ಮುಖ್ಯವಾಗಿ ಇವರು ಬೀದರ್ ಜಿಲ್ಲೆಯಲ್ಲಿ ಯಾವ ಅಭ್ಯವೃದ್ಧಿ ಕಾರ್ಯಗಳನ್ನೂ ಸರಿಯಾಗಿ ಮಾಡಿ ಮುಗಿಸಿಲ್ಲ. ಅರಣ್ಯ ಬೆಳೆಸುವ ಬಗ್ಗೆಯಾಗಲೀ ಶುಗರ್-ಕೇನ್ ರೀಸರ್ಚ್ ಬಗ್ಗೆಯಾಗಲೀ ಇವರು ಹಣ ಖರ್ಚುಮಾಡಲಿಲ್ಲ. 6ನೇ ಪಂಚವಾರ್ಷಿಕ ಯೋಜನೆಯಲ್ಲಿ ಸ್ಪಿನ್ನಿಂಗ್ ಮಿಲ್ ಪ್ರಾರಂಭ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದರು. ಆದರೆ ಇದೂ ಸಹ ಆಗಲಿಲ್ಲ. ಕಾರಂಜಾ ಯೋಜನೆ ಬಗ್ಗೆ ಸಾಕಷ್ಟು ಹಣ ಕೊಡಲಿಲ್ಲ ಕಮ್ಯೂನಲ್ ಇರಿಗೇಷನ್‌ಗಾಗಿ 25 ಲಕ್ಷ ರೂಪಾಯಿಗಳನ್ನು ಖರ್ಚು ಇಲ್ಲಿಯವರೆಗೆ ಮಾಡಿದ್ದಾರೆ 8-10 ವರ್ಷಗಳಾದರೂ ಈ ಯೋಜನೆ ಇನ್ನೂ ಮುಗಿಯಲಿಲ್ಲ. ಬಹಳ ಹಿಂದುಳಿದಿರುವಂತಹ ಬೀದರ್ ಜಿಲ್ಲೆಗೆ ಇವರು ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕಾಗಿತ್ತು ಆದರೆ ಅಲ್ಲಿ ಇವರು ಸರಿಯಾಗಿ ಯಾವುದೇ ಕೆಲಸಗಳನ್ನು ಮಾಡಲಿಲ್ಲ ಒಂದು ರೀತಿಯಲ್ಲಿ ಇವರು ಮುಂಬೈ ಕರ್ನಾಟಕ ಭಾಗಕ್ಕೆ ಹಾಗೂ ಹೈದರಾಬಾದ್ ಕರ್ನಾಟಕ ಭಾಗಕ್ಕೆ ಅನ್ಯಾಯ ಮಾಡಿದ್ದಾರೆಂದು ನಾನು ಹೇಳುತ್ತೇನೆ ಈ ಮಾತನ್ನು ಹೇಳಲು ನನಗೆ ದುಃಖವಾಗುತ್ತದೆ. ಯಾವುದಕ್ಕೂ ಒಂದು ಮಿತಿ ಇರುತ್ತದೆ. ಆದ್ದರಿಂದ ಸರ್ಕಾರದವರು ಇದೇ ರೀತಿ ನಮ್ಮ ಭಾಗ ಹಿಂದುಳಿಯಲು ಬಿಡಬಾರದು. ಬಿಟ್ಟರೆ ದೊಡ್ಡ ಚಳುವಳಿಯಾಗುತ್ತದೆ. 5 ಭಾಗಗಳು ಸೇರಿ ವಿಶಾಲ ಕರ್ನಾಟಕ ಎಂದು ಆಯಿತು. ಈಗಲೂ ಸಹ ತಾವು ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸದಿದ್ದರೆ ಇದು ಎರಡು ಕರ್ನಾಟಕವಾಗಬಹುದೆಂದು ಹೇಳುತ್ತೇನೆ. ನಮ್ಮ ಭಾಗದ ಜನರು ಬಹಳ ರೋಷಗೊಂಡಿದ್ದಾರೆ. ಇದೇ ರೀತಿ ಅನ್ಯಾಯ ಮುಂದುವರೆದರೆ ಕರ್ನಾಟಕ ಎರಡು ಭಾಗವಾಗುತ್ತದೆ ಹಾಗೂ ಇದರ ಸಲುವಾಗಿ ನಮ್ಮ ಭಾಗದ ಜನರು ಚಳುವಳಿ ಮಾಡದೆ ಬಿಡುವುದಿಲ್ಲ. ನಮ್ಮ ಭಾಗ ತೆಲಂಗಾಣ ತರಹ ಉಳಿದುಕೊಳ್ಳಬೇಕೇನು ? ತಾವು ನಮ್ಮ ಇಚ್ಛೆಯನ್ನು ಅನುಸರಿಸಿ ನಡೆಯದಿದ್ದರೆ....

ಶ್ರೀ ಎಂ. ಎಸ್. ಕೃಷ್ಣನ್.--ಎರಡು ಕರ್ನಾಟಕವಾಗುವುದಕ್ಕೆ ನಮ್ಮ ಜನರು ಬಿಡುವುದಿಲ್ಲ.

ಶ್ರೀ ಭೀಮಣ್ಣ ಎಸ್. ಖಂಡ್ರೆ.--ಕರ್ನಾಟಕ ರಾಜ್ಯದ ಬಗ್ಗೆ ನಮಗೆ ನಿಮಗಿಂತಲೂ ಹೆಚ್ಚಿನ ಅಭಿಮಾನವಿದೆ. ಆದರೆ ಮಾನ್ಯ ಕೃಷ್ಣನ್ ಅವರು ಒಂದು ಮಾತನ್ನು ಅರ್ಥ ಮಾಡಿಕೊಳ್ಳಬೇಕು. ಏನೆಂದರೆ, ಯಾವುದೇ ಒಬ್ಬ ಮನುಷ್ಯ ಬಹಳವಾಗಿ ನಿರಾಶೆಗೊಂಡಾಗ ಹಾಗೂ ಜೀವನದಲ್ಲಿ ಜಿಗುಪ್ಸೆಗೊಂಡಾಗ ಆತ್ಮಹತ್ಯೆ ಯಾವ ರೀತಿ ಮಾಡಿಕೊಳ್ಳುತ್ತಾನೆಯೋ ಅದೇರೀತಿ ನಾವೂ ಸಹ ಪ್ರಸಂಗ ಬಂದರೆ ಇದಕ್ಕಾಗಿ ಚಳುವಳಿ ಮಾಡಲೇಬೇಕಾಗುತ್ತವೆ. ನಾವು 500 ಮೈಲಿಗಳಷ್ಟು ದೂರದಲ್ಲಿದ್ದೇವೆ. ಆದರೂ ವಿಶಾಲ ಕರ್ನಾಟಕವಾಗಲಿ, ಕನ್ನಡಿಗರೆಲ್ಲರೂ ಒಂದೆಡೆ ಸೇರೋಣ ಎಂಬ ಸದ್ಭಾವನೆಯಿಂದ ಆ ಭಾಗದಿಂದ ಈ ಭಾಗಕ್ಕೆ ಬಂದು ಸೇರಿದ್ದೇವೆ ಇಷ್ಟಾದರೂ ಇವರು ನಮಗೆ ಇದೇ ಪ್ರಕಾರ ಅನ್ಯಾಯ ಮಾಡುವುದಾದರೆ ನಾವು ಸುಮ್ಮನಿರುವುದಿಲ್ಲ ಪ್ರಸಂಗ ಬಂದರೆ ಕರ್ನಾಟಕ ರಾಜ್ಯ ಎರಡಲ್ಲ ನಾಲ್ಕು ಭಾಗಗಳಾಗುತ್ತವೆ. ಈ ರೀತಿ ಅನ್ಯಾಯ ಹಾಗೂ ಭೇದ ಮಾಡುವುದಾದರೆ ನಾವು ನೋಡಿಕೊಂಡು ಸುಮ್ಮನೆ ಕೂರುವುದಕ್ಕಾಗುವುದಿಲ್ಲ. ಎಲ್ಲಿ ಅನ್ಯಾಯವಾಗುತ್ತದೆ ಅಲ್ಲಿ ನಾವು ಹೋರಾಟ ಮಾಡುತ್ತೇವೆ. ಅನ್ಯಾಯದ ವಿರುದ್ಧ ನಾವು ಹೋರಾಟ ಮಾಡುತ್ತೇವೆ. ಇದಕ್ಕಾಗಿ ಲಕ್ಷಾಂತರ ಜನರು ಸಾಯಲೂ ಸಹ ಸಿದ್ಧರಿದ್ದಾರೆ. ಮುಂದೆ ಈ ರಾಜ್ಯ ಪಂಜಾಬ್ ಹಾಗೂ ಹರಿಯಾಣ ತರಹ ಆಗಬಹುದೆಂದು ಎಚ್ಚರಿಕೆ ಕೊಡುತ್ತಿದ್ದೇನೆ. ಅಷ್ಟೇ ಅಲ್ಲ, ಪ್ರಸಂಗ ಬಂದರೆ ರಕ್ತಕ್ರಾಂತಿ ಕೂಡ ಆಗುತ್ತದೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.--ಮಾನ್ಯ ಸದಸ್ಯರು ಬಹಳ ಕೋಪವಾಗಿರುವಂತೆ ಕಾಣುತ್ತದೆ.

ಉಪಾಧ್ಯಕ್ಷರು.--ಅದಕ್ಕೆ ನೀವೇ ಕಾರಣ, ಈಗ ಅವರ ಭಾಷಣ ಮುಗಿಯಿತು ತಾವು ತಮ್ಮ ಭಾಷಣ ಪ್ರಾರಂಭ ಮಾಡಬಹುದು.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).--ಮಾನ್ಯ ಅಧ್ಯಕ್ಷರೇ, ಮಾನ್ಯ ಭೀಮಣ್ಣ ಖಂಡ್ರೆಯವರು ಭಾಷಣ ಮುಗಿಸಿದ ನಂತರ ಮಳೆ, ಗುಡುಗು ಮತ್ತು ಮಿಂಚು ಎಲ್ಲಾ ಬಂದು ನಿಂತಂತೆ ಆಯಿತು. ಈ ರಾಜ್ಯದ ಕೆಲವು ಭಾಗಗಳು ಏನು ಹಿಂದುಳಿದಿವೆ, ಅವುಗಳನ್ನು ಮುಂದಕ್ಕೆ ತರಲು ಸರ್ಕಾರ ಸೂಕ್ತ ಕ್ರಮ ಕೈಕೊಳ್ಳದಿದ್ದರೆ ಕರ್ನಾಟಕ ರಾಜ್ಯ ಎರಡಾಗಬಹುದು ಎಂಬ ಅರ್ಥದಲ್ಲಿ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದರೆಂದು ಕಾಣುತ್ತದೆ.

ಶ್ರೀ ಭೀಮಣ್ಣ ಎಸ್. ಖಂಡ್ರೆ.--ಈಗಿರುವಂತಹ ವಿಷಮತೆಯನ್ನು ಮತ್ತು ಅಸಮಾನತೆಯನ್ನು ಸರ್ಕಾರದವರು ಹೋಗಲಾಡಿಸದಿದ್ದರೆ ಆ ಒಂದು ಪ್ರಶ್ನೆ ಬಂದೇ ಬರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.--ಮಾನ್ಯ ಅಧ್ಯಕ್ಷರೇ ಈ ಆಯವ್ಯಯ ಪತ್ರವನ್ನು ಮುಖ್ಯಮಂತ್ರಿಗಳು ಮಂಡಿಸಿದ ಮೇಲೆ ಬಹಳ ಜಾಣ್ಮೆಯಿಂದ ತಯಾರು ಮಾಡಿರುವಂತಹ ಆಯವ್ಯಯ ಪತ್ರ ಇದು ಎಂದು ನಾನು ನನ್ನ ಪಕ್ಷದ ಪರವಾಗಿ ಹೇಳಿಕೆ ಕೊಟ್ಟಿದ್ದೇನೆ. ಈ ಮಾತನ್ನು ಹೇಳುವುದಕ್ಕೆ 3 ಕಾರಣಗಳಿವೆ. ಈ ಆಯವ್ಯಯ ಪತ್ರದಲ್ಲಿ ಕೊಟ್ಟಿರುವಂತಹ ರಿಯಾಯಿತಿಗಳಲ್ಲಿ ಬಡವರಿಗೆ ಸಿಗುವಂತಹ ಕೆಲವು ರಿಯಾಯಿತಿಗಳಿದ್ದರೂ ಕೂಡ ಮತ್ತು ಬಡವರಿಗೆ ಅನುಕೂಲವಾಗುವಂತಹ ಕೆಲವು ಕಾರ್ಯಕ್ರಮಗಳಿದ್ದರೂ ಕೂಡ ವರ್ತಕರಿಗೆ ಅದೇ ಸಮಯಕ್ಕೆ ಹಾಗೂ ಎಕ್ಸೈಜ್ ಕಂಟ್ರಾಕ್ಟುದಾರರಿಗೆ ಸಹ ಅನುಕೂಲವಾಗುವಂತಹ ಕೆಲವು ರಿಯಾಯಿತಿಗಳನ್ನು ಇದರಲ್ಲಿ ಕೊಟ್ಟಿದ್ದಾರೆಂಬುದೇ ನನ್ನ ಅಭಿಪ್ರಾಯ. ಇದನ್ನು ಬಹಳ ಹುಷಾರಿನಿಂದ ತಯಾರಿಸಿದ್ದಾರೆ ಮತ್ತೆ ಇದು 182 ಕೋಟಿ ರೂಪಾಯಿಗಳ ಕೊರತೆ ಬಡ್ಜೆಟ್ ಆಗಿದೆ. ಒಟ್ಟು ಕೊರತೆ 269 ಕೋಟಿ ರೂಪಾಯಿಗಳು ಇದರಲ್ಲಿ 87 ಕೋಟಿ ರೂಪಾಯಿಗಳನ್ನು ತೆರಿಗೆ ರೂಪದಲ್ಲಿ ಭರ್ತಿ ಮಾಡಲು ಅವಕಾಶವಿದ್ದರೂ ಸಹ ಇನ್ನುಳಿದ 182 ಕೋಟಿ ರೂಪಾಯಿಗಳನ್ನು ಹಾಗೆಯೇ ಬಿಟ್ಟಿದ್ದಾರೆ. ಇದನ್ನು ಯಾವ ರೀತಿ ಭರ್ತಿ ಮಾಡಲಾಗುತ್ತದೆಂಬುದನ್ನು ಇದರಲ್ಲಿ ಹೇಳಿಲ್ಲ ಇದರಿಂದ ಪರಿಣಾಮ ಏನಾಗುತ್ತದೆ ಎಂಬುದನ್ನು ನಾವು ನೋಡಬೇಕಾಗುತ್ತದೆ. ನಾವು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂಥ ಬಡ್ಜೆಟ್‌ನ್ನು ನೋಡಿದರೆ ಸರ್ಕಾರದವರು ಸಾರ್ವಜನಿಕರಿಗೆ ಕೆಲವಾರು ಸಣ್ಣ ಸಣ್ಣ ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಏನೇನು ರಿಯಾಯತಿಗಳನ್ನು ಕೊಟ್ಟಿದ್ದಾರೆಂದು ನಾನು ಪಟ್ಟಿ ಮಾಡಿ ಹೇಳುವುದಕ್ಕೆ ಹೋಗುವುದಿಲ್ಲ. ಉದಾಹರಣೆಗೆ ನಾನು ಹೇಳುವುದಾದರೆ, ಪುಟ 14 ರಲ್ಲಿ ಹರಿಜನರಿಗೆ ಹಾಗೂ ಹಿಂದುಳಿದ ವರ್ಗದವರಿಗೆ. ದೀನದಲಿತರಿಗೆ ಅನೇಕ ರೀತಿಯ ರಿಯಾಯಿತಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ ನಾವು ಮುಖ್ಯವಾಗಿ ನೋಡುವುದಾದರೆ ಹೆಣ್ಣು ಮಕ್ಕಳಿಗೆ ಸಂಬಂಧಪಟ್ಟಂತಹ ಹಾಸ್ಟಲ್‌ಗಳಿಗೆ 1.25 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 40 ಹಾಸ್ಟಲ್‌ಗಳನ್ನು ಕಟ್ಟಿಸಿಕೊಡುವಂತಹ ಯೋಜನೆಯನ್ನು ಸರ್ಕಾರದವರು ಹಾಕಿಕೊಂಡಿದ್ದಾರೆ. ಮತ್ತೆ ಹೆಣ್ಣು ಮಕ್ಕಳು ಇರುವುದಕ್ಕೆ ಮತ್ತು ಅವರ ವಿದ್ಯಾಭ್ಯಾಸಕ್ಕೆ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಬಹಳ ಸಂತೋಷ ಇದನ್ನು ಯಾರು ಸಹ ವಿರೋಧ ಮಾಡುವುದಕ್ಕೆ ಸಾಧ್ಯವಿಲ್ಲ. ಇನ್ನು ಹರಿಜನ ಮತ್ತು ಗಿರಿಜನರಿಗೆ 50 ಪ್ರೀಮೆಟ್ರಿಕ್ ಹಾಸ್ಟಲ್‌ಗಳನ್ನು ಕಟ್ಟಿಸಿ ಕೊಡುತ್ತೇವೆಂದು ಹೇಳಿದ್ದಾರೆ ಇನ್ನು ಹರಿಜನ ಮತ್ತು ಗಿರಿಜನರ ಅಭಿವೃದ್ಧಿ ಕಾರ್ಪೋರೇಷನ್‌ಗೆ ಕೊಡತಕ್ಕ ಹಣವನ್ನು ಸುಮಾರು 5 ಕೋಟಿ ರೂಪಾಯಿಗಳಿಂದ 10 ಕೋಟಿ ರೂಪಾಯಿಗಳಿಗೆ ಹೆಚ್ಚು ಮಾಡಿದ್ದಾರೆ. ಮತ್ತು ಹರಿಜನ ಕಾಲೇಜು ಹಾಸ್ಟಲ್‌ಗಳಿಗೆ 20 ಟೆಲಿವಿಜನ್ಸ್ ಕೊಡುತ್ತೇವೆಂದು ಹೇಳಿದ್ದಾರೆ. ಇದು ನಮ್ಮ ಮಾನ್ಯ ರಘುಪತಿಯವರಿಗೆ ಸಂತೋಷ ತರುವಂಥ ವಿಚಾರ. ಇನ್ನು ಹರಿಜನ ಮತ್ತು ಗಿರಿಜನರಿಗಾಗಿ ಸುಮಾರು 40 ಟ್ರೈನಿಂಗ್ ಸೆಂಟರ್ಸ್ ತೆರೆಯುತ್ತೇವೆಂದು ಹೇಳಿದ್ದಾರೆ ಇದರಲ್ಲಿ ಬಹಳ ಮುಖ್ಯವಾಗಿ ಹರಿಜನ ಮತ್ತು ಗಿರಿಜನರಿಗೆ ಅನುಕೂಲವಾಗುವಂಥ ಕೆಲಸಕಾರ್ಯಗಳನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ಆದರೆ ಈ ಕಡೆ ಕುಳಿತುಕೊಂಡಿರತಕ್ಕಂಥ ಮಾನ್ಯ ಸದಸ್ಯರು ಹರಿಜನ ಮತ್ತು ಗಿರಿಜನರಿಗೆ ಏನೇನೂ ಸಹಾಯ ಮಾಡಿಲ್ಲನೆಂದು ಹೇಳಿದರು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರವನ್ನು ವಹಿಸಿಕೊಂಡು ಹಿಂದಿನ ಸಲ ತಮ್ಮ ಬಡ್ಜೆಟ್ ಮಂಡಿಸಿದಾಗ ಹೇಳಿದರು, ನಾನು ಹರಿಜನ ಮತ್ತು ಗಿರಿನಜರ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ ಮಾಡುವುದಕ್ಕಾಗಿ ಸರ್ವ ಪ್ರಯತ್ನವನ್ನು ಮಾಡುತ್ತೇನೆಂದು ಹೇಳಿ ಆ ಒಂದು ಜವಾಬ್ದಾರಿಯನ್ನು ಅವರು ತೆಗೆದುಕೊಂಡಿದ್ದರು. ಆದರೆ ಅದೇ ರೀತಿಯ ಒಂದು ಅನುಕೂಲವನ್ನು ಹರಿಜನ ಮತ್ತು ಗಿರಿಜನರಿಗೆ ಮಾಡಿಕೊಟ್ಟಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸು

ತ್ತೇನೆ. ಆದರೆ ಅನುಕೂಲ ಮಾಡಿಕೊಟ್ಟಿದ್ದಾರೆ. ನಾವು ಅವರಿಗೆ ಕಿರೀಟವನ್ನು ಇಡಬೇಕೆಂದು ಈ ಮಾತನ್ನು ಹೇಳುತ್ತಿಲ್ಲ ಆದರೆ ಹರಿಜನ ಮತ್ತು ಗಿರಿಜನರ ಅಭಿವೃದ್ಧಿಯನ್ನು ಮಾಡುವಂಥ ಒಂದು ದಾರಿಯಲ್ಲಿ ಹೆಜ್ಜೆಯನ್ನು ಇಟ್ಟಿದ್ದಾರೆಂದು ನಾನು ಹೇಳುತ್ತೇನೆ.

ಇದರ ಜೊತೆಯಲ್ಲಿ ಹರಿಜನ ಮತ್ತು ಗಿರಿಜನ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡುವಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಇನ್ನು ನಮ್ಮ ಸರ್ಕಾರದವರು ಅಂಗನವಾಡಿಗಳನ್ನು ಪ್ರಾರಂಭ ಮಾಡಿದ್ದಾರೆ. ಆದರೆ ಈ ಅಂಗನವಾಡಿಗಳಲ್ಲಿ ಕೆಲಸ ಮಾಡುವಂಥ ಜನರನ್ನು ನೋಡಿಕೊಳ್ಳುವಂಥ ಶಕ್ತಿ ಮಾತ್ರ ಈ ಸರ್ಕಾರಕ್ಕೆ ಇಲ್ಲ ಸ್ವಾಮಿ ಕೆಲವು ಕಡೆ ಅಂಗನವಾಡಿಗಳಲ್ಲಿ ಕೆಲಸ ಮಾಡುವಂಥ ಹೆಣ್ಣು ಮಕ್ಕಳಿಗೆ ತಿಂಗಳಿಗೆ 50 ರೂಪಾಯಿಗಳಿಂದ ಹಿಡಿದು 150 ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದಾರೆ. ಆದರೆ ಇವತ್ತಿನ ದಿವಸ ನಾವು ನೋಡಿದಾಗ ಈ ಸಂಬಳ ಬಹಳ ಕಡಿಮೆ ಎಂದು ನಾನು ಹೇಳಬೇಕಾಗುತ್ತದೆ. ಸ್ವಾಮಿ ಸಾಮಾನ್ಯವಾಗಿ ಈ ಅಂಗನವಾಡಿಗಳಲ್ಲಿ ಕೆಲಸ ಮಾಡತಕ್ಕಂಥ ಹೆಣ್ಣು ಮಕ್ಕಳು ಕಂಟೋನ್‌ಮೆಂಟ್‌ನಿಂದ ಬರುತ್ತಾರೆ. ಆದರೆ ಸರ್ಕಾರದವರು ಕೊಡುವಂಥ ಸಂಬಳ ಅವರ ಬಸ್ಸು ಚಾರ್ಜ್‌ಗೆ ಸರಿ ಹೋಗುತ್ತದೆ. ಇನ್ನು ಅವರು ಹೊಟ್ಟೆ ಮತ್ತು ಬಟ್ಟೆಗೆ ಏನು ಮಾಡಬೇಕು ? ಅವರು ಬರೀ ಸೇವೆ ಮಾಡುವುದಕ್ಕೆ ಮಾತ್ರ ಬರಬೇಕು. ಅವರು ಅದೂ ಬರೀ ಸಾಮಾಜಿಕ ಸೇವೆ ಮಾತ್ರ ಮಾಡಬೇಕು. ನಾವು ಸರ್ಕಾರವನ್ನು ಏನಾದರೂ ಕೇಳಿದರೆ ಇದು ಕೇಂದ್ರ ಸರ್ಕಾರದ ನೀತಿ ಎಂದು ಮಾನ್ಯ ಮಂತ್ರಿಗಳು ಹೇಳಬಹುದು.

ಸನ್ಮಾನ್ಯ ಉಪಸಭಾಪತಿಯವರು.—ಸ್ವಾಮಿ ಸಾಮಾನ್ಯವಾಗಿ ಅಂಗನವಾಡಿಗಳಲ್ಲಿ ಕೆಲಸ ಮಾಡಲು ಆಯಾ ಪ್ರದೇಶಗಳಲ್ಲಿ ಇರುವವರನ್ನೇ ನೇಮಕ ಮಾಡಿಕೊಳ್ಳಬೇಕೆಂದು ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ನನಗೆ ತಿಳಿದ ಮಟ್ಟಿಗೆ ಈ ಅಂಗನವಾಡಿಗಳಲ್ಲಿ ಕೆಲಸ ಮಾಡುವಂಥ ಹೆಣ್ಣು ಮಕ್ಕಳಿಗೆ ಹೆಚ್ಚು ಅನುಕೂಲ ಸರ್ಕಾರ ಮಾಡಿ ಕೊಡುತ್ತಿಲ್ಲ. ಆದ್ದರಿಂದ ಇವರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಕೇಂದ್ರ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದಲೇ ಆಗಲಿ ಅವರು ಹೆಚ್ಚು ಹಣವನ್ನು ಕೊಡಿಸುವಂಥ ಒಂದು ವ್ಯವಸ್ಥೆ ಮಾಡಬೇಕು. ಇನ್ನು ನಮ್ಮ ಸರ್ಕಾರದವರು ವಿಧವೆಯರಿಗೆ ತಿಂಗಳಿಗೆ 50 ರೂಪಾಯಿಗಳ ಮಾಶಾಸನವನ್ನು ಕೊಡಬೇಕೆಂದು ನಿರ್ಧಾರ ಮಾಡಿದಾರೆ. ಇದು ಬಹಳ ಒಳ್ಳೆಯದು. ಇದನ್ನು ಯಾರೂ ಕೊಡಬಾರದೆಂದು ಹೇಳುವುದಿಲ್ಲ. ಮತ್ತೆ ಕೃಷಿ ಕಾರ್ಮಿಕರಿಗೂ ಕೂಡ 50 ರೂಪಾಯಿಗಳ ಮಾಶಾಸನವನ್ನು ಕೊಡುತ್ತೇವೆಂದು ನಮ್ಮ ಮಾನ್ಯ ಮಂತ್ರಿಗಳು ಹೇಳಿದರು. ಆದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಪಟ್ಟಿಯನ್ನು ತಯಾರು ಮಾಡುವಾಗ ಬಹಳ ಯೋಚನೆ ಮಾಡಿ ತಯಾರು ಮಾಡಿದ್ದಾರೆ. ಅದು ಏನೆಂದರೆ ರಾಜ್ಯದಿಂದ ಮತ್ತು ಕೇಂದ್ರ ಸರ್ಕಾರದಿಂದ ಎರಡು ಬಾಬುಗಳಿಂದ ಬರತಕ್ಕಂಥ ಹಣವನ್ನು ನೋಡಿಕೊಂಡು ಮುಂದಿನ ವರ್ಷದ ಖರ್ಚಿನ ಬಾಬತ್ತುಗಳನ್ನು ಈ ಆಯವ್ಯಯಪಟ್ಟಿಯಲ್ಲಿ ನಮೂದು ಮಾಡಿದ್ದಾರೆ. ಮತ್ತೆ ನಮ್ಮ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಸೂರ್ಯನಾರಾಯಣರಾವ್ ರವರು ಮಾತನಾಡುತ್ತಾ ಕೆಲವಾರು ವಿಷಯಗಳನ್ನು ಹೇಳಿದರು.

ಅವರು ಮಾತನಾಡುತ್ತಾ ವಿದ್ಯಾಭ್ಯಾಸಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೆ. ಮತ್ತು ಆರೋಗ್ಯಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎಂಬುದನ್ನು ನೋಡಬೇಕೆಂದರು. ಮತ್ತೆ ಬೇರೆ ವಿವಿಧ ಇಲಾಖೆಗಳಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ಹಾಗೂ ಮನೆ ಕಟ್ಟಿಕೊಡುವುದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೆಂಬುದನ್ನು ವಿವರಿಸಿ ಹೇಳಿದರು ಹಾಗೂ ಹಿಂದಿನ ವರ್ಷದ ಆಯವ್ಯಯಪಟ್ಟಿಯಲ್ಲಿ ಇಟ್ಟಿರತಕ್ಕಂಥ ಹಣಕ್ಕಿಂತ ಈ ವರ್ಷ ಬಹಳ ಕಡಿಮೆ ಹಣವನ್ನು ಈ ಎಲ್ಲಾ ಬಾಬುಗಳಿಗೆ ಇಟ್ಟಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಆದರೆ ಅದು ನಿಜವೆಂದು ನನಗನಿಸುತ್ತದೆ ಏತಕ್ಕೆಂದರೆ, ಹೋದ ವರ್ಷ 50 ಕೋಟಿ ರೂಪಾಯಿಗಳು ಒಂದು ಬಾಬತ್ತಿಗೆ ಇಟ್ಟಿದಕ್ಕೆ ಮುಂದಿನ ವರ್ಷ 58 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೂ ಕೂಡ ಅದು ಬಹಳ ಕಡಿಮೆ ಹಣವೆಂದು ನಾವು ಹೇಳಬಹುದು. ಏಕೆಂದರೆ, ಹಿಂದಿನ ವರ್ಷದ ಬೆಲೆಗಳಿಗಿಂತ ಈ ವರ್ಷದ ಬೆಲೆಗಳು ಜಾಸ್ತಿಯಾಗಿರುತ್ತವೆ. ಆದ್ದರಿಂದ ಇದು ಏನೂ ಜಾಸ್ತಿಯಾಗುವುದಿಲ್ಲ. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ರೈತರಿಗೆ ನಮ್ಮ ಸರ್ಕಾರದವರು ಅನೇಕ ರಿಯಾಯಿತಿಗಳನ್ನು ಕೊಟ್ಟಿದ್ದಾರೆ ಆದರೂ ಸಹ ರೈತರು ಹೋರಾಟವನ್ನು ಮಾಡುತ್ತಲೇ ಇದಾರೆ. ಇದುವರೆಗೆ ರೈತರಿಗೆ ಸುಮಾರು 70 ಕೋಟಿ ರೂಪಾಯಿಗಳ ರಿಯಾಯಿತಿಯನ್ನು ಸರ್ಕಾರದವರು ಕೊಟ್ಟಿದ್ದಾರೆ. ಆದರೆ ಇವತ್ತಿನ ದಿವಸ ನಮ್ಮ ಆಹಾರಪದಾರ್ಥಗಳ ಬೆಲೆಗಳು ಏನಾಗಿವೆ ಎಂಬುದನ್ನು ಕೂಡ ನಾವು ಯೋಚನೆ ಮಾಡಬೇಕು. ಇವತ್ತು ನಮ್ಮ ದೇಶದಲ್ಲಿ ಬಡತನದ ರೇಖೆಗಿಂತ ಮೇಲೆ ಯಾರೂ ಬಂದಿಲ್ಲ. ಇವತ್ತು ನಮ್ಮ ರಾಜ್ಯದ ಪರ್‌ಕ್ಯಾಪಿಟಾ ಇನ್‌ಕಮ್ ಎಷ್ಟು ಇದೆ ಎಂದು ನೋಡಿದಾಗ ಅದು

ಬಹಳ ಶೋಚನೀಯವಾದ ಪರಿಸ್ಥಿತಿಯಲ್ಲಿ ಇದೆ ಎಂದು ನಾವು ಹೇಳಬಹುದು. ನಮ್ಮ ಸರ್ಕಾರದವರು ಎಕನಾಮಿಕ್ ಸರ್ವೆ ಮಾಡಿ ಒಂದು ಪಟ್ಟಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಆದರೆ ಅದನ್ನು ನಾವು ನೋಡಿದಾಗ ನಮ್ಮ ಪರಾಕ್ಯಾಪಿಟಾ ಇನ್‌ಕಮ್ ಏರುಪೇರು ಆಗಿದೆ ಎಂದು ನಮಗನಿಸುತ್ತದೆ. ಈಗ ನಾನು ಉದಾಹರಣೆಗೆ ಹೇಳುವುದಾದರೆ, 1970–71 ರಲ್ಲಿ ನಮ್ಮ ಪರ್‌ಕ್ಯಾಪಿಟಾ ಇನ್‌ಕಮ್ 600 ಇತ್ತು. ಆ ನಂತರ 1971–72 ರಲ್ಲಿ 670 ಕ್ಕೆ ಹೋಯಿತು. ಮತ್ತೆ 1972–73 ರಲ್ಲಿ 630 ಕ್ಕೆ ಇಳಿಯಿತು. ಅದೇ ರೀತಿ 1973–74 ರಲ್ಲಿ 725 ಕ್ಕೆ ಹೋಯಿತು. ಮತ್ತೆ 1976-77 ರಲ್ಲಿ 620 ಕ್ಕೆ ಇಳಿಯಿತು ಮತ್ತೆ 1978–79 ರಲ್ಲಿ 715 ಕ್ಕೆ ಹೋಯಿತು ಮತ್ತೆ 1980–81 ರಲ್ಲಿ 630 ಕ್ಕೆ ಇಳಿಯಿತು ಮತ್ತೆ ಈಗ 665 ಕ್ಕೆ ಬಂದಿದೆ ಈ ರೀತಿ ವರ್ಷಕ್ಕೆ ಹೆಚ್ಚು ಕಡಿಮೆಯಾಗುತ್ತಾ ಬಂದಿದೆ. ಸರ್ಕಾರ ಮೂಲಭೂತವಾಗಿ ಯಾವುದೇ ಕಾರ್ಯಕ್ರಮಗಳನ್ನು ತೆಗೆದುಕೊಂಡಾಗ್ಯೂ ಕಾರ್ಯಕ್ರಮಗಳು ರಾಜ್ಯದ ವರಮಾನವನ್ನು ಜಾಸ್ತಿ ಮಾಡುವ ಹಾಗೆ ಇರಬೇಕು. ಬಡತನದ ರೇಖೆಯ ಕೆಳಗಡೆ ಇರತಕ್ಕ ಜನರನ್ನು ಬಡತನ ರೇಖೆಯಿಂದ ಮೇಲಕ್ಕೆ ಎತ್ತುವುದಕ್ಕೆ ಎಷ್ಟು ಆದ್ಯತೆ ಕೊಡಬೇಕೋ ಅಷ್ಟು ಆದ್ಯತೆಯನ್ನು ಕೊಟ್ಟಿಲ್ಲ. ಹಿಂದಿನ ಸರ್ಕಾರಗಳು ಸಹ ಆದ್ಯತೆಯನ್ನು ಕೊಟ್ಟುಕೊಂಡು ಬಂದಿಲ್ಲ ಈ ಸರ್ಕಾರ ಕೊಟ್ಟುಕೊಂಡು ಬಂದಿದೆಯೆಂದು ಹೇಳುವುದಕ್ಕೆ ಧೈರ್ಯವಿಲ್ಲ. ಹಿಂದಿನ ಸರ್ಕಾರಗಳು ಆದ್ಯತೆಯನ್ನು ಕೊಟ್ಟಿರುವ ಬಗ್ಗೆ ಯಾವುದೇ ಅಂಕಿ ಅಂಶಗಳು ಇಲ್ಲ ಈಗಿನ ಸರ್ಕಾರ ಕೂಡ ಆದ್ಯತೆಯನ್ನು ಕೊಟ್ಟಿಲ್ಲ. ನೀರಾವರಿ ಯೋಜನೆಗಳ ಬಗ್ಗೆ ಬಹಳ ಪ್ರಸ್ತಾಪ ನಡೆದಿದೆ. 68 ಕೋಟಿ ರೂಪಾಯಿಗಳನ್ನು ಕಾವೇರಿ ಜಲಾನಯನಪ್ರದೇಶಕ್ಕೆ ಕೊಟ್ಟಿದ್ದಾರೆ. ಬಹಳ ಮುಖ್ಯವಾದ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆಗೆ ಜಾಸ್ತಿ ಹಣವನ್ನು ಕೊಟ್ಟಿಲ್ಲ. ಘಟಪ್ರಭಾ ಮತ್ತು ಮಲಪ್ರಭಾ ಯೋಜನೆಗಳು. ಹಿಂದುಳಿದ ಪ್ರದೇಶಗಳಲ್ಲಿರತಕ್ಕ ಯೋಜನೆಗಳಿಗೆ ಹಣವನ್ನು ಕೊಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು ಆದರೆ ಇವರು ಹಣವನ್ನು ಈ ಯೋಜನೆಗಳಿಗೆ ಹೆಚ್ಚು ಕೊಟ್ಟಿಲ್ಲ. ಹಣವನ್ನು ಜಾಸ್ತಿ ಕೊಡಿ ಎಂದು ಕೇಳಿ ಕೇಳಿ ನಮಗೂ ಸಾಕಾಗಿದೆ. ಆ ಭಾಗದಲ್ಲಿ ಕೆಲಸಗಳು ನಡೆಯುತ್ತಿಲ್ಲ. ನಮ್ಮ ರಾಜ್ಯದಲ್ಲಿ ನೀರಾವರಿ ಯೋಜನೆಗಳ ಜೊತೆಗೆ ಬೇರೆ ಬೇರೆ ಯೋಜನೆಗಳು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳು ಜಾಸ್ತಿ ಬೆಳೆಯಬೇಕು. ಈಗಿರತಕ್ಕ ಕೆಲವು ಕೈಗಾರಿಕೆಗಳು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿವೆ. ರಾಜ್ಯದ ಸುತ್ತಲು ಅತಿಮುಖ್ಯವಾಗಿ ಕೈಗಾರಿಕೆಗಳು ಕೋರ್ ಸೆಕ್ಟರ್‌ನಲ್ಲಿ ಬೆಳೆಯಬೇಕು ಕೈಗಾರಿಕೆಗಳು ಜಾಸ್ತಿ ಬಂದರೆ ಪರ್‌ಕ್ಯಾಪಿಟಾ ಜಾಸ್ತಿಯಾಗುತ್ತದೆ. ರಾಜ್ಯದ ವರಮಾನ ಜಾಸ್ತಿಯಾಗುತ್ತದೆ. ವರಮಾನ ಯಾವಾಗ ಜಾಸ್ತಿಯಾಗುತ್ತದೊ ಆವಾಗ ಜನ ಜೀವನ ಮಟ್ಟ ಉತ್ತಮಗೊಳ್ಳುತ್ತದೆ. ಪರ್‌ಕ್ಯಾಪಿಟಾ ವರಮಾನ ಉತ್ತಮಗೊಳಿಸುವುದಕ್ಕೆ ನಮ್ಮ ಆಯವ್ಯಯ ಪತ್ರದಲ್ಲಿ ಗಮನ ಕೊಟ್ಟಿಲ್ಲ. ಲಾಭ ಬರತಕ್ಕ ಭಾಗಕ್ಕೆ ಈ ಆಯವ್ಯಯ ಪತ್ರದಲ್ಲಿ ಪೂರ್ವಬಾವಿಯಾಗಿ ಏನು ಆದ್ಯತೆ ಕೊಡಬೇಕಾಗಿತ್ತೋ, ಆ ಭಾಗಕ್ಕೆ ಹಣವನ್ನು ಬಹಳ ಕಡಿಮೆ ಇಟ್ಟಿದ್ದಾರೆ. ಕೈಗಾರಿಕೆಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ವೀರಪ್ಪ ಮೊಯ್ಲಿಯವರು ಮಾತನಾಡುತ್ತಾ ಒಂದು ಸಾವಿರ ಗ್ರಾಮಗಳಲ್ಲಿ ಒಂದೊಂದು ಕೈಗಾರಿಕಾ ಘಟಕದಂತೆ ಒಂದು ಸಾವಿರ ಕೈಗಾರಿಕಾ ಘಟಕಗಳನ್ನು ತರುತ್ತೇವೆಂದು ಹೇಳಿದ್ದೀರಿ, ಅದರ ಬಗ್ಗೆ ಏನೂ ಕೆಲಸನಡೆದಿಲ್ಲವೆಂದು ಹೇಳಿದ್ದಾರೆ. ನಡೆದಿದೆಯೋ ಬಿಟ್ಟಿದೆಯೋ ಅದು ಬೇರೆ ಸಮಾಚಾರ. ನಿಮ್ಮ ಲೆಕ್ಕಾಚಾರದ ಪ್ರಕಾರ 780 ಕೈಗಾರಿಕಾ ಘಟಕಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ನೀವು ಯಾವ ರೀತಿ ಮಾಡಿದ್ದೀರಿ ? ಜಾದು ಮಾಡಿ ಮಾಡಿದ್ದೀರಾ ? ಯಾವ ರೀತಿ ಮಾಡಿದ್ದಿರೋ ಅದರ ಬಗ್ಗೆ ವಿಚಾರ ಮಾಡಬೇಕಾಗಿದೆ. ನೀವು ಕೈಗಾರಿಕೆಗಳನ್ನು ಜಾಸ್ತಿ ಮಾಡಿದ್ದರೆ ನಮ್ಮ ರಾಜ್ಯದ ಪರಿಸ್ಥಿತಿ ಹೀಗಾಗುತ್ತಿರಲಿಲ್ಲ. ಸರ್ಕಾರ ಮೂಲಭೂತವಾಗಿ ಕೈಗಾರಿಕಾಭಿವೃದ್ಧಿಯ ಬಗ್ಗೆ ಏನೊಂದು ಅಭಿಪ್ರಾಯವನ್ನು ಇಟ್ಟುಕೊಂಡಿದೆ ಅದರ ಬಗ್ಗೆ ಆರ್ಥಿಕ ತಜ್ಞರು ತದ್ವಿರುದ್ಧವಾದ ಅಭಿಪ್ರಾಯವನ್ನು ಹೇಳುತ್ತಾರೆ ಹಿಂದೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಂತಹ ಜನತಾ ಸರ್ಕಾರ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿತ್ತೋ ಆ ಒಂದು ಆಧಾರದ ಮೇಲೆ ನೀವು ಮಾಡಿದ್ದೀರಿ ನಾನು ಕಳೆದ ಸಾರಿ ಆಯವ್ಯಯ ಪತ್ರದ ಮೇಲೆ ಮಾತನಾಡಿದಾಗ ಹಲವಾರು ಸಲಹೆಗಳನ್ನು ಕೊಟ್ಟಿದ್ದೆ. ಈಗ ನೀವು ಒಂದು ಸಾವಿರ ಸಣ್ಣ ಸಣ್ಣ ಕೈಗಾರಿಕೆಗಳನ್ನು ತರುತ್ತೇವೆಂದು ಹೇಳಿದ್ದೀರಿ. ನಾವು ಹೆಚ್ಚು ಹೆಚ್ಚಾಗಿ ಸಣ್ಣ ಕೈಗಾರಿಕೆಗಳನ್ನು ತರುತ್ತಿದ್ದೇವೆಂದು ಹೇಳುತ್ತಿದ್ದೀರಿ. ಉತ್ಪಾದನೆ ಮಾಡುವವರು ಜಾಸ್ತಿಯಾದರೆ, ಕೊಂಡುಕೊಳ್ಳುವವರು ಯಾರು ? ಮೊದಲು ಕೊಂಡುಕೊಳ್ಳುವ ವ್ಯವಸ್ಥೆ ಇರಬೇಕು. ತಯಾರು ಮಾಡತಕ್ಕ ಸಾಮಾನುಗಳ ಕ್ವಾಲಿಟಿ ಸರಿಯಾಗಿರಬೇಕು. ಕ್ವಾಲಿಟಿ ಸರಿಯಾಗಿದ್ದರೆ ಯಾರಾದರೂ ಕೊಂಡುಕೊಳ್ಳುತ್ತಾರೆ. ಕ್ವಾಲಿಟಿ ಸರಿಯಾಗಿಲ್ಲದಿದ್ದರೆ, ನೀವು ಕೊಟ್ಟಿರತಕ್ಕ ಕೋಟ್ಯಾಂತರ ರೂಪಾಯಿಗಳು ಚರಂಡಿಯಲ್ಲಿ ಹರಿದುಹೋಗುತ್ತದೆ. ಯಾವುದೇ ಯೋಜನೆಯನ್ನು

ಹಾಕಬೇಕಾದರೂ ಸರಿಯಾಗಿ ಯೋಚನೆ ಮಾಡಿ ಯೋಜನೆಗಳನ್ನು ಹಾಕಬೇಕೆಂದು ನನ್ನ ಅಭಿಪ್ರಾಯ ಕೈಗಾರಿಕೆ ಮಾಡಬೇಕಾದರೆ ಕೋರ್ ಸೆಕ್ಟಾರ್ ಏನಿದೆ, ಅದನ್ನು ನಮ್ಮ ರಾಜ್ಯದಲ್ಲಿ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ನೋಡಿಕೊಂಡು ಅದಕ್ಕೆ ಬೇಕಾದ ಹಣವನ್ನು ಒದಗಿಸಿಕೊಂಡು ಮಾಡಿದರೆ ಒಳ್ಳೆಯ ಕಾರ್ಯ ಆಗುತ್ತಿತ್ತು ಎಂದು ನನಗನ್ನಿಸುತ್ತದೆ. ಈ ಬಗ್ಗೆ ಕೇಂದ್ರದ ಮೇಲೆ ಒತ್ತಾಯ ತರಬೇಕಾಗಿ ಬರುತ್ತದೆ. ವಿಜಯನಗರ ಉಕ್ಕಿನ ಕಾರ್ಖಾನೆ ಆಗಬೇಕಾಗಿದೆ. ಅದರ ಬಗ್ಗೆ ಮಾತುಕತೆ ನಡೆಯುತ್ತಿದೆ; ಎಂದು ಹೇಳಿದ್ದಾರೆ. ಇವರ ಮಾತು ಕತೆ ಏನಾಗುವುದೋ ಗೊತ್ತಿಲ್ಲ. ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ವಿದ್ಯಾರ್ಥಿಗಳು ನಾನೂರು ಮೈಲಿಯಿಂದ ಸೈಕಲ್ ಮೇಲೆ ಬೆಂಗಳೂರಿಗೆ ಬಂದು "ವಿಜಯನಗರ ಉಕ್ಕಿನ ಕಾರ್ಖಾನೆಯಾಗುವುದು ನಮ್ಮೆಲ್ಲರ ಹಕ್ಕು" ಎಂದು ಕೂಗಿಕೊಂಡು ಬಂದಿದ್ದರು, ಕೇಂದ್ರದ ಮೇಲೆ ಒತ್ತಾಯ ತಂದು ವಿಜಯನಗರ ಉಕ್ಕಿನ ಕೈಗಾರಿಕೆ ಬರುವಂತೆ ಮಾಡಬೇಕಾಗಿದೆ. ನೀವು ಯಾವುದೇ ಕೆಲಸ ಮಾಡುವುದಾದರೆ ಆಧ್ಯತೆಯ ಮೇಲೆ ಹಣವನ್ನು ತೆಗೆದಿರಿಸಬೇಕು. ದೊಡ್ಡ ಕೈಗಾರಿಕೆಗಳ ಜೊತೆಯಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳು ಮಹತ್ತರವಾದ ಪಾತ್ರ ವಹಿಸಬೇಕಾಗಿದೆ. ದೊಡ್ಡ ಕೈಗಾರಿಕೆಗಳ ಜೊತೆಯಲ್ಲಿ ಸಣ್ಣ ಕೈಗಾರಿಕೆಗಳು ಬಂದರೆ ಉಳಿದುಕೊಳ್ಳುತ್ತವೆ. ದೊಡ್ಡ ಕೈಗಾರಿಕೆಗಳ ಜೊತೆಯಲ್ಲಿ ಸಣ್ಣ ಕೈಗಾರಿಕೆಗಳು ಬರದಿದ್ದರೆ ಅವುಗಳು ಉಳಿದುಕೊಳ್ಳುವುದಿಲ್ಲ. ನೀವು ಸಣ್ಣ ಸಣ್ಣ ಕೈಗಾರಿಕೆಗಳನ್ನು ಮಾಡುತ್ತಿರುವುದು ಮುಂದೆ ಭಾರಿ ಸಮಸ್ಯೆಯಾಗಬಹುದೆಂದು ನನ್ನ ಅಭಿಪ್ರಾಯ. ಎಕನಾಮಿಕ್ ಸರ್ವೇ ಅದರಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ, ಅದನ್ನು ನೀವು ಯೋಚನೆ ಮಾಡಬೇಕಾದ ಪರಿಸ್ಥಿತಿ ಬಂದಿದೆ ನಿಮ್ಮ ಅಳತೆಗೋಲು ಯಾವ ರೀತಿ ಇದೆ ? ನಮ್ಮ ರಾಜ್ಯದ ಬಡ್ಜೆಟ್ ಆಗಲಿ, ನಮ್ಮ ರಾಜ್ಯದ ಬೆಳವಣಿಗೆ ಆಗಲಿ ಎಷ್ಟು ದೂರ ಹೋಗಿದೆ? ಅಭಿವೃದ್ಧಿ ಯೋಜನೆಗಳಿಗೆ ಅಭಿವೃದ್ಧಿಯೇತರ ಯೋಜನೆಗಳಿಗೆ ನೀವು ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ ಎನ್ನುವುದು ಬಹಳ ಮುಖ್ಯವಾದ ವಿಷಯ. ಅಭಿವೃದ್ಧಿ ಯೋಜನೆಗಳಿಗೆ ಜಾಸ್ತಿ ಹಣ ಇರಬೇಕು. ಆದರೆ ಅಭಿವೃದ್ಧಿ ಯೋಜನೆಗಳಿಗೆ ನೀವು ಕಡಿಮೆ ಹಣ ಇಟ್ಟಿದ್ದೀರಿ. ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್, ಅಂದರೆ ಸಂಬಳ ಸಾರಿಗೆ ಕೊಡುವುದರಿಂದ ಶೇಕಡ 30 ರಷ್ಟು ಆಗುತ್ತದೆಂದು ಹೇಳುತ್ತಾರೆ. ವರ್ಷೇ ವರ್ಷೆ ಯಾವುದಕ್ಕೆ ಖರ್ಚು ಜಾಸ್ತಿಯಾಗುತ್ತಿದೆ ? ಅಭಿವೃದ್ಧಿ ಯೋಜನೆಗಳಿಗೆ ಹಣ ಏತಕ್ಕೋಸ್ಕರ ಕಡಿಮೆಯಾಗುತ್ತಿದೆ ಎಂಬುದನ್ನು ಕಂಡುಹಿಡಿದುಕೊಳ್ಳಬೇಕು. ಪ್ರತಿಯೊಂದು ಯೋಜನೆಯನ್ನು ಕಾರ್ಯಗತ ಮಾಡತಕ್ಕ ಜವಾಬ್ದಾರಿ ಸರ್ಕಾರದ್ದು. ಯಾವರೀತಿ ಮಾಡಬೇಕು ಎನ್ನುವ ಬಗ್ಗೆ ಸರ್ಕಾರ ಯೋಜನೆ ಮಾಡಬೇಕು. ನಿಮ್ಮ ಸಚಿವ ಸಂಪುಟ ಇದರ ಕಡೆಗೆ ಗಮನ ಹರಿಸಬೇಕು. ನಿಮ್ಮ "ಥಿಂಕ್ ಟ್ಯಾಂಕ್" ಏನಿದೆ ಅದು ಇದರ ಬಗ್ಗೆ ಯೋಜನೆ ಮಾಡಿದೆಯೋ ಏನೋ ಗೊತ್ತಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ನಮ್ಮ ಬಡ್ಜೆಟ್ ಹಣದಲ್ಲಿ ಸಾಲಕ್ಕಾಗಿ 70 ಪರ್ಸೆಂಟ್ ಹೋಗುತ್ತದೆ. ನಮ್ಮ ಖರ್ಚಿಗೆ ಉಳಿಯತಕ್ಕಂತಹದ್ದು 30 ಪರ್ಸೆಂಟ್ ಮಾತ್ರ. ಇರತಕ್ಕ 30 ಪರ್ಸೆಂಟ್ ಹಣದಲ್ಲಿ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಆಗುತ್ತದೆಯೇ ? ಮಾನ್ಯ ಮುಖ್ಯಮಂತ್ರಿಗಳ ಭಾಷಣದಲ್ಲಿ 70 ಪರ್ಸೆಂಟ್ ಹಣ ಸಾಲಕ್ಕಾಗಿ ಹೋಗುತ್ತದೆಂದು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—1983-84 ರ ಎಕನಾಮಿಕ್ ಸರ್ವೆ ಅದರಲ್ಲಿರತಕ್ಕದ್ದನ್ನು ಓದುತ್ತೇನೆ. **"Development expenditure during 1983-84 is anticipated at Rs. 1474-32 crores compared to an expenditure of Rs. 1259-50 crores which is higer by Rs. 214-82 crores (17-06 per cent rise). This expected rate or growth in development expenditure is relatively low compared to a rise of 24.56 per cent during the preceding year."** ಎಂದು ಇದೆ. ಅಂದರೆ ಹಿಂದಿನ ವರ್ಷ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಜಾಸ್ತಿ ಇದೆ, ಸಾಧನೆಗಳು ಕಡಿಮೆಯಾಗಿವೆ ಎಂದು ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತಾರೆ. 1983-84 ರಲ್ಲಿ ಎಸ್ಟಿಮೇಟ್ ಕಡಿಮೆಯಾಗಿದೆಯೆಂದು ಅವರೇ ಒಪ್ಪಿಕೊಳ್ಳುತ್ತಾರೆ. ನಿಜ ಪರಿಸ್ಥಿತಿ ಇರುವುದು ಹೀಗೆ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಜಾಸ್ತಿಯಾಗಿದೆ, ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಕಡಿಮೆಯಾಗಿದೆ.

> **Anticipated expenditure on non-development items during 1983-84 is Rs. 595.61 crores as against Rs. 532-00 crores during the preceding year which marks significantly**

**a lower rate of growth of 11-96 per cent compared to 33,83 per cent during the preceding year. This significant decline in the rate of growth in non-development expenditure is mainly due to lower rates of growth auticipated in the expenditure on General Services, loans and Advances and debt appropriation** ಎಂದು ಇದೆ.

ಇದು ಹೇಗೆ ಎಂದರೆ 532 ಕೋಟಿ ಇರುವುದು 595 ಕೋಟಿ ಆಗಿದೆ. ಇವೆರಡನ್ನು ನೋಡಿದರೆ ನನಗನ್ನಿಸುತ್ತದೆ ಏನೆಂದರೆ ಪರಿಸ್ಥಿತಿ ಬಹಳ ಆಶಾದಾಯಕವಾಗಿಲ್ಲ. ಮಾತ್ರವಲ್ಲ ಚಿಂತಾಜನಕವಾದ ಪರಿಸ್ಥಿತಿ ಇರುವುದು ಚೆನ್ನಾಗಿ ಕಂಡುಬರುತ್ತದೆ. ಬಹಳ ಮುಖ್ಯವಾದುದು ಏನೆಂದರೆ ಎಕನಾಮಿಕ್ ಸರ್ವೆಯಲ್ಲಿ ಹೇಳಿದ್ದಾರೆ. ಬಜೆಟ್ಟಿನಲ್ಲಿ ಬಹಳ ಮುಖ್ಯವಾಗಿ ಯೋಚನೆ ಮಾಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ನಿರುದ್ಯೋಗಿ ಯುವಕರು ಯಾರಿದ್ದಾರೆ ಅಂತಹವರಿಗೆ ಅನುಕೂಲ ಆಗಬೇಕು. ಈ ಉದ್ಯೋಗ ಸಮಸ್ಯೆಯನ್ನು ಬಗೆಹರಿಸುವ ಯೋಜನೆಯಲ್ಲಿ ಹೋಗಬೇಕು. ಆದರೆ ಈಗೇನು ಆಗುತ್ತಿದೆ ಎಂದರೆ ಇದಕ್ಕೆ ವಿರುದ್ಧವಾಗಿ ಆಗುತ್ತಿದೆ. ಉದ್ಯೋಗಾವಕಾಶ ಕಡಿಮೆಯಾಗುತ್ತಿದೆ. ಅದರ ಪರಿಣಾಮವಾಗಿ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುತ್ತಿದೆ. ಈ ಪರಿಸ್ಥಿತಿ ನಮ್ಮ ರಾಜ್ಯದಲ್ಲಿದೆಯೆಂದು ಎಕನಾಮಿಕ್ ಸರ್ವೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ನಿರುದ್ಯೋಗದ ಬಗ್ಗೆ ಹೇಳುವುದಾದರೆ, ಇವರು ಕೊಟ್ಟಿರುವ ಭಗವದ್ಗೀತೆಯಿಂದ ಓದುತ್ತೇನೆ...

ಶ್ರೀ ಗೋವಿಂದ ಪಿ. ಒಡೆಯರಾಜ್.--ನಿಮಗೆ ನಿಜವಾದ ಭಗವದ್ಗೀತೆಯಲ್ಲಿ ನಂಬಿಕೆ ಇಲ್ಲ ಅಂತ ಕಾಣುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.---1982-93 ರ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ವಾರಕ್ಕೆ ಒಂದು ಸಲ ಕೆಲಸ ಮಾಡುವವರು. ಹಾಗೂ ದಿನಕ್ಕೆ ಒಂದು ಸಲ ಕೆಲಸ ಮಾಡುವವರ ಬಗ್ಗೆಯೂ ಅಂಕಿಅಂಶಗಳನ್ನು ಕೊಟ್ಟಿದ್ದರೆ ಯಾಶ್ಯುಯಲ್ ಸ್ಟೇಟಸ್‌ನಲ್ಲಿ ಕೆಲಸ ಮಾಡುವವರು 1982 ರಲ್ಲಿ 5.53 ಲಕ್ಷ ಇದ್ದಾರೆ,

ಶ್ರೀ ಬಿ. ಬಿ. ಚಿಮ್ಮನಕಟ್ಟಿ.--ಅಧ್ಯಕ್ಷರೇ, ಆರು ಗಂಟೆಯಾಗಿದೆ.

ಉಪಾಧ್ಯಕ್ಷರು.--ಬೆಳಿಗ್ಗೆ ಸಭಾಧ್ಯಕ್ಷರು ಪ್ರಕಟಿಸಿರುವ ಪ್ರಕಾರ ಚರ್ಚೆ ಇವತ್ತು ಮುಗಿಯಬೇಕಾಗಿದೆ. ಇದು ಮಾನ್ಯ ರಂಗನಾಥ್ ಅವರಿಗೆ ಗೊತ್ತಿದೆ. ಮಾನ್ಯ ಕೃಷ್ಣನ್ ಅವರಿಗೆ ಮಾತನಾಡಲಿಕ್ಕೆ ಇನ್ನು ಹದಿನೈದು ನಿಮಿಷ ಸಾಕಲ್ಲ ?

ಶ್ರೀ ಎಂ. ಎಸ್. ಕೃಷ್ಣನ್.--ಇನ್ನು ಅರ್ಧಗಂಟೆಯಲ್ಲಿ ಮುಗಿಸಲಿಕ್ಕೆ ಪ್ರಯತ್ನಿಸುತ್ತೇನೆ.

ಉಪಾಧ್ಯಕ್ಷರು.--ಮಾನ್ಯ ಕೃಷ್ಣನ್ ಅವರು ಪೂರ್ಣ ಮಾಡಿಬಿಡಲಿ. ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ನಿಮ್ಮ ಪಕ್ಷದ ಸದಸ್ಯರಿಗೆ ಬಹಳ ಜಾಸ್ತಿ ಟೈಂ ಕೊಟ್ಟಿದ್ದೇವೆ. ಮಾನ್ಯ ಕೃಷ್ಣನ್ ಅವರು ಬಹಳ ಅರ್ಥಪೂರ್ಣವಾಗಿ ಮಾತನಾಡುತ್ತಿದ್ದಾರೆ.

ಶ್ರೀ ಗೋವಿಂದ ಪಿ. ಒಡೆಯರಾಜ್.--ದುರ್ದೈವದ ಸಂಗತಿ ಎಂದರೆ ಆಡಳಿತ ಪಕ್ಷದ ಕಡೆಯಿಂದ ಇದರ ಬಗ್ಗೆ ಮಾತನಾಡುವವರು ಯಾರೂ ಇಲ್ಲ.

ಉಪಾಧ್ಯಕ್ಷರು.--ಮಾನ್ಯ ಕೃಷ್ಣನ್ ಅವರು ಬಹಳ ಅರ್ಥಪೂರ್ಣವಾಗಿ ಮಾತನಾಡುತ್ತಿದ್ದಾರೆ. ಅವರು ನಿಮಗೆ ಸಪೋರ್ಟ್ ಕೊಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.---ಮಾನ್ಯ ಅಧ್ಯಕ್ಷರೇ, ಇನ್ನರ್ಧ ಗಂಟೆಯಲ್ಲಿ ಮುಗಿಸುತ್ತೇನೆ.

ಉಪಾಧ್ಯಕ್ಷರು.---ಆಗಬಹುದು ಮಾತನಾಡಿ.

ಶ್ರೀ ಎಂ. ಎಸ್. ಕೃಷ್ಣನ್.--ಬಹಳ ಮುಖ್ಯವಾದ ಅಂಶದ ಬಗ್ಗೆ ನಾನು ಹೇಳುತ್ತಿದ್ದೇನೆ. ಆಯವ್ಯಯ ಪಟ್ಟಿಯಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವಲ್ಲಿ ಎಷ್ಟು ದೂರ ಹಣವನ್ನು ಒದಗಿಸಿದ್ದೀರಿ ? ನಿರುದ್ಯೋಗ ಸಮಸ್ಯೆ ಎಷ್ಟು ದೂರ ಬೆಳೆದಿದೆ ಎಂದರೆ ಎಕನಾಮಿಕ್ ಸರ್ವೆ ಪ್ರಕಾರ ಇದು ಜಾಸ್ತಿಯಾಗಿದೆ. 92 ರಲ್ಲಿ 5 53 ಲಕ್ಷ ಇದ್ದದ್ದು 83ರಲ್ಲಿ 5.66 ಲಕ್ಷ ಆಗಿದೆ. ವೀಕ್ಲಿ ಸ್ಟೇಟಸ್‌ನಲ್ಲಿ 13ಲಕ್ಷ 72 ಸಾವಿರ ಇದ್ದದ್ದು 83 ರಲ್ಲಿ 14 ಲಕ್ಷ ಆಯಿತು. ಡೈಲಿ ಸ್ಟೇಟಸ್‌ನಲ್ಲಿ 6 ಲಕ್ಷ 39 ಸಾವಿರ ಇದ್ದದ್ದು 83 ರಲ್ಲಿ 6 ಲಕ್ಷದ 55 ಸಾವಿರ ಆಯಿತು. ಇಷ್ಟು ಮಾತ್ರವಲ್ಲ 6 ಲಕ್ಷ 31 ಸಾವಿರ ಜನರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮೂಲಕ ರಿಜಿಸ್ಟ್ರೇಷನ್ ಮಾಡಿಕೊಂಡಿದ್ದಾರೆ. ತಮಗೆ ಗೊತ್ತಿರುವ ಹಾಗೆ ಯಾವ ರಾಜ್ಯದಲ್ಲೂ ಕೂಡ ಎಲ್ಲರೂ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗೆ ಹೋಗುವುದಿಲ್ಲ. ಎಕನಾಮಿಕ್ ಸರ್ವೆಯಲ್ಲಿ ತೋರಿಸಿದ ಪ್ರಕಾರ--

"Job seekers in the categories of matriculates and Post-graduates showed an increase of 12·97% and 11·58% respectively." ಎಂದು ಇದೆ. ಬಹಳ ಡೀಟೈಲ್ ಆಗಿ ಕೊಟ್ಟಿದ್ದಾರೆ. ಈಗ ನಿರುದ್ಯೋಗ ಸಮಸ್ಯೆ ಬಹಳ ಹೆಚ್ಚಾಗಿದೆ. ಇದಕ್ಕೆ ಒಂದು ವೈಟ್ ಪೇಪರ್ ಬಂದರೆ ಚೆನ್ನಾಗಿ ಇತ್ತು. ಆದರೆ ವೈಟ್ ಪೇಪರನ್ನು ಕಟ್ಟಿಕೊಂಡು ಏನು ಮಾಡಬೇಕು ? ನಮಗೆ ಬೇಕಾಗಿರುವುದು, ಉದ್ಯೋಗ ಸಮಸ್ಯೆಯನ್ನು ಬಗೆಹರಿಸುವ ದೂರದಲ್ಲಿ ಏನು ಮಾಡಿದ್ದೀರಿ ? ಆದ್ದರಿಂದ ಹುಡುಕಿ ಹುಡುಕಿ ನೋಡಿದರೂ ಕೂಡ ಏನೂ ಕಂಡುಬರಲಿಲ್ಲ. ಒಂದೊಂದು ಹಳ್ಳಿಗೂ ಜಾಬ್ ಅಫರ್‌ಮೇಶನ್ ಸ್ಕೀಮ್ ಇದೆ. ರೂರಲ್ ಎಂಪ್ಲಾಯಮೆಂಟ್ ಹಿಂಡೆ ಗ್ಯಾರಂಟಿ ಸ್ಕೀಮು ಇದೆ. ಆದರೆ ಜನರಿಗೆ ಎಂಪ್ಲಾಯಮೆಂಟ್ ಸಿಕ್ಕಿಲ್ಲ. ಇದಕ್ಕೆ ಏನು ಗ್ಯಾರಂಟಿ ಎಂಬುದು ನನಗೆ ಗೊತ್ತಾಗಲಿಲ್ಲ. ಮಾನ್ಯ ದೇವೇಗೌಡರು ಇದಕ್ಕೆ ಹೇಳಬೇಕು. ಏನು ಸ್ವಾಮಿ ರೂರಲ್ ಎಂಪ್ಲಾಯಮೆಂಟ್ ಗ್ಯಾರಂಟಿ ಸ್ಕೀಮು ಏನಾಗಿದೆ ? ಇದರ ಬಗ್ಗೆ ಅವರು ಮಾತನಾಡುತ್ತಾ ಹೇಳುತ್ತಾರೆಂದು ನಾನು ತಿಳಿದು ಕೊಂಡಿದ್ದೆ. ಹುಡುಕಿ ಹುಡುಕಿ ನೋಡಿದರೂ ಸಹ ಏನೂ ಇಲ್ಲ. ಆದ್ದರಿಂದ ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ನಿಮ್ಮ ವಿಚಾರಧಾರೆ ಯಾವ ಕಡೆಗೆ ಹರಿದಿದೆ ? ಅಲ್ಲಿ ಇಲ್ಲಿ ತೇಪೆ ಹಾಕುವುದು, ಚೂರುಪಾರು ಸೇರಿಸುವುದು ಇದೆಯೇ ವಿನಹ ಅಮೂಲಾಗ್ರವಾದ ದೃಷ್ಟಿಯನ್ನು ಇಟ್ಟುಕೊಂಡುಮಾಡಿಲ್ಲ. ನಮ್ಮ ಬಜೆಟ್ಟಿನ ಮೇಲೆ ಇದು ನಮ್ಮ ಮೂಲಭೂತವಾದ ಟೀಕೆಯಾಗಿದೆ. ಇಷ್ಟು ಮಾತ್ರವಲ್ಲ, ಮನೆಗಳ ಬಗ್ಗೆ ಹೇಳಿದ್ದೀರಿ. ಇದರ ಬಗ್ಗೆ ಮಾನ್ಯ ಸ್ನೇಹಿತರು ಅನೇಕರು ಮಾತನಾಡಿದ್ದಾರೆ ಹಿಂದುಳಿದ ವರ್ಗಗಳಿಗೆ ಆರ್ಥಿಕವಾಗಿ ಹಿಂದುಳಿದವರಿಗೆ ನಾಲ್ಕು ಕೋಟಿಯಲ್ಲಿ 3500 ಮನೆಗಳನ್ನು ಕಟ್ಟಿಸುತ್ತೇವೆ, ಹುಡ್ಕೊದಲ್ಲಿ 12 ಕೋಟಿ 5000 ಮನೆಗಳನ್ನು ಕಟ್ಟಿಸಿಕೊಡಲಾಗುವುದು ಎಂದು ಹೇಳಿದ್ದೀರಿ. ಮತ್ತು 1983-85ರಲ್ಲಿ ಕೊಳಚೆ ಪ್ರದೇಶದ ನಿವಾಸಿಗಳಿಗಾಗಿ ಕರ್ನಾಟಕ ಕೊಳಚೆ ಪ್ರದೇಶ ನಿವಾರಣಾ ಮಂಡಳಿ ಭಾರಿ ಸಂಖ್ಯೆಯ ವಸತಿಗಳನ್ನು ನಿರ್ಮಿಸುವುದು ಎಂದು ಇದೆ. ಈ "ಭಾರಿ ಸಂಖ್ಯೆ" ಏನೆಂದು ನನಗೆ ಗೊತ್ತಾಗಲಿಲ್ಲ. ಇದನ್ನು ನೋಡಿಬಿಟ್ಟರೆ ಎಂಥವರಿಗಾದರೂ ಖಂಡಿತವಾಗಿಯೂ ಮರ್ಯಾದೆ ಬರುವುದಿಲ್ಲ. ಈ ಸರ್ಕಾರಕ್ಕೆ ಇದು ಗೌರವ ತರುವಂಥಾದ್ದಲ್ಲ. 4·2 ಕೋಟಿ ಖರ್ಚು ಮಾಡಿ ಕರ್ನಾಟಕ ರಾಜ್ಯದಲ್ಲಿ 3500 ಮನೆಗಳನ್ನು ಆರ್ಥಿಕವಾಗಿ ಹಿಂದುಳಿದವರಿಗೆ ಕೊಡುತ್ತೇವೆ ಎಂದರೆ ತಾವು ಇದರ ಬಗ್ಗೆ ಸೀರಿಯಸ್ ಆಗಿದ್ದೀರಾ ? ಹುಡ್ಕೋ ಹಾಗೂ ರಾಜ್ಯ ಯೋಜನೆ ಕಾರ್ಯಕ್ರಮಗಳ ಅನ್ವಯ 5000 ಮನೆಗಳನ್ನು ಕಟ್ಟಿಸಿಕೊಡುತ್ತೇವೆ ಎಂದು ಹೇಳಿದ್ದೀರಲ್ಲ. ಆದರೆ ಎಷ್ಟು ದೂರು ಇದರ ಸಮಸ್ಯೆ ಇದೆ ಎಂಬುದನ್ನು ತಿಳಿದುಕೊಳ್ಳಬೇಕು. ಹಾಗೆಂದು ನಾನು ಬೆಂಗಳೂರು ನಗರದ ಬಗ್ಗೆ ಮಾತ್ರ ಮಾತನಾಡುತ್ತೇನೆ ಎಂದು ತಿಳಿದುಕೊಳ್ಳಬಾರದು. ಗ್ರಾಮಾಂತರ ಪ್ರದೇಶಗಳಲ್ಲೂ ಈ ಸಮಸ್ಯೆ ಇದೆ. ಗೃಹನಿರ್ಮಾಣವನ್ನು ದೊಡ್ಡ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕೆಂದು ಎಲ್ಲರೂ ಒಪ್ಪುತ್ತಾರೆ. ಆದಕ್ಕೆ ಆದ್ಯತೆ ಕೊಡಬೇಕೆಂದು ಎಲ್ಲರೂ ಹೇಳುತ್ತೇವೆ. ಮಾನ್ಯ ಬಂಗಾರಪ್ಪನವರು ಕೂಡ ಹೇಳಿದರು. ನಾನೂ ಕೂಡ ಒತ್ತಾಯ ಮಾಡುತ್ತಾ ಹೇಳುತ್ತಿದ್ದೇನೆ ಏನೆಂದರೆ ಇದರ ಬಗ್ಗೆ ಆದ್ಯತೆ ಕೊಟ್ಟಿಲ್ಲ ಎಂದು. ಹೀಗೆ ನಾವು ಕೇಳಿದರೆ ಇದಕ್ಕೆ ಅಷ್ಟೊಂದು ಸಂಪನ್ಮೂಲಗಳು ಇಲ್ಲವೆನ್ನುವ ಅಭಿಪ್ರಾಯವನ್ನು ಅವರು ಖಂಡಿತವಾಗಿಯೂ ಹೇಳುತ್ತಾರೆ. ಸಂಪನ್ಮೂಲಗಳನ್ನು ಪಡೆಯುವುದಕ್ಕೆ ಏನು ಮಾಡಬೇಕೆಂದು ಯೋಚನೆ ಮಾಡಿದ್ದೀರಾ ? ಅದಕ್ಕೆ ಮುಂಚೆ ಎರಡು ವಿಷಯಗಳನ್ನು ಪ್ರಸ್ತಾಪ ಮಾಡಿ ಸಂಪನ್ಮೂಲಗಳ ಬಗ್ಗೆ ಹೇಳುತ್ತೇನೆ. ಒಂದು ಕರ್ನಾಟಕದ ಸಂಸ್ಕೃತ ಮತ್ತು ಕಲೆ ಬೆಳೆಯುವುದಕ್ಕೆ. ಆಡಳಿತ ಭಾಷೆ ಕನ್ನಡ ಆಗಬೇಕು, ಕನ್ನಡಕ್ಕೆ ಆದ್ಯತೆ ಕೊಡಬೇಕು ಎನ್ನುವ ಬಗ್ಗೆ ಯಾರ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಒಂದು ಎಚ್ಚರಿಕೆಯನ್ನು ಕೊಡಬೇಕಾಗುತ್ತದೆ. ಈ ವರ್ಷದ ರಾಜ್ಯೋತ್ಸವದ ವೇಳೆಗೆ ವಿಶ್ವ ಕನ್ನಡ ಸಮ್ಮೇಳನವನ್ನು ನಡೆಸಲು ನಿರ್ಧರಿಸಿದ್ದೀರಿ. "ಈ ವರ್ಷದ ರಾಜ್ಯೋತ್ಸವ ದಿನದಂದು ವಿಶ್ವ ಕನ್ನಡ ಸಮ್ಮೇಳನವನ್ನು ನಡೆಸಲು ನಿರ್ಧರಿಸಿದ್ದೇವೆ. 1984-85ರಲ್ಲಿ ಉರ್ದು ಅಕಾಡೆಮಿ, ಸಾಹಿತ್ಯ ಅಕಾಡೆಮಿ ಹಾಗೂನಾಟಕ ಅಕಾಡೆಮಿಗಳಿಗೆ ಕಟ್ಟಡ ಸಮುಚ್ಚಯ ನಿರ್ಮಿಸಲು ನಿಶ್ಚಯಿಸಿದ್ದೇವೆ. ಇದಕ್ಕಾಗಿ ಆಯವ್ಯಯ ಪತ್ರದಲ್ಲಿ 30 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ" ಆಯವ್ಯಯ ಪತ್ರದಲ್ಲಿ ವಿಶ್ವ ಕನ್ನಡ ಸಮ್ಮೇಳನ, ಉರ್ದು ಅಕಾಡೆಮಿ, ಸಾಹಿತ್ಯ ಅಕಾಡೆಮಿ ಹಾಗೂ ನಾಟಕ ಅಕಾಡೆಮಿಗಳಿಗೆ ಈ 30 ಲಕ್ಷವೋ, ಅಥವಾ ವಿಶ್ವ ಕನ್ನಡ ಸಮ್ಮೇಳನಕ್ಕೆ ಬರೇ ಈ ಹಣವೋ ? ಅಥವಾ ಎರಡಕ್ಕೂ ಬೇರೆಯೋ ? ಕ್ಲೀಯರ್ ಆಗಿ ಇಲ್ಲಿ ತೋರಿಸಿಲ್ಲ. ಎಷ್ಟು ಕೋಟಿ ಖರ್ಚು ಆಗುತ್ತದೆಯೋ ನನಗೆ ಗೊತ್ತಿಲ್ಲ. ಪತ್ರಿಕೆಗಳಲ್ಲಿ ಆರು ಕೋಟಿ ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿದ್ದರು ಮೈಸೂರಿನಲ್ಲಿ ಕಟ್ಟಡಗಳನ್ನು ಕಟ್ಟಿಸುತ್ತಿದ್ದೇನೆ ಎಂದು ಹೇಳಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಸಭೆಯನ್ನು ಕರೆದಿದ್ದರು. ಕಲಾವಿದರು, ಸಾಹಿತಿಗಳು ಬಂದಿದ್ದರು ನಾನು ಕೂಡ

ಹೋಗಿದ್ದೆ. ಅನೇಕ ವಿಷಯಗಳ ಬಗ್ಗೆ ಚರ್ಚೆ ಆಯಿತು. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಬೇಡಿ. ಸಾಹಿತ್ಯದ ಹೆಸರಿನಲ್ಲಿ ದೊಡ್ಡ ಪ್ರಮಾಣದಲ್ಲಿ ರಾಜಕೀಯ ಮಾಡುವುದಕ್ಕೆ ಹಿಂದಿನವರು ಪ್ರಯತ್ನಪಟ್ಟರು' ಅದನ್ನು ಮಾಡಬೇಡಿ' ಎಂದು ರಾಜ್ಯದ ಎಲ್ಲಾ ಸಾಹಿತಿಗಳು ಅಭಿಪ್ರಾಯ ಪಟ್ಟಿದ್ದಾರೆ. ಮೂಲಭೂತವಾಗಿ ನಮ್ಮ ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಬೆಳೆಯುವುದಕ್ಕೆ ಕನ್ನಡ ಸಂಸ್ಕೃತಿ ಬೆಳೆಯುವುದಕ್ಕೆ ಯೋಚನೆ ಮಾಡುವಂತಹ ಸಮ್ಮೇಳನ ಇದಾಗಬೇಕು, ಇಂತಹ ಅನೇಕ ಉಪಯುಕ್ತವಾದ ಸಲಹೆಗಳನ್ನು ಆ ಸಭೆಯಲ್ಲಿ ಅವರು ಕೊಟ್ಟರು.

ಈ ಬಗ್ಗೆ ನಾನೂ ಕೂಡ ಅನೇಕ ಸಲಹೆಗಳನ್ನು ಕೊಟ್ಟಿದ್ದೇನೆ ಆದ್ದರಿಂದ ನಾನು ಕೇಳುತ್ತಿದ್ದೇನೆ. ಈಗಲೂ ಸಹ ನಾನು ಕೇಳುವುದೇನೆಂದರೆ, ಆ ಸಲಹೆಗಳ ಬಗ್ಗೆ ಏನಾಯಿತು ಅನ್ನುವುದನ್ನು ಹೇಳಬೇಕು ನನಗೇನೂ ಈ ವಿಶ್ವ ಕನ್ನಡ ಸಮ್ಮೇಳನ ನಡೆಸುವುದರಲ್ಲಿ ವಿರೋಧ ವೇನೂ ಇಲ್ಲ. ಆದರೆ ಎಷ್ಟು ಬೇಕೋ ಅಷ್ಟು ಖರ್ಚು ಮಾಡಿ ವಿನಾ ಕಾರಣ ಖರ್ಚು ಮಾಡುವುದಕ್ಕೆ ಹೋಗಬೇಡಿ. ಅವರು ಇದರ ಬಗ್ಗೆ ಏನು ಪ್ರೋಗ್ರಾಂ ಹಾಕಿಕೊಂಡಿದ್ದಾರೆ ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವರ ಪ್ರೋಗ್ರಾಂನಂತೆ ಲೆಕ್ಕ ಹಾಕಿಕೊಂಡರೆ ಕೋಟ್ಯಾಂತರ ರೂಪಾಯಿ ಖರ್ಚಾಗುತ್ತದೆ. ಅದರಲ್ಲಿ ಅವರು ಎಷ್ಟೆಷ್ಟು ಖರ್ಚು ಮಾಡುತ್ತಾರೋ ನನಗೆ ಗೊತ್ತಿಲ್ಲ ಒಟ್ಟಿನಲ್ಲಿ ನಾನು ಹೇಳುವುದು ಇಷ್ಟೆ ಆದಷ್ಟು ಖರ್ಚನ್ನು ಕಡಿಮೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ಮುಖ್ಯ ವಿಷಯ ಏನೆಂದರೆ ನೀರಿನ ವಿಷಯ ಈ ಬಗ್ಗೆ ಹೇಳಬೇಕಾದರೆ ಗ್ರಾಮಾಂತರ ಪ್ರದೇಶಕ್ಕಾಗಲಿ ಅಥವಾ ನಗರ ಪ್ರದೇಶಕ್ಕಾಗಲಿ ನೀರಿನ ಪೂರೈಕೆ ಆಗಬೇಕು ಆದರೆ ಗ್ರಾಂತರ ಪ್ರದೇಶದಲ್ಲಿ ನೀರಿನ ಪ್ರಶ್ನೆ ಹೇಳುವುದಕ್ಕೆ ಹೋದರೆ ಬಹಳ ಕಠಿಣವಾಗಿದೆ. ಒಳಚರಂಡಿ ಪ್ರಶ್ನೆ ಹೇಳುವುದಕ್ಕೆ ಹೋದರೆ ಅದರಲ್ಲೂ ಕೆಲವು ಸಮಸ್ಯೆಗಳು ಇವೆ. ಮಾನ್ಯ ಬೈರೇಗೌಡರು ಈ ಬೋರ್ಡ್‌ಗೆ ರಾಜೀನಾಮೆ ಕೊಟ್ಟಿದ್ದಾರೆ.

ಒಬ್ಬ ಸದಸ್ಯರು.—ಅದು ಅಕ್ಸೆಪ್ಟ್ ಆಗಿದೆಯೋ ?

ಶ್ರೀ ಎಂ. ಎಸ್. ಕೃಷ್ಣನ್.—ಅದು ಅಕ್ಸೆಪ್ಟ್ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ ನೀರಿನ ಪೂರೈಕೆ ಇದರಲ್ಲಿ 29 ವಿಲೇಜಸ್‌ಗಳನ್ನು ಸೇರಿಸಿದ್ದಾರೆ. ಒಳಚರಂಡಿ ಕೆಲಸಕ್ಕೆ 4 ಗ್ರಾಮಗಳನ್ನು ಸೇರಿಸಿದ್ದಾರೆ. ಈ 29 ರಲ್ಲಿ ಎಷ್ಟು ಗ್ರಾಮಗಳಲ್ಲಿ ನೀರಿನ ಪೂರೈಕೆ ಆಗಿದೆಯೋ ಗೊತ್ತಿಲ್ಲ. ಈ 4 ಒಳಚರಂಡಿ ಕೆಲಸಗಳನ್ನು ತೆಗೆದುಕೊಂಡ ಮಾತ್ರಕ್ಕೆ ಎಲ್ಲಾ ಗ್ರಾಮಗಳ ಕೆಲಸಗಳೂ ಆಯಿತು ಅನ್ನುವುದು ಲೆಕ್ಕವೇ ? ಎಲ್ಲನ್ನಂತ ಮುಖ್ಯ ಇದಕ್ಕೆ ಎಷ್ಟು ಹಣ ಖರ್ಚು ಮಾಡಿದ್ದೀರಿ ಅದು ಬೇಕು. ಅದಕ್ಕೆ ತಮ್ಮಲ್ಲಿ ನೀರು ಸರಿಹೋದ ಲೆಕ್ಕಾಚಾರ ಇಲ್ಲ. ಅದೇರೀತಿಯಾಗಿ ಗ್ರಾಮಾಂತರ ಪ್ರದೇಶದಲ್ಲಿ ನೀರು ಪೂರೈಕೆ ಮಾಡುತ್ತೇವೆ ಎಂದು ಹೇಳಿದ್ದೀರಿ ಅದಕ್ಕೂ ಸರಿಯಾದ ಲೆಕ್ಕಾಚಾರ ಇಲ್ಲ ಎಷ್ಟು ಗ್ರಾಮಗಳಲ್ಲಿ ಈ ನೀರಿನ ಪೂರೈಕೆ ಆಗಿದೆ ಅನ್ನುವುದನ್ನು ಹೇಳಬೇಕು ಈ ನೀರಿನ ಪೂರೈಕೆಗೆ ಹಣ ಎತಕ್ಕೆ ಕಡಿಮೆ ಇಟ್ಟಿದ್ದೀರೋ ನನಗೆ ಗೊತ್ತಿಲ್ಲ ಈ ನೀರಿನ ಪೂರೈಕೆಗೆ ಹಣ ಇಟ್ಟಿರುವುದು ಕಡಿಮೆ ಅನ್ನುವುದನ್ನು ಮಾನ್ಯ ಬೈರೇಗೌಡರು ಒಪ್ಪುವರೇನು ?

ಶ್ರೀ ಸಿ. ಬೈರೇಗೌಡ.—ಅದು ಕರೆಕ್ಟ್.

ಶ್ರೀ ಎಂ. ಎಸ್. ಕೃಷ್ಣನ್.—ಹಾಗಾದರೆ ನೀವು ಒಳಚರಂಡಿಗೆ ಹೋಗಬೇಡಿ, ಹೊರಚರಂಡಿಗೆ ಬನ್ನಿ. ಈವೊತ್ತಿನ ದಿವಸ ಬೆಂಗಳೂರು ನಗರದಲ್ಲಿ ಈ ನೀರಿಗಾಗಿ ಜನರು ಹಾಹಾಕಾರ ಮಾಡುತ್ತಿದ್ದಾರೆ. ಹೀಗೆಂದು ಹೇಳಿದ ಮಾತ್ರಕ್ಕೆ ಗ್ರಾಮಾಂತರ ಪ್ರದೇಶಕ್ಕೆ ನೀರನ್ನು ಕೊಡುವುದು ಬೇಡ ಎಂದು ಹೇಳುವುದಿಲ್ಲ, ಇಲ್ಲಿ ಬಂದಿರತಕ್ಕಂಥಾ ಶಾಸಕರೆಲ್ಲರೂ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥಾವರೇ ಆ ಜನರ ಪ್ರತಿನಿಧಿಗಳಾಗಿ ಬಂದಿರತಕ್ಕಂಥಾವರೆ, ಅವರೆಲ್ಲಾ ರೈತರ ಮಕ್ಕಳೇ ಆದರೆ ಅವರೆಲ್ಲಾ ಬೆಂಗಳೂರಿನಲ್ಲಿಯೇ ಇದ್ದಾರೆ.

ಶ್ರೀ ಹೆಚ್. ನಾಗನಗೌಡ.—ಸ್ವಾಮಿ, ಕಾವೇರಿ ಸೆಕೆಂಡ್ ಸ್ಟೇಜ್‌ಗೆ 250 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿರತಕ್ಕಂಥಾ 30 ಲಕ್ಷ ಜನಕ್ಕೆ ಇಷ್ಟು ಹಣ ಕೊಟ್ಟಿದ್ದಾರಲ್ಲಾ ಅದೇ 3 ಕೋಟಿ ಜನಸಂಖ್ಯೆ ಇರತಕ್ಕಂಥಾ ಹಳ್ಳಿಗಳಿಗೆ 70 ಕೋಟಿ ರೂಪಾಯಿ ಇಟ್ಟಿದ್ದಾರೆ ಇದನ್ನು ಕೇಳುವುದಕ್ಕೆ ಪ್ರತಿಯೊಬ್ಬರಿಗೂ ಹಕ್ಕು ಇದೆ. ಹೀಗಾದರೆ ನೀರಿನ ಪೂರೈಕೆ ಗ್ರಾಮಾಂತರ ಪ್ರದೇಶದಲ್ಲಿ ಹೇಗಾದೀತು ?

ಶ್ರೀ ಎಂ. ಎಸ್. ಕೃಷ್ಣನ್.—ನಾನು ನೀವು ಕೇಳುವುದನ್ನು ತಪ್ಪು ಎಂದು ಹೇಳುವುದಿಲ್ಲ. ನೀವು

ಹೇಳಿಪ್ರೂ ಸರಿ, ನೀವು ಹೇಳಿದ ಹಾಗೆ ಹಳ್ಳಿಗಳಿಗೂ ನೀರಿನ ಪೂರೈಕೆ ಆಗಬೇಕು. ಆದರೆ ಅದಕ್ಕೂ ಸಹ ಹಣ ಸರಿಯಾಗಿ ಇಟ್ಟಿಲ್ಲ. ಈ ಮಾತನ್ನು ಮಾನ್ಯ ಬೈರೇಗೌಡರೇ ಒಪ್ಪಿಕೊಂಡಿದ್ದಾರೆ. ಆದುದರಿಂದ ನಾನು ಅವರಿಗೆ ಮೊದಲೇ ಹೇಳಿದೆ ನೀವು ಒಳಚರಂಡಿಯಲ್ಲಿ ಇರುವುದು ಬೇಡ ಹೊರಚರಂಡಿಗೆ ಬನ್ನಿ ಎಂದು ಇದರಲ್ಲಿ ಮುಖ್ಯವಾಗಿ ಗ್ರಾಮಾಂತರ ಪ್ರದೇಶದಲ್ಲಿರುವ ರೈತರಿಗೆ ಆದ್ಯತೆ ಕೊಡಬೇಕು, ಅಂದಮಾತ್ರಕ್ಕೆ ನಗರವನ್ನು ಬಿಟ್ಟುಬಿಡಬೇಕು ಅನ್ನುವ ಅರ್ಥವಲ್ಲ. ನನ್ನ ವಾದ ಅದಲ್ಲ ಈ ನೀರಿನ ವ್ಯವಸ್ಥೆಗೆ ಅವರು ಏನು ಹಣ ಖರ್ಚು ಮಾಡುತ್ತಾರೋ ಅದು ಸಾಲದು. ಎಷ್ಟು ಹಣ ಬೇಕೋ ಅಷ್ಟು ಹಣ ಖರ್ಚು ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ಒಟ್ಟಿನಲ್ಲಿ ಹೇಳಬೇಕಾದರೆ ಈ ನೀರಿನ ವ್ಯವಸ್ಥೆ ಈಗ ತೀರ ಕೆಟ್ಟು ಹೋಗಿದೆ ತಮಗೆ ಹೇಳಬೇಕಾದರೆ ಬೆಂಗಳೂರಿನಲ್ಲಿ ಇತ್ತೀಚಿಗೆ ಬಂದ್ ನಡೆಯಿತಲ್ಲಾ, ಆ ದಿವಸ ಬೆಂಗಳೂರಿನ ಜನತೆಗೆ ನೀರೇ ಸಿಕ್ಕಲಿಲ್ಲ. ಹಾಗಾದರೆ ನೀವು ಇದಕ್ಕೆ ಲಕ್ಷಾಂತರ ರೂಪಾಯಿ ಅಲ್ಲ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದರೂ ಪ್ರಯೋಜನವಾಗುವುದಿಲ್ಲ. ತಮ್ಮ ಗಮನಕ್ಕೆ ತರಬೇಕಾದರೆ ರಾಜಾಜಿನಗರದಲ್ಲಿ ಒಂದು ದಿವಸ ನೀರೇ ಇರಲಿಲ್ಲ ಒಂದು ದಿವಸ ತೊರೆಕಾಡಿನಹಳ್ಳಿಯಲ್ಲಿ ಏನೋ ಕೆಟ್ಟುಹೋಗಿದೆ ಎಂದು ನೀರು ಬರಲಿಲ್ಲ ಇನ್ನೊಂದು ದಿವಸ ಇನ್ನೊಂದು ಕಾರಣದಿಂದ ಬರಲಿಲ್ಲ.

ಉಪಾಧ್ಯಕ್ಷರು.--ವಿಷಯವನ್ನೆಲ್ಲಾ ಡಿಮ್ಯಾಂಡ್ ಬಂದಾಗ ಮಾತನಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರು ನಗರದಲ್ಲಿ ನೀರಿಗಾಗಿ ಏನು ಪರದಾಟವಾಗುತ್ತಾ ಇದೆ ಅನ್ನುವುದನ್ನು ಸರ್ಕಾರದ ಮುಂದೆ ತಂದೆ ಅಷ್ಟೆ.

ಇನ್ನು ಈ ಜನತಾ ಮನೆಗಳ ಬಗ್ಗೆ ಹೇಳಬೇಕಾದರೆ ಇದನ್ನು ಯಾವರೀತಿಯಾಗಿ ಕಟ್ಟಿಸಿಕೊಡುತ್ತಾರೋ ಏನೋ ನೋಡಬೇಕು. ಇನ್ನು ಎಲ್ಲಕ್ಕಿಂತ ಮುಖ್ಯವಾಗಿ ಹೇಳಬೇಕಾದರೆ ಪವರ್ ವಿಷಯ ಈಗಾಗಲೇ ಇದರ ಬಗ್ಗೆ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ನಾನು ಅದರಿಂದ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈ ಬಗ್ಗೆ ನಾನು ಹೇಳುವುದು ಇಷ್ಟೆ ವಿದ್ಯುಚ್ಛಕ್ತಿ ಬರಬೇಕು ಎಂದರೆ ಬರೀ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ನಂತ ಸ್ಕೀಂನಿಂದ ಪೂರೈಸುತ್ತೇವೆ ಎಂದು ಅದು ಪ್ರಯೋಜನವಾಗುವುದಿಲ್ಲ ಇದರ ಜೊತೆಗೆ ಥರ್ಮಲ್ ಪ್ರಾಜೆಕ್ಟ್ ಬರಬೇಕು ಜೊತೆಗೆ ನ್ಯೂಕ್ಲಿಯರ್ ಪ್ರಾಜೆಕ್ಟ್‌ನಿಂದಲೂ ಬಂದರೆ ಸಾಧ್ಯವಾಗುತ್ತದೆ. ಈ ಥರ್ಮಲ್ ಪ್ರಾಜೆಕ್ಟ್ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ ನಡೆಸಿದ್ದಾರೆ. ಆದರೆ ಅದಕ್ಕೆ ಕಲ್ಲಿದ್ದಲು ಬೇಕಾಗುತ್ತದೆ, ಕಲ್ಲಿದ್ದಲು ಇಲ್ಲಿ ಸಿಕ್ಕುವುದಿಲ್ಲ. ಆದುದರಿಂದ ಜೊತೆಗೆ ಅಣುಶಕ್ತಿ ಯೋಜನೆಯನ್ನೂ ಸಹ ಉಪಯೋಗ ಮಾಡಿದರೆ ಈ ವಿದ್ಯುತ್ ಪೂರೈಕೆ ಮಾಡಬಹುದು. ಕೇಂದ್ರ ಸರ್ಕಾರದ ಒಂದು ಜವಾಬ್ದಾರಿ ಇದೆ ಅವರ ಹೊಣೆಯೂ ಇದೆ. ಇಲ್ಲಿ ಜನತಾ ಪಕ್ಷದ ಸರ್ಕಾರ ಇದೆ ಎಂದು ಹೇಳಿ ಅವರು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಏತಕ್ಕೆಂದರೆ ಈವೊತ್ತು ಇಲ್ಲಿ ಜನತಾ ಸರ್ಕಾರ ಇರಬಹುದು, ನಾಳೆ ಅವರೇ ಬರಬಹುದು, ಯಾವ ಸರ್ಕಾರ ಬಂದರೂ ಕೂಡ ಕರ್ನಾಟಕದ ಜನತೆಗೆ ವಿದ್ಯುತ್ ಪೂರೈಕೆಯನ್ನು ಮಾಡಬೇಕಾಗುತ್ತದೆ. ಆದುದರಿಂದ ಇಲ್ಲಿ ಥರ್ಮಲ ಪ್ರಾಜೆಕ್ಟ್ ಜೊತೆಗೆ ನ್ಯೂಕ್ಲಿಯರ್ ಪ್ಲಾಂಟ್ ಕೂಡ ಇರಬೇಕು. ಇದನ್ನು ಕಾರ್ಯಗತ ಮಾಡುವುದರಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಹೇಳುತ್ತೇನೆ. ಇದಕ್ಕೆ ಈ ಸಭೆಯೂ ಕೂಡ ಬೆಂಬಲ ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇದರ ಜೊತೆಗೆ ಇನ್ನೂ ಒಂದು ಬಹುಮುಖ್ಯವಾದ ವಿಷಯ ಎಂದರೆ ರೈತರಿಗೆ ಏನು ಒಂದು ರಿಯಾಯಿತಿ ಕೊಟ್ಟಿದ್ದೀರಿ ಅದು ಬಹಳ ಸ್ವಾಗತಾರ್ಹವಾದುದೇ. ಅವರಿಗೆ ಬಡ್ಡಿ ಸುಸ್ತಿ ಬಡ್ಡಿಯಲ್ಲಿ ವಿನಾಯಿತಿ ನೀಡಿರುವುದು ಜೊತೆಗೆ ಅವರ ಸಾಲವನ್ನು ಮರುಪಾವತಿ ಮಾಡುವ ಬಗ್ಗೆ ಮಾರ್ಚಿ 31 ರವರೆಗೆ ವಿಸ್ತರಿಸುವುದು ಎಲ್ಲವೂ ಸ್ವಾಗತಾರ್ಹವೇ. ಈ ಬಗ್ಗೆ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ಅವರು ಮಾತನಾಡುವಾಗ ಈ ರೈತರಿಗೆ ಸಾಲ ಮರುಪಾವತಿ ಬಗ್ಗೆ ಟೈಂ ಏನು ಕೊಟ್ಟಿದ್ದೀರಿ ಅದನ್ನು ಜೂನ್ ಕೊನೆಯವರೆಗೆ ಮುಂದುವರಿಸಬೇಕು ಎಂದು ಹೇಳಿದರು. ಅದು ನ್ಯಾಯವೇ, ಆ ರೀತಿ ಮಾಡಬೇಕು ಎಂದು ನಾನೂ ಕೂಡ ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಈ ಟಾಡಿ ವಿಚಾರದ ಬಗ್ಗೆ ಅನೇಕ ಸ್ನೇಹಿತರು ಮಾತನಾಡಿದ್ದಾರೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಸೇಂದಿ ಅಂಗಡಿಗಳನ್ನು ಮಾರಾಟ ಮಾಡುವುದಕ್ಕೆ ನಿಲ್ಲಿಸುತ್ತೇವೆ ಎಂದು ಹೇಳಿದಿರಿ. ಈ ಬಗ್ಗೆ ತಾವು ಸ್ವಲ್ಪ ಯೋಜನೆ ಮಾಡಬೇಕಾಗುತ್ತದೆ. ಈ ಸೇಂದಿ ಅಂಗಡಿಗಳನ್ನು ಮಾರಾಟ ಮಾಡುವುದನ್ನು ನಿಲ್ಲಿಸಿದರೆ ಇದರಿಂದ ಯಾರಿಗೆ ಅನುಕೂಲವಾಗುತ್ತದೆ ಎಂದರೆ ಹೆಚ್ಚಾಗಿ ವೈನ್ಸ್, ವಿಸ್ಕಿ, ಬೀರು, ಬ್ರಾಂದಿ ತಯಾರಿಕರಿಗೆ ಅನುಕೂಲವಾಗುತ್ತದೆ. ಅವರಿಗೆ ಇನ್ನಷ್ಟು ಇದೊಂದ ಪುರಸ್ಕಾರ ಮಾಡಿಕೊಟ್ಟಂತಾಗುತ್ತದೆ. ಅಂಥಾವರಿಗೆ ಅನುಕೂಲ ಮಾಡಿಕೊಡುವುದ ಕ್ಕೋಸ್ಕರ

ಈ ರೀತಿ ಮಾಡುತ್ತಿದ್ದಾರೆ ಅನ್ನುವ ಶಂಕೆ ಬರುತ್ತದೆ. ಏತಕ್ಕೆ ಹೀಗೆ ಮಾಡುತ್ತಿರೋ ಗೊತ್ತಿಲ್ಲ. ಅದರಲ್ಲಿ ತಮಗೆ ಎಷ್ಟು ಭಾಗ ತಮಗೆ ಹೋಗುತ್ತದೋ ಗೊತ್ತಿಲ್ಲ. ಹೀಗೆ ಮಾಡುವುದರಿಂದ ಎಕ್ಸೈಜ್ ಕಂಟ್ರಾಕ್ಟರ್ಸ್‌ಗೆ ಹಾಗೂ ಇನ್ನೂ ಇತರ ಬೇರೆ ಬೇರೆ ಕಂಟ್ರಾಕ್ಟರ್ಸ್‌ಗಳಿಗೆ ತಾವು ಅನುಕೂಲ ಮಾಡಿಕೊಡುತ್ತಿದ್ದೀರೊ ಏನೋ ಅನ್ನುವ ಶಂಕೆ ಬರುತ್ತದೆ.

ಶ್ರೀ ಹೆಚ್. ನಾಗನಗೌಡ.--ಅವರೇನೂ ಮಾಡಿಲ್ಲ, ಹ್ಯಾಂಡ್ ಓವರ್ ಛಾರ್ಜ ಮಾಡಿದ್ದಾರೆ ಅಷ್ಟೆ,

ಶ್ರೀ ಎಂ. ಎಸ್. ಕೃಷ್ಣನ್.--ಆದರೆ ಅವರು ಟೇಕ್ ಓವರ್ ಛಾರ್ಜ್ ಮಾಡಿಲ್ಲವಲ್ಲಾ. ತಾವು ಈ ತರಹ ಮಾಡಿದರೆ ಯಾರು ಗುತ್ತಿಗೆದಾರರು ಇರುತ್ತಾರೋ ಅವರಿಗೆ ಅನುಕೂಲವಾಗುತ್ತದೆ. ದಯವಿಟ್ಟು ಅವರಿಗೆ ನ್ಯಾಯವನ್ನು ಒದಗಿಸಿ ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುತ್ತೇನೆ. ಸರ್ಕಾರಿ ನೌಕರರ ಬಗ್ಗೆ ಒಂದು ಮಾತು ಹೇಳಿದಾರೆ.

ಶ್ರೀ ಕೆ. ಬಿ. ಮಲ್ಲಪ್ಪ.--ಪ್ರೊಹಿಬಿಷನ್ ಹಂತ ಹಂತವಾಗಿ ತೆಗೆಯಬೇಕು ಎನ್ನುವುದನ್ನು ನಮ್ಮ ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಮರಗಳು ಇಲ್ಲದ ಕಡೆ ಹಾಗೆ ಇಟ್ಟುಕೊಳ್ಳಬೇಕೆಂದು ಹೇಳುತ್ತೀರಾ ?

ಶ್ರೀ ಎಂ. ಎಸ್. ಕೃಷ್ಣನ್.--ಪ್ರೊಹಿಬಿಷನ್ ಬಗ್ಗೆ ಮಾತನಾಡಬೇಕೆಂದರೆ ದೀರ್ಘವಾಗಿ ಮಾತನಾಡಬೇಕಾಗುತ್ತದೆ. ಪಾನನಿರೋಧದ ಬಗ್ಗೆ ನನಗೆ ನಂಬಿಕೆ ಇಲ್ಲ. ನಾನು ಹೆಂಡ ಕುಡಿಯೋದಿಲ್ಲ ; ಯಾವುದು ಕುಡಿಯೋದಿಲ್ಲ. ಪಾನನಿರೋಧ ಜಾರಿಗೆ ತರುತ್ತೇವೆ ಎಂದು ಹೇಳುವುದಕ್ಕಿಂತ ಹುಚ್ಚುತನ ಯಾವುದು ಇಲ್ಲ.

ಶ್ರೀ ಎ. ಮುನಿಯಪ್ಪ.--ಕಲಬೆರಕೆ ಹೆಂಡದ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಎಂ. ಎಸ್. ಕೃಷ್ಣನ್.--ಕಲಬೆರಕೆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಿ, ಕಲಬೆರಕೆ ಸಾರಾಯಿ ಕುಡಿದು ಬೆಂಗಳೂರಿನಲ್ಲಿ ಎಷ್ಟು ಜನ ಸತ್ತರು ಎನ್ನುವುದು ಗೊತ್ತಿದೆ. ಒಳ್ಳೆಯ ಹೆಂಡ ಕೊಡಿ.

ಶ್ರೀ ಎ. ಮುನಿಯಪ್ಪ.--ಒಳ್ಳೆಯ ಮರಗಳೇ ಇಲ್ಲ.

ಶ್ರೀ ಕೆ. ಎಚ್. ರಂಗನಾಥ್.--ಈಚೆಗೆ ಕರಾಬು ಭೂಮಿಗಳಲ್ಲಿ ಈಚಲ ಮರಗಳನ್ನು ಹಾಕುತ್ತಿದ್ದಾರೆ ನಮ್ಮ ಕಡೆ ಟ್ರೆಂಚ್ ಹೊಡೆಯುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.--ಹೆಂಡ ಮತ್ತು ಸಾರಾಯಿ ಬಗ್ಗೆ ಆಮೇಲೆ ಚರ್ಚೆ ಮಾಡೋಣ. ಆದರೆ, ಬಡ್ಜೆಟಿನಲ್ಲಿ ಹೇಳಿರತಕ್ಕಂಥ ವಾದವನ್ನು ಒಪ್ಪುವುದಕ್ಕೆ ಆಗುವುದಿಲ್ಲ ; ಇದು ಸರಿಯಾದುದಲ್ಲ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ, ಅಬ್ಕಾರಿ ಶುಲ್ಕವನ್ನು ಹೆಚ್ಚು ಮಾಡುವುದರಿಂದ ಕಳ್ಳಬಟ್ಟಿ ಮದ್ಯ ಮಾರಾಟ ಮಾಡುವುದು ಕಡಿಮೆಯಾಗುವುದಿಲ್ಲ ; ಜೊತೆಗೆ ಅಬ್ಕಾರಿ ಶುಲ್ಕದಲ್ಲೂ ಯಾವ ರೀತಿಯ ಹೆಚ್ಚಳವೂ ಆಗುವುದಿಲ್ಲ. ಇದರಿಂದ ಕಳ್ಳಬಟ್ಟಿ ಮದ್ಯದವರಿಗೆ ಅನುಕೂಲವಾಗುವುದರಿಂದ ಇದನ್ನು ಕೂಡ ಒಪ್ಪುವುದಕ್ಕೆ ಸಾಧ್ಯವಿಲ್ಲ. ಸರ್ಕಾರದವರು ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ಏನು ಮಾಡಬೇಕೆಂಬ ಪ್ರಶ್ನೆ ಇಡಬಹುದು. ರಾಜ್ಯಗಳಲ್ಲಿ ಹಣಕಾಸಿನ ವಹಿವಾಟು ಏನು ನಡೆಸುತ್ತೀರಿ ; ಅದರ ಆಧಾರದ ಮೇಲೆ ಹೆಚ್ಚು ಪಡೆಯುವುದಕ್ಕೆ ತೆರಿಗೆ ಹಾಕಬೇಕು. ಇವತ್ತು 87 ಕೋಟಿ ರೂಪಾಯಿ ಹಾಕಿದ್ದೀರಿ ; ಇದರಿಂದಾಗಿ ಎಷ್ಟು ಜನಗಳಿಗೆ ತೊಂದರೆಯಾಗುತ್ತದೆ. ಮಾರಾಟ ತೆರಿಗೆ ಉಪಕರ 42 ಕೋಟಿ ರೂಪಾಯಿ ; ಮೋಟಾರು ವಾಹನ ತೆರಿಗೆ 8 ಕೋಟಿ ; ಪರಿವರ್ತನ ಜಮ 9 ಕೋಟಿ, ನಗರ ಪೂರೈಕೆಗೋಸ್ಕರ ಒಂದು ಕೋಟಿ ; ಉಳಿದದ್ದು ಬಿಡಿ. 42 ಕೋಟಿ ಏನು ಪಡೆಯುತ್ತಿದ್ದೀರಿ ; ಅದು ಒಂದೇ ಸಾಕು ಹಣದುಬ್ಬರವನ್ನು ಜಾಸ್ತಿ ಮಾಡುವುದಕ್ಕೆ ಅವಕಾಶವಾಗುತ್ತದೆ ; ಇದಕ್ಕೆ ಸರ್ಕಾರದವರೇ ಅವಕಾಶ ಮಾಡುತ್ತಿದ್ದೀರಿ. ಒಂದು ಕಡೆ ಬೆಲೆಗಳು ಜಾಸ್ತಿಯಾಗಿರುವುದನ್ನು ಕಡಿಮೆ ಮಾಡಿ ಅಂದರೆ, ಆ ಕೆಲಸವನ್ನು ಶ್ರೀಮತಿ ಇಂದಿರಾಗಾಂಧಿಯವರು ಮಾಡಬೇಕೆಂದು ಹೇಳುತ್ತೀರಿ. ಮತ್ತೊಂದು ಕಡೆ ಹಣದುಬ್ಬರವನ್ನು ಕಡಿಮೆ ಮಾಡಬೇಕೆಂದು ಹೇಳುತ್ತೀರಿ. ಇವತ್ತು ಹಣದುಬ್ಬರ ಜಾಸ್ತಿ ಮಾಡುವ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಬಡ್ಜೆಟ್ಟನ್ನು ಎಷ್ಟು ಜಾಣ್ಮೆಯಿಂದ ಬರೆದಿದ್ದೀರೋ ವೈಟ್ ಪೇಪರನ್ನು ಕೂಡ ಅಷ್ಟೇ ಜಾಣ್ಮೆಯಿಂದ ಬರೆದಿದ್ದೀರಿ, ಬೆಲೆ ಏರಿಕೆಗೆ ಕಾರಣ ಕರ್ನಾಟಕ ಸರ್ಕಾರವಲ್ಲವೆಂದು ಹೇಳುತ್ತಿದ್ದೀರಿ.

**''The accusations that the Government of Karnataka has been responsible for the spurt in prices within the State are unfounded.**

ಇದಕ್ಕೆ ಕಾರಣ ಯಾರು ? ಆಹಾರಧಾನ್ಯದ ಕೊರತೆ ನಮ್ಮ ರಾಜ್ಯಕ್ಕೆ ಎಷ್ಟು ಇದೆಯೋ ಅಷ್ಟನ್ನು ಕೇಂದ್ರ

ಸರ್ಕಾರದವರು ಕೊಡುತ್ತಿಲ್ಲ, ಇದರಿಂದ ಬೆಲೆಗಳು ಜಾಸ್ತಿಯಾಗುತ್ತಿವೆಯೆಂದು ಹೇಳುತ್ತೀರಿ. ಕೇಂದ್ರ ಸರ್ಕಾರದವರು ಕಾರಣ ಎನ್ನುವಂಥವಾದವನ್ನು ನಾನು ತಿರಸ್ಕರಿಸುತ್ತೇನೆ. ಮೂಲಭೂತವಾಗಿ ಕೇಂದ್ರ ಸರ್ಕಾರದ ಧೋರಣೆ ಬೆಲೆ ಏರಿಕೆಗೆ ಕಾರಣ ಅದು ಸ್ಪಷ್ಟ ಅದನ್ನು ಮಾನ್ಯ ಒಡೆಯರಾಜ್‌ರವರು ಮತ್ತು ರಂಗನಾಥರವರು ಒಪ್ಪಿಕೊಳ್ಳುತ್ತಾರೆ. ಪ್ಯಾರಲಲ್ ಎಕಾನಮಿಯಿಂದ 60 ಸಹಸ್ರ ಕೋಟಿ ರೂಪಾಯಿ ಹಣ ಇದೆ. ಈ ಕಪ್ಪು ಹಣದಿಂದ ಇವತ್ತು ದೇಶದಲ್ಲಿಯೇ ಬೆಲೆಗಳು ಏರುತ್ತಿವೆ. ಸ್ಟೀಲ್ ಮತ್ತು ಕೋಲ್ ಬೆಲೆಯನ್ನು ಏರಿಸುತ್ತಿದ್ದಾರೆ. ಕಪ್ಪು ಹಣಕ್ಕೆ ಯಾರು ಕಾರಣಕರ್ತರಾಗಿದ್ದಾರೆ, ಅವರ ಮೇಲೆ ತಡೆ ಹಾಕುವಂಥ ಜವಾಬ್ದಾರಿ ಅವರದ್ದು ಇದೆ. ಆದರೂ ಈ ಸರ್ಕಾರ ಏನು ಮಾಡುವುದಕ್ಕೆ ಸಾಧ್ಯ ಎನ್ನುವುದು ಮುಖ್ಯವಾದ ವಿಷಯ ಬೆಲೆಗಳನ್ನು ಪೂರ್ತಿಯಾಗಿ ಇಳಿಸುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಬಂಡವಾಳಶಾಹಿ ಸಮಾಜದಲ್ಲಿ, ಆರ್ಥಿಕ ವ್ಯವಸ್ಥೆಯಲ್ಲಿ ಬೆಲೆಗಳನ್ನು ಇಳಿಸುವುದಕ್ಕೆ ಸಾಧ್ಯವಿಲ್ಲ. ಸೋವಿಯಿತ ಯೂನಿಯನ್‌ನಲ್ಲಿ ಜರ್ಮನಿಯಲ್ಲಿ, ಬಲ್ಗೇರಿಯಾದಲ್ಲಿ ಬೆಲೆಗಳನ್ನು ಒಂದೇ ಮಟ್ಟದಲ್ಲಿ ಇಟ್ಟಿದ್ದಾರೆ. ಅಲ್ಲಿ ಸಮಾಜವಾದದ ವ್ಯವಸ್ಥೆಗೆ ತಕ್ಕ ಹಾಗೆ ಎಲ್ಲವೂ ಯತೋಚಿತವಾಗಿ ನಡೆದುಕೊಳ್ಳುತ್ತವೆ. ಇಲ್ಲಿ ಯಾವ ರೀತಿ ಯೋಜನೆ ಮಾಡಿದರೂ ಬೆಲೆಗಳನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಿಲ್ಲ, ಆದರೆ ಏರುತ್ತಿರುವ ಬೆಲೆಗಳನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಮೂಲಭೂತವಾಗಿ ಯೋಚನೆ ಮಾಡಬೇಕಾಗುತ್ತದೆ. ಮೊನ್ನೆ ಮಾನ್ಯ ರಂಗನಾಥ್‌ರವರು ಮಾತನಾಡುತ್ತಾ ನಮ್ಮ ರಾಜ್ಯದಲ್ಲಿ ಆಹಾರಧಾನ್ಯಗಳ ಸಂಗ್ರಹದ ಬಗ್ಗೆ ಹೇಳುತ್ತಿದ್ದರು. ಇವತ್ತು ರಾಗಿ ಬೆಲೆ 2.20 ಪೈಸೆ ಇದೆ. ಸುಗ್ಗಿಯ ಕಾಲದಲ್ಲಿ 1.50 ಪೈಸೆಗೆ ರೈತರು ಕೊಡುವುದಕ್ಕೆ ತಯಾರಿರುತ್ತಾರೆ. ಅದನ್ನು ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ, ನಮ್ಮ ರಾಜ್ಯದಲ್ಲಿ ಬೆಳೆಯುವಂಥ ಅಕ್ಕಿ, ರಾಗಿ ಹಾಗೂ ಜೋಳವನ್ನು ಹೋಲ್‌ಸೇಲ್ ಪರ್ಚೇಸ್ ಮಾಡುವಂಥ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕು. ನಮ್ಮ ರಾಜ್ಯದಲ್ಲಿರತಕ್ಕ ಆಹಾರ ನಿಗಮ ಇದರ ಕಡೆ ಗಮನಕೊಡಬೇಕು. ನ್ಯಾಯವಾದಂಥ ಬೆಲೆಯನ್ನು ರೈತನಿಗೆ ಕೊಟ್ಟು ಕೊಂಡುಕೊಳ್ಳಬೇಕು, ಅದನ್ನು ನ್ಯಾಯ ಬೆಲೆ ಅಂಗಡಿಗಳ ಮೂಲಕ ಮಾರಬೇಕು, ಇದನ್ನು ಬಜೆಟ್ಟಿನಲ್ಲಿ ಪ್ರಾವಿಷನ್ ಮಾಡಿದ್ದರೆ ಜನ ಮೆಚ್ಚುತ್ತಿದ್ದರು.

ಶ್ರೀ ಜಿ. ಬಸವಣ್ಣಪ್ಪ.--ಇವತ್ತು ಸರ್ಕಾರ ಭತ್ತ, ರಾಗಿ ಹಾಗೂ ಜೋಳವನ್ನು 160 ರೂಪಾಯಿಗೆ ಖರೀದಿ ಮಾಡುವುದಕ್ಕೆ ತಯಾರಿದೆ. ಆದರೆ ಮಾರುಕಟ್ಟೆಯಲ್ಲಿ 170-180 ರೂಪಾಯಿ ಇದೆ. ಈ ವರ್ಷ ಹತ್ತು ಸಾವಿರ ಟನ್ ರಾಗಿ, ಹತ್ತು ಸಾವಿರ ಟನ್ ಜೋಳ, 80 ಸಾವಿರ ಟನ್ ಭತ್ತವನ್ನು ಖರೀದಿ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.--ಸ್ವಾಮಿ, ನಿಮ್ಮ ಮಂತ್ಲಿ ಆಫ್ ಟೇಕ್ ಎಷ್ಟು ?

ಶ್ರೀ ಜಿ. ಬಸವಣ್ಣಪ್ಪ.--ಇದು ಬಫರ್ ಸ್ಟಾಕ್.

6-30 P. M.

ಶ್ರೀ ಕೆ ಎಚ್. ರಂಗನಾಥ್.-ಮಾನ್ಯ ಸದಸ್ಯರು ಸಲಹೆ ಮಾಡಿರತಕ್ಕದ್ದು ಏನೆಂದರೆ ಕೆ. ಎಸ್. ಎಫ್. ಸಿ. ಯವರು ಆಹಾರ ಪದಾರ್ಥಗಳನ್ನು ಕೊಂಡುಕೊಂಡು ಪ್ರೈಜ್‌ಗಳನ್ನು ಒಂದು ಹಂತದಲ್ಲಿ ಇಡುವುದಕ್ಕೆ ಆಗುತ್ತಿರಲಿಲ್ಲವೇ ಎಂದು ಒಂದು ಉಪ ಪ್ರಶ್ನೆಗೆ ಉತ್ತರ ಕೊಡುತ್ತಾ 3 ಲಕ್ಷ ಟನ್ ಅಕ್ಕಿಯನ್ನು ಪ್ರಕ್ಯೂರ್‌ಮೆಂಟ್ ಮಾಡಿದ ಮೇಲೆ ಜಿಲ್ಲೆಯಿಂದ ಜಿಲ್ಲೆಗೆ ಸಾಗಿಸುವುದಕ್ಕೆ ಬಿಡುತ್ತೇವೆಂದು ಹೇಳಿದಿರಿ. ನಮಗೆ ಈಗ 10 ಸಾವಿರ ಟನ್ ಬೇಕಾಗುತ್ತದೆಂದು ಹೇಳುತ್ತಿದ್ದೀರಿ ಮಿಕ್ಕದ್ದನ್ನು ಹೇಗೆ ಸಂದೂಗಿಸುತ್ತೀರಿ ? ಎಲ್ಲಿಂದ ನಿಮಗೆ ಮಿಕ್ಕ ಅಕ್ಕಿ ಬರುತ್ತದೆ ? ನಮ್ಮ ದೇಶದಲ್ಲಿ 60 ಸಾವಿರ ಕೋಟಿ ಬ್ಲಾಕ್ ಮನಿ ಇರುವಾಗ ಇವತ್ತು ಕಪ್ಪು ಹಣವನ್ನು ದ್ವಿಗುಣ ಮಾಡಬೇಕಾಗಿದ್ದರೆ ಈ ಆಹಾರ ಧಾನ್ಯಗಳಿಂದಲೇ ಅವರು ಒಂದಕ್ಕೆರಡರಷ್ಟು ಹಣವನ್ನು ದ್ವಿಗುಣ ಮಾಡಿಕೊಳ್ಳುತ್ತಿದ್ದಾರೆ. ಇವತ್ತಿನ ದಿವಸ ಹಳ್ಳಿಗಳಲ್ಲಿ ರೆಗ್ಯುಲೇಟಿಂಗ್ ಮಾರ್ಕೆಟ್‌ನಲ್ಲಿ ಏನಾದರೂ ತಂದು ಮಾರುತ್ತಿದ್ದಾರೆಯೇ ಎಂದರೆ ಆ ಪರಿಸ್ಥಿತಿ ಇವತ್ತು ಕಾಣುತ್ತಿಲ್ಲ. ಇಂಥಾ ಪರಿಸ್ಥಿತಿಯಲ್ಲಿ ತಾವು ಮಾರ್ಚ್‌ನಲ್ಲಿ ಮಾಡುತ್ತೇವೆಂದು ಹೇಳುತ್ತಿದ್ದೀರಿ. ನೀರಾವರಿ ಪ್ರದೇಶದಲ್ಲಿ ಭತ್ತ ಕೊಯ್ಲು ಆಗತಕ್ಕದ್ದು ಜೂನ್ ತಿಂಗಳಲ್ಲಿ ಅಂದರೆ ಏನಾಯಿತು ? ರಬಿ ಕ್ರಾಪ್ ಜೂನ್ ತಿಂಗಳಲ್ಲಿ ಬರುತ್ತದೆಯೆ ? ಮಾರ್ಚ್ ತಿಂಗಳಲ್ಲಿ 3 ಲಕ್ಷ ಟನ್ ಪ್ರೊಕ್ಯೂರಮೆಂಟ್ ಮಾಡಿ ತಾಲ್ಲೂಕ್‌ನಿಂದ ತಾಲ್ಲೂಕ್‌ಗೆ ತೆಗೆದುಕೊಂಡು ಪರವಾನಿಗೆ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಇದು ನಿಮ್ಮ ಧೋರಣೆ ಸರಿಯಾಗುತ್ತದೆಯೇ ? ಇದರಿಂದ ಬೆಲೆ ಜಾಸ್ತಿಯಾಗುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ ಅಷ್ಟೆ.

ಶ್ರೀ ಜಿ. ಬಸವಣ್ಣಪ್ಪ.--ಭತ್ತದ ಮೂವ್‌ಮೆಂಟ್‌ನ ರಿಸ್ಟ್ರಿಕ್ಷನ್ ತೆಗೆಯಬೇಕು ಎನ್ನತಕ್ಕ ನಿಲುವನ್ನು ತೆಗೆದುಕೊಂಡಿದ್ದೇವೆ. ಪ್ಯಾಡಿ ಮೂವ್‌ಮೆಂಟ್‌ನ್ನು ಖಾರೀಫ್ ಸೀಜನ್‌ನಲ್ಲಿ ಮಾತ್ರ.........

ಶ್ರೀ ಕೆ. ಎಚ್. ರಂಗನಾಥ್.--ಖರೀಫ್ ಸೀಜನ್ ಬರತಕ್ಕದ್ದು ಯಾವಾಗ ? ಭತ್ತ ಬರತಕ್ಕದ್ದು ಸೆಪ್ಟೆಂಬರ್ ತಿಂಗಳಲ್ಲಿ ಅಕ್ಟೋಬರ್ ತಿಂಗಳಲ್ಲಿ ಮೇ ಜೂನ್ ತಿಂಗಳಲ್ಲಿ ಆಗುತ್ತದೆಯೇ ? ತುಂಗಭದ್ರಾ ಅಲ್ಲೆಲ್ಲಾ ಯಾವಾಗ ಭತ್ತ ಕೊಯ್ಲು ಆಗುತ್ತದೆ ? ಮೇ ಜೂನ್ ತಿಂಗಳಲ್ಲಿ ಮಾರಾಟ ಮಾಡಿಕೊಂಡು ತೆಗೆದುಕೊಂಡು ಹೋಗಿ ಬಿಟ್ಟಿರುತ್ತಾರೆ. ನೀವು ಚಾಪೆ ಕೆಳಗೆ ನುಸುಳಿದರೆ ರಂಗೋಲೆ ಕೆಳಗೆ ನುಸುಳತಕ್ಕ ಜನರಿದ್ದಾರೆ. ಆದುದರಿಂದ ತಾವು ಹೇಳುವ ಮಾತನ್ನು ಸ್ವಲ್ಪ ಬಿಡಿ ಹಿಡಿದು ಹೇಳತಕ್ಕ ಅಭ್ಯಾಸವನ್ನು ಮಾಡಿದರೆ ಒಳ್ಳೆಯದು ಮತ್ತು ಅಧಿಕಾರಿಗಳನ್ನು ಕನ್‌ಸಲ್ಟ್ ಮಾಡಿ, ಮಂತ್ರಿಮಂಡಲದಲ್ಲಿ ವಿಚಾರಣೆ ಮಾಡಿ ಹೇಳಿದರೆ ಅನುಕೂಲವಾಗುತ್ತದೆ. ಮಾನ್ಯ ಕೃಷ್ಣನ್‌ರವರು ಹೇಳುತ್ತಿರುವ ಹಾಗೆ ಇವತ್ತು ಅಕ್ಕಿ ರೇಟ್ ಕೇಜಿಗೆ 5 ರೂಪಾಯಿಗೆ ಹೋಗಿದೆ. ನಮಗೆ ಗೊತ್ತಿರುವ ಹಾಗೆ ರಾಗಿ ರೇಟ್ 2. ರೂ. 2.10 ಕ್ಕೆ ಏರಿದೆ. ರೈತರು ಕೇವಲ 150-160 ರೂ. ಗಳಿಗೆ ಮಾರಾಟ ಮಾಡಿಕೊಂಡು ಬಿಟ್ಟರು. ಅದನ್ನೇ ಇವತ್ತಿನ ದಿವಸ ವ್ಯಾಪಾರಗಾರರು ಬೆಂಗಳೂರಿಗೆ ಮತ್ತಿತರ ಪಟ್ಟಣಗಳಿಗೆ ತಂದು ಅದನ್ನು 120,220 ರೂ. ಗಳಿಗೆ ಮಾರಾಟ ಮಾಡಿಕೊಂಡು ಲಾಭ ಮಾಡಿಕೊಳ್ಳುತ್ತಿದ್ದಾರೆ. ಅದೇ ನೀವು ಕೆ ಎಸ್. ಎಫ್. ಸಿ. ಯವರಿಂದ ಏತಕ್ಕೆ ಕೊಂಡುಕೊಳ್ಳಬಾರದಾಗಿತ್ತು ? ಹಿಂದೆ ದಿ: ದೇವರಾಜ್ ಅರಸ್‌ರವರು 12 ಕೋಟಿ ಖರ್ಚು ಮಾಡಿಕೊಂಡು ಇಟ್ಟಿದ್ದರು. ಆ ರೀತಿಯಾಗಿ ನೀವು ಏತಕ್ಕೆ ಮಾಡಬಾರದು ?

ಶ್ರೀ ಜಿ. ಬಸವಣ್ಣಪ್ಪ.--ಭತ್ತಕ್ಕೆ ನಾವು ರೇಟ್‌ನ್ನು ನಿಗದಿ ಮಾಡಿದ್ದೇವೆ. ಅದರ ಪ್ರಕಾರವಾಗಿ ಕೊಂಡು ಕೊಳ್ಳುತ್ತೇವೆ. ಮಾನ್ಯ ಸದಸ್ಯರು ಮಾತನಾಡುವಾಗ ಹುಚ್ಚಾಬಟ್ಟೆ ಹೇಳುವುದು ಬೇಡವೆಂದು ಹೇಳಿದರು.

ಶ್ರೀ ಕೆ. ಎಚ್. ರಂಗನಾಥ್.--ಹುಚ್ಚಾಬಟ್ಟೆ ಎಂದು ಹೇಳಲಿಲ್ಲ. ಮಾರ್ಚ್ ತಿಂಗಳಲ್ಲಿ ಅಂತರ್ ಜಿಲ್ಲಾ ಸಾಗಾಣಿಕೆಯನ್ನು ತೆಗೆದು ಹಾಕುತ್ತೇವೆಂದು ಹೇಳಿದಿರಿ ಅದು ಸಾಧ್ಯವೇ ಎಂದು ಹೇಳಿದೆ ಅಷ್ಟೇ ಹೊರತು ಬೇರೆ ಏನೂ ಹೇಳಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.--ಮಂತ್ರಿಗಳವರು ಭತ್ತವನ್ನು ಕೊಂಡುಕೊಳ್ಳುವುದಕ್ಕೆ ಒಂದು ಬೆಲೆಯನ್ನು ನಿಗದಿ ಮಾಡಿದ್ದೇವೆಂದು ಹೇಳುತ್ತಿದ್ದಾರೆ ಬಹಳ ಸಂತೋಷ. ಮೊನ್ನೆ ದಿವಸ ಮಾನ್ಯ ಮಂತ್ರಿಗಳವರು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಏನು ಹೇಳಿದರು ಎಂದರೆ, ಇವತ್ತಿನ ದಿವಸ ಪಟ್ಟಣ ಪ್ರದೇಶಗಳಲ್ಲಿ ಏನು ಫೇರ್ ಪ್ರೈಜ್ ಡಿಪೋಗಳನ್ನು ಮಾಡಿ ಆಹಾರಧಾನ್ಯಗಳನ್ನು ಹಂಚುತ್ತಿದ್ದೀರಿ ಅದೇ ರೀತಿಯಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಹಳ್ಳಿಗಳಲ್ಲಿ ಮಾಡಿ, ಅದರ ಅವಶ್ಯಕತೆ ತುಂಬಾ ಇದೆ ಎಂದಾಗ ಆ ರೀತಿಯಾಗಿ ನೆಟ್ ವರ್ಕ್ ಮಾಡಿ ಮಾಡುವುದಕ್ಕೆ ಆಗುವುದಿಲ್ಲವೆಂದು ಉತ್ತರ ಕೊಟ್ಟಿದ್ದೀರಿ ಆದರೆ ಇವತ್ತಿ ದಿವಸ ಬೆಲೆಗಳಿಗೆ ಒಂದು ಬೆಲೆಯನ್ನು ನಿಗದಿ ಮಾಡುವುದಕ್ಕೆ ಹೊರಟ್ಟಿದ್ದೇವೆಂದು ಹೇಳುತ್ತಿದ್ದಾರೆ ಸಂತೋಷ ಅದೇ ರೀತಿಯಾ ನಿಮ್ಮ ಅಭಿಪ್ರಾಯ ಏನಿದೆ ಅದನ್ನು ಇಲ್ಲಿ ಹೇಳಿ ಆ ಕೆಲಸವನ್ನು ನಾಳೆ ಮಾಡದೇ ಹೋದರೆ ಏನು ಹೇಳಬೇಕು ? ಇವರಿಗೆ ಏನು ಅನ್ನಬೇಕು, ಅವರನ್ನು ವಚನ ಭ್ರಷ್ಟರೆಂದು ಹೇಳಬೇಕೋ ಏನೋ ಗೊತ್ತಾಗುತ್ತಿಲ್ಲ ಆ ರೀತಿಯಾಗ ಕೂಡದು. ಇವತ್ತಿನ ದಿವಸ ನೀವು ಬೆಲೆಗಳನ್ನು ಕಡಿಮೆ ಮಾಡುವುದಕ್ಕೆ ಆಗದೇ ಹೋದರೆ ಸ್ವಲ್ಪ ಮಟ್ಟಿಗೆ ಕನ್‌ಶೇಷನ್ ರಿಲೀಫ್‌ಸಿಗುವುದಕ್ಕೆ ಅನಾನುಕೂಲವಾಗುತ್ತದೆ. ಮತ್ತು ಸಿಕ್ಕಾಬಟ್ಟೆ ಬೆಲೆಗಳೂ ಕೂಡ ಜಾಸ್ತಿಯಾಗುತ್ತದೆ. ಮತ್ತು ತಾವು ಬೆಂಗಳೂರು ತುಂಬಾ ಕಾಸ್ಮೊಪಾಲಿಟನ್ ಸಿಟಿ ಎಂದು ಬರೆದುಕೊಂಡಿದ್ದೀರಿ. ಬೆಂಗಳೂರಿನ ಪಟ್ಟಣದ ಕಡೆಗೆ ತಾವು ಎಷ್ಟು ಗಮನವನ್ನು ಹರಿಸಿದ್ದೀರೋ ಅಷ್ಟೇ ಗಮನವನ್ನು ಹಳ್ಳಿಗಳ ಕಡೆಗೂ ಗಮನ ಹರಿಸಬೇಕಾಗಿದೆಂದು ಹೇಳಬೇಕಾಗಿ ಇನ್ನು ಕೆಲವು ಐಟಂಗಳಿಗೆ ತಾವು ವಿನಾಯಿತಿಯನ್ನು ಕೊಟ್ಟಿದ್ದೀರಿ. ಉದಾಹರಣೆಗೆ ರಾಗಿ, ಜೋಳಕ್ಕೆ ಪೂರ್ಣವಾಗಿ ತೆರಿಗೆಯನ್ನು ತೆಗೆದಿದ್ದೀರಿ ಬಹಳ ಒಳ್ಳೆಯದು ಒಪ್ಪಿಕೊಳ್ಳೋಣ. ಹಾಗೇನೇ ಇನ್ನೂ ಒಂದೆರಡು ಐಟಂಗಳಿಗೆ ರಿಯಾಯಿತಿ ಕೊಟ್ಟಿದ್ದೀರಿ. ಒಣಮೆಣಸಿನ ಕಾಯಿಗೂ ಸಹ ಅಂತರ್ ರಾಜ್ಯ ಮಾರಾಟ ತೆರಿಗೆಗೆ ವಿನಾಯಿತಿಯನ್ನು ಕೊಟ್ಟಿದ್ದೀರಿ ಬಹಳ ಸಂತೋಷ ಆ ಮೇಲೆ ಅಧಿಕ ಶಾಖೋತ್ಪನ್ನದ ಸೌದೆ ಒಲೆಗಳ ಮೇಲೆ 3 ವರ್ಷಗಳವರೆಗೆ ತೆರಿಗೆ ವಿನಾಯಿತಿಯನ್ನು ಕೊಟ್ಟಿದ್ದೀರಿ ಅನಂತರ 50 ರೂಪಾಯಿಗಳಿಗಿಂತ ಕಡಿಮೆ ಬೆಲೆಯ ಪ್ರತಿಯೊಂದು ಸಿದ್ಧ ಉಡುಪಿಗೆ ಪೂರ್ಣ ತೆರಿಗೆ ವಿನಾಯಿತಿಯನ್ನು ಕೊಟ್ಟಿದ್ದೀರಿ ಇನ್ನು ಮುಂತಾದ ವಸ್ತುಗಳಿಗೆ ವಿನಾಯಿತಿಯನ್ನು ಕೊಟ್ಟಿದ್ದೀರಿ ಅದನ್ನು ಪೂರ್ಣವಾಗಿ ಓದುವುದಕ್ಕೆ ಹೋಗುವುದಿಲ್ಲ. ಆದರೆ ಮೂಲಭೂತವಾಗಿ ವಿನಾಯಿತಿಯನ್ನು ಕೊಡುವುದು ಸರಿಯೇ ಎನ್ನುವುದೇ ಪ್ರಶ್ನೆಯಾಗಿದೆ. ಇದಕ್ಕೆ ಸರ್ಕಾರದವರು ಹಿಂದೆ ಒಂದು ಕಮಿಟಿಯನ್ನು ರಚನೆ ಮಾಡಿದ್ದರು.

ಅದನ್ನು ತಾವು ಓದಿರಬಹುದೆಂದು ತಿಳಿದುಕೊಂಡಿದ್ದೇನೆ. ಭೂತಲಿಂಗಂ ಕಮಿಟಿ ರಿಪೋರ್ಟ್‌ನಲ್ಲಿ ಈ ಬಗ್ಗೆ ಏನು ಕೊಟ್ಟಿದೆ. ಅದನ್ನು ತಮ್ಮ ಮುಂದೆ ಓದುತ್ತೇನೆ. ಅದು ಈರೀತಿ ಇದೆ.

"3.8. It is desirable that sales tax is given the maximum feasible coverage and that exemptions, where necessary, are given only in accordance with well-defined criteria. A large number of exemptions complicates sales Tax administration and necessitates a higher rate of tax on taxable commodities. Ambiguities in the exemption schedule also offer scope for evasion. Further, where there is a lack of definite criteria for granting exemptions there will be a tendency for exemptions to proliferate as it would be difficult to resist demands for exemptions by referring to any well-settled policy. The Committee, therefore, feels that exemptions form sales tax should be few, should be on the basis of clear criteria and should be free of ambiguity, The Committee strongly feels that only those commodities for which a case can be established on the basis of cold and unsentimental analysis should be included in the exemption list." ಎಂದು

ಇದು ಮಾನ್ಯ ಮುಖ್ಯಮಂತ್ರಿಗಳವರಿಗೂ ಗೊತ್ತಿರಬಹುದು. ಇದನ್ನು ಅವರ ಕಾಲದಲ್ಲಿಯೇ ಮಾಡಿದ್ದು ಎಂದು ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.--ಹೌದು.

ಶ್ರೀ ಎಂ ಎಸ್ ಕೃಷ್ಣನ್.--ಹಾಗಿದ್ದರೆ ನಿಮ್ಮ ಗುರುಗಳನ್ನೇ ಮರೆತಿರಿ. ಏತಕ್ಕೆಂದರೆ ಅವರು ಏನು ಮೇಲಿನಂತೆ ಹೇಳಿದ್ದಾರೆಂಬುದನ್ನೇ ಮರೆತಿದ್ದೀರಿ, 1948 ರಲ್ಲಿ ಸೇಲ್ಸ್ ಟ್ಯಾಕ್ಸ್ ರಿಯಾಯಿತಿ ಮೈಸೂರು ರಾಜ್ಯದಲ್ಲಿ ಇರಲಿಲ್ಲ. ಅನಂತರ ಇದು ರಿಯಾಯಿತಿ ಬಂದಿದ್ದು 1957 ರಿಂದ ಇದು ಈಚೆಗೆ ಹೆಚ್ಚಾಗುತ್ತಾ ಬರುತ್ತಿದೆ. ಆದುದರಿಂದ ನೀವು ಏತಕ್ಕೆ ರಿಯಾಯಿತಿಗಳನ್ನು ಕೊಟ್ಟುಕೊಂಡು ಹೋಗುತ್ತಿದ್ದೀರಿ ಎಂಬುದು ಅರ್ಥವಾಗುತ್ತಿಲ್ಲ. ಆದುದರಿಂದ ಇದು ಸರಿಯಾದುದಲ್ಲವೆಂದು ನನ್ನ ಅಭಿಪ್ರಾಯ.

ಇನ್ನು ಎರಡನೆಯದಾಗಿ, ವಿನಾಯಿತಿ ಏನು ಕೊಟ್ಟಿದ್ದೀರಿ ಅದನ್ನು ಒಪ್ಪುತ್ತೇನೆ. ರಾಗಿ ಮತ್ತು ಜವಾರ್‌ಗೆ ಕೊಟ್ಟಿದ್ದೀರಿ ಅದನ್ನು ಒಪ್ಪಿಕೊಳ್ಳಬಹುದು ಮಿಕ್ಕಿದ್ದವನ್ನು ಒಪ್ಪಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಇದರಲ್ಲಿ 50 ರೂಪಾಯಿಗಿಂತ ಕಡಿಮೆ ಬೆಲೆಯ ಪ್ರತಿಯೊಂದು ಸಿದ್ಧ ಉಡುಪಿಗೆ ಪೂರ್ಣ ತೆರಿಗೆ ವಿನಾಯಿತಿ ಎಂದು ಹೇಳಿದ್ದೀರಿ.

ಈ ಲಿಸ್ಟಿನಲ್ಲಿ ಬಹಳ ಮುಖ್ಯವಾದುದು ಅಂದರೆ ಕೆಲವು ಹೋಟೆಲುಗಳ ಮೇಲೆ ಇವೊತ್ತಿನ ದಿವಸ ಸೇಲ್ಸ್ ಟ್ಯಾಕ್ಸನ್ನು ಕಡಿಮೆ ಮಾಡಿದ್ದೀರಿ, ಟರ್ನ್ ಓವರ್ ಮೇಲೆ ಮಾಡಿದ್ದೀರಿ. ತಮಾಷೆ ಏನೆಂದರೆ ಅನುಬಂಧ 5ರಲ್ಲಿ ಒಟ್ಟು ವಹಿವಾಟು ಒಂದು ಲಕ್ಷ ರೂಪಾಯಿಗಿಂತ ಕಡಿಮೆ ಇರದೆ, ಆದರೆ ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಿಂತ ಕಡಿಮೆ ಇರುವಲ್ಲಿ ಮೂರು ಸಾವಿರ ರೂಪಾಯಿ ಎಂದು ಈಗ ಮಾಡಿದ್ದೀರಿ ಹಿಂದೆ 3,500 ಇತ್ತು, ಈಗ ಅದನ್ನು 3.000ಕ್ಕೆ ರೆಡ್ಯೂಸ್ ಮಾಡಿದ್ದೀರಿ. ಇದಕ್ಕೆ ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ.--ಏತಕ್ಕೆ ಹೀಗೆ ಮಾಡಿದ್ದೇವೆ ಅಂದರೆ, ತ್ರಿ ತಾರಾ ಹೋಟೆಲುಗಳ ಮಟ್ಟಕ್ಕಿಂತ ಕಡಿಮೆ ಮಟ್ಟದ ಹೋಟೆಲುಗಳಿಗೆ ಐದರಿಂದ ನಾಲ್ಕು ಪರ್ಸೆಂಟಿಗೆ ಸೇಲ್ಸ್ ಟ್ಯಾಕ್ಸ್ ಕಡಿಮೆ ಮಾಡಿ ಇಳಿಸಿದ್ದೇವೆ. ಇಳಿಸಿದಾಗ ಒಡಂಬಡಿಕೆ ರಾಜಕಿ ಪ್ರಕಾರ ಕೊಡಬೇಕಾಗುತ್ತದೆ. ಅದು ನಾಲ್ಕು ಪರ್ಸೆಂಟಿಗಿಂತ ಹೆಚ್ಚು ಆಗಕೂಡದು, ಅದೇ ಪ್ರಮಾಣದಲ್ಲಿ ನಾವು ಇದನ್ನು ಇಳಿಸಿದ್ದೇವೆ ಅಷ್ಟೆ.

ಶ್ರೀ ಎಂ ಎಸ್. ಕೃಷ್ಣನ್.--ನಾನು ಇವೊತ್ತಿನ ದಿವಸ ಸೇಲ್ಸ್ ಟ್ಯಾಕ್ಸನ್ನು ಸಣ್ಣ ಸಣ್ಣ ವ್ಯಾಪಾರಸ್ಥರ ಮೇಲೆ, ಹೋಟೆಲುಗಳ ಮೇಲೆ ಕಡಿಮೆ ಮಾಡಿದ್ದು ತಪ್ಪು ಎಂದು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ನಾನು ಹೇಳುವುದೇನೆಂದರೆ "ಒಟ್ಟು ವಹಿವಾಟು ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಅರದೆ ಆದರೆ 2 ಲಕ್ಷ ರೂಪಾಯಿಗಿಂತ ಕಡಿಮೆ ಇರುವಲ್ಲಿ ನಾಲ್ಕು ಸಾವಿರದ ಎಂಟುನೂರು ಎಂದು ಇದೆ. ಹಿಂದೆ 4,500 ಇತ್ತು, ಅದು ಜಾಸ್ತಿಯಾಯಿತು. ಒಂದು ಕಡೆ ಜಾಸ್ತಿಯಾಯಿತು

ಮತ್ತೊಂದು ಕಡೆ ಕಡಿಮೆಯಾಯಿತು. ಕಡಿಮೆ ಯಾರು ಯಾರು ಸಣ್ಣ ಸಣ್ಣ ಹೋಟೆಲುಗಳನ್ನು ನಡೆಸುತ್ತಾರೆ ಅಂತಹವರಿಗೆ ಸೇಲ್ಸ್‌ಟ್ಯಾಕ್ಸ್ ಹಾಕುವುದರಿಂದ ದೊಡ್ಡ ಪ್ರಶ್ನೆ ಬರುತ್ತದೆ ಎಂದು ನಾನು ಹೇಳುವುದಿಲ್ಲ. ಆದರೆ ಸೇಲ್ಸ್‌ಟ್ಯಾಕ್ಸ್ ಹಾಕಿದರೂ ಕೂಡಾ ಇಡ್ಲಿಗೆ, ಕಾಫಿಗೆ ಮಾತ್ರ ಹಾಕುವುದಿಲ್ಲ. ಸೇಲ್ಸ್ ಟ್ಯಾಕ್ಸ್ ಕಡಿಮೆ ಮಾಡಿದರೆ ಇಡ್ಲಿ, ಕಾಫಿ ಬೆಲೆ ಕಡಿಮೆಯಾಗುವುದಿಲ್ಲ. ಆದುದರಿಂದ ಪದಾರ್ಥಗಳ ದರ ಇಳಿಸುವುದಕ್ಕೇನಾದರೂ ವ್ಯವಸ್ಥೆ ಮಾಡಿ ಎಂದು ನಾನು ಕೇಳಿಕೊಳ್ಳುತ್ತೇನೆ. ಇದಕ್ಕೆ ಆಂಧ್ರದಲ್ಲಿ ಎನ್. ಟಿ. ರಾಮಾರಾವ್ ಅವರು ಬೆಲೆ ನಿಗದಿ ಮಾಡಿದ್ದರಿಂದ ಹೋಟೆಲುಗಳನ್ನು ಮುಚ್ಚಿದ್ದರು. ಕೊನೆಗೆ ಏಳು ಸಾಮಗ್ರಿಗಳ ಮೇಲೆ ಸರ್ಕಾರದವರು ಏನು ನಿಗದಿ ಮಾಡಿದ್ದಾರೆ ಅದನ್ನು ಹೋಟೆಲುಗಳವರು ಒಪ್ಪಿಕೊಂಡಿದ್ದಾರೆ. ನೀವೂ ಸಹ ಈ ತರಹ ಕೆಲಸ ಮಾಡಿದರೆ ಸ್ವಲ್ಪಮಟ್ಟಿಗೆ ಸಾಮಾನ್ಯ ಜನ ಮತ್ತು ನಗರಗಳಲ್ಲಿ ಇರತಕ್ಕಂಥ ಜನ ಮೆಚ್ಚಬಹುದು. ನಗರಗಳಲ್ಲಿ ಫ್ಲೋಟಿಂಗ್ ಪಾಪ್ಯುಲೇಷನ್ ಇದೆ, ಅವರು ಮೆಚ್ಚುತ್ತಾರೆ. ಇದರ ಜೊತೆಗೆ ಆಹಾರ ಧಾನ್ಯಗಳ ಬೆಲೆ ಏರಿಕೆಯನ್ನೂ ಕೂಡಾ ತಾವು ಗಮನಕ್ಕೆ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಕೊನೆಯ ವಿಷಯ ಏನೆಂದರೆ ಪ್ರೊಫೆಷನಲ್ ಟ್ಯಾಕ್ಸ್ ಒಂದು ಇದೆ. ಪ್ರೊಫೆಷನಲ್ ಟ್ಯಾಕ್ಸನ್ನು ರದ್ದು ಮಾಡಿ ಎಂದು ಒಂದೇ ಮಾತಿನಲ್ಲಿ ಹೇಳಬೇಕಾಗುತ್ತದೆ. ಇದನ್ನು ಇಟ್ಟುಕೊಂಡು ಪ್ರಯೋಜನ ಇಲ್ಲ, ಅವರು ಒಂದು ಗ್ರಾಫ್ ಕೊಟ್ಟಿದ್ದಾರೆ. ಅದನ್ನು ನೋಡಿದರೆ ನಾಚಿಕೆಯಾಗುತ್ತದೆ. ಇದನ್ನು ಏತಕ್ಕೆ ಇಟ್ಟುಕೊಂಡಿದ್ದೀರಿ, ಅದನ್ನು ರದ್ದು ಮಾಡಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.--ಇದರಿಂದ ಐದೂವರೆ ಕೋಟಿ ರೂಪಾಯಿ ಬರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.--ಸ್ವಾಮಿ, ಯಾರ ಮೇಲೆ ಹಾಕುತ್ತೀರಿ ಅಂದರೆ ಮಧ್ಯಮ ವರ್ಗದ ಜನರ ಮೇಲೆ, ಕಾರ್ಖಾನೆಯ ಕೆಲಸಗಾರರ ಮೇಲೆ ಹಾಕಿದ್ದೀರಿ. ಕಾರ್ಪೊರೇಷನ್‌ರವರು ಹಾಕತಕ್ಕಂಥ ಟ್ಯಾಕ್ಸನ್ನು ಕಿತ್ತುಕೊಂಡು ನೀವು ಹಾಕುತ್ತಿದ್ದೀರಿ. ಕಾರ್ಪೊರೇಷನ್‌ಗೆ ಕೊಡುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.--ಕಳೆದ ಸಲ ಫೈನಾನ್ಷಿಯಲ್ ಬಿಲ್ ಬಂದಾಗ ಇದರ ಬಗ್ಗೆ ವಿವರಣೆ ಕೊಟ್ಟಿದ್ದೇನೆ. 11.50 ಕೋಟಿ ಬರತಕ್ಕ ವರಮಾನ ನಾವು ಕೊಟ್ಟಂಥ ರಿಯಾಯಿತಿಯಿಂದ 5.50 ಕೋಟಿಗೆ ಇಳಿದಿದೆ. 6 ಕೋಟಿ ರಿಯಾಯಿತಿ ಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಅಂದರೆ ಹಿಂದೆ ಇದ್ದ ಕಾನೂನು ಪ್ರಕಾರ ಲೋಕಲ್ ಬಾಡಿಸ್‌ಗೆ ಈ ವರಮಾನ ಹೋಗಬೇಕಾಗಿದೆ. ಈಗ ಲೋಕಲ್ ಅಥಾರಿಟೀಸ್ ಫೈನಾನ್ಸ್ ಬಗ್ಗೆ ಒಂದು ಕಮಿಷನ್ ಮಾಡಿದ್ದೇವೆ. ಅವರು ಏನು ರೆಕಮೆಂಡೇಷನ್ ಕೊಡುತ್ತಾರೆ ಅದನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾದಂಥ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.--ಏನು ನಿರ್ಣಯ ತೆಗೆದುಕೊಳ್ಳುತ್ತಾರೋ ಅದನ್ನು ಕಾದುನೋಡೋಣ. ಇನ್ನು ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58 ವರ್ಷಗಳಿಗೆ ಏರಿಸುವ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಹೋಗುವುದಿಲ್ಲ, ಇದರ ಬಗ್ಗೆ ಯೋಚನೆ ಮಾಡಬೇಕೆಂದು ಹೇಳಿದ್ದಾರೆ. ಎಲ್ಲರೂ ಸೇರಿ ಯೋಚನೆ ಮಾಡೋಣ. ಸರಿಯಾದ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳಿ. ನಾವೆಲ್ಲಾ ಕುಳಿತುಕೊಂಡು ಚರ್ಚೆ ಮಾಡುವುದಕ್ಕೆ ತಯಾರಾಗಿದ್ದೇವೆ. ಇಷ್ಟು ಹೊತ್ತು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.--ಈಗ ಸಭೆಯು ಮೇಲೆದ್ದು ಬೆಳಿಗ್ಗೆ 9-00 ಗಂಟೆಗೆ ಸೇರುವುದು.

ಸಭೆಯು ಆರುಗಂಟೆ ನಲ್ವತ್ತೈದು ನಿಮಿಷಕ್ಕೆ ಮುಕ್ತಾಯವಾಗ, 24 ನೇ ತಾರೀಖು ಫೆಬ್ರವರಿ 1984ರ ಶುಕ್ರವಾರದಂದು ಬೆಳಿಗ್ಗೆ 9-00 ಗಂಟೆಗೆ ಸೇರಲು ನಿಶ್ಚಯಿಸಲಾಯಿತು.

---

† ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.